# ಹಣಕಾಸಿನ ವಿಶ್ವಾಸ

## 40 ದಿನಗಳ ದೇವರ ವಾಕ್ಯದ ಅಭ್ಯಾಸದ ಪಂಕ್ತಿ (ಸಾಲುಗಳು)

### ಪರಿಚಯ:

ಭಾರತದಲ್ಲಿ ಜೀವಿಸುವ ಶಿಷ್ಯರಾಗಿ ನಾವು ಭಾವಿಸುವುದು ಏನೆಂದರೆ ಈ ಪ್ರಪಂಚದಲ್ಲಿರುವ ಎಲ್ಲಾ ದೇಶಗಳಿಗಿಂತ ನಮ್ಮ ದೇಶ ಬಡ ದೇಶವೆಂದು ಅನಿಸುತ್ತದೆ. ಆದ್ದರಿಂದ ನಮಗೆ ಎಡಬಿಡದೆ ಹಣ ಕೊಡುವುದರಲ್ಲಿಯೂ ಹಣಕಾಸು ವಿಷಯದಲ್ಲಿಯೂ ಕಷ್ಟಪಡುತ್ತೇವೆ. ನಾವು ಕೆಲವು ಸಾರಿ ಭಾವಿಸುವುದೇನೆಂದರೆ ಸಭೆಯಲ್ಲಿರುವ ಬೇರೆಯವರಿಗಿಂತ ನನ್ನ ಸ್ಥಿತಿ ಚೆನ್ನಾಗಿಲ್ಲ ಎಂದೆನಿಸುತ್ತದೆ ಮತ್ತು ನನಗೆ ಎಷ್ಟು ಬೇಕಾಗಿದೆಯೋ ಅಷ್ಟು ನನ್ನ ಹತ್ತಿರವಿಲ್ಲಂದೆನಿಸುತ್ತದೆ. ನಾವು ನೋಡುತ್ತೇವೆ ಇದು ನಮ್ಮ ವಿಶ್ವಾಸದ ಮೇಲೆಯೂ ಪರಿಣಾಮ ಬೀರುತ್ತದೆ. ಇದರಿಂದಾಗಿ ನಾವು ನಮ್ಮನ್ನು ಕ್ರಿಸ್ತನಿಗೆ ಒಪ್ಪಿಸುವುದು ಕಷ್ಟವಾಗಿದೆ. ಈ ಹಣಕಾಸಿನ ತೊಂದರೆಯಿಂದಾಗಿ.

ನಾವು ನಮ್ಮನ್ನು ಪರೀಕ್ಷಿಸಿಕೊಳ್ಳಬೇಕಾಗಿದೆ ನಮ್ಮ ಹಣಕಾಸಿನ ವಿಷಯದಲ್ಲಿ ನಾವು ಹೇಗೆ ನಿಭಾಯಿಸುತ್ತಿದ್ದೇವೆ. ನಾವು ಹಾಗಿಂದಾಗೆ ನಮ್ಮ ಹಣಕಾಸಿನ ಪರಿಸ್ಥಿತಿ ಹೇಗಿದೆ ಎಂದು ಪರೀಕ್ಷಿಸಿಕೊಳ್ಳುತ್ತಿರಬೇಕು ಈ ಪ್ರಶ್ನೆಗಳನ್ನು ಕೇಳುವುದರ ಮೂಲಕ ನಾನು ಎಷ್ಟು ಸಂಪಾದನೆ ಮಾಡುತ್ತಿದ್ದೇನೆ? ನನಗೆ ಬರುವ ಆದಾಯದಿಂದ ಸಂತೃಪ್ತಿಯಾಗಿದೆಯಾ? ನಾನು ಇನ್ನು ಎಷ್ಟು ಹೆಚ್ಚು ಸಂಪಾದನೆ ಮಾಡಬೇಕಾಗಿದೆ ನನಗೆ ಬೇಕಾಗುವಷ್ಟು ನಾನು ಸಂಪಾದನೆ ಮಾಡಿದ್ದೀನಿ ಎಂದೆನಿಸುವುದಕ್ಕೆ? ನನ್ನ ಖರ್ಚು ವೆಚ್ಚಗಳು ಯಾವುದು ಮತ್ತು ಎಷ್ಟು? ನಾನು ನನ್ನ ಸಂಪಾದನೆಗೆ ತಕ್ಕಂತೆ ಜೀವಿಸುತ್ತಿದ್ದೀನಾ? ನಾನು ಬುದ್ಧಿವಂತಿಕೆಯಿಂದ ಹಣ ಖರ್ಚು ಮಾಡುತ್ತಿದ್ದೀನಾ? ಹಣ ಖರ್ಚು ಮಾಡುವ ವಿಷಯದಲ್ಲಿ ನಾನು ಮನುಷ್ಯನ ಆವೇಗದಂತೆ ನಿರ್ಧಾರ ಮಾಡುತ್ತಿದ್ದೀನಾ? ಹಣಕಾಸನ್ನು ನಿಭಾಯಿಸುವುದಲ್ಲಿ ನಾನು ಅಪರಾಧ ಪ್ರಜ್ಞೆಯಿಂದ ಜೀವಿಸುತ್ತಿದ್ದೀನಾ? ನಾನು ದೇವರಿಗೆ ಕೊಡುತ್ತಿದ್ದೀನಾ? ಎಷ್ಟು ಕೊಡುತ್ತೇನೆ? ಕಷ್ಟದಲ್ಲಿ ಇರುವರಿಗೆ ಸಹಾಯ ಮಾಡುತ್ತಿದ್ದೀನಾ? ನನ್ನ ಕುಟುಂಬಕ್ಕೆ ಸಾಕಾಗುವಷ್ಟು ನೀಡುತ್ತೇನಾ? ನಿಮ್ಮ ಕುಟುಂಬದಲ್ಲಿ ಒತ್ತಡಗಳಿಗೆ ಉದ್ವೇಗಗಳಿಗೆ ಹಣಕಾಸು ಒಂದು

ಮೂಲ ಕಾರಣವಾಗಿದೆಯೊ? ಸದಾಕಾಲ ಬೇರೆಯವರಿಂದ ನೀವು ಹಣ ಪಡೆಯುತ್ತಿರುವುದನ್ನು ಗಮನಿಸಿದ್ದೀರಾ? ನೀವು ಯಾರಿಂದ ಸಾಲ ಪಡೆದಿರುತ್ತೀರೋ ಅವರಿಗೆ ಹಣ ಹಿಂತಿರುಗಿಸುತ್ತಿದ್ದೀರಾ? ನೀವು ಇನ್ನು ಸಾಲದಲ್ಲೇ ಇದ್ದೀರಾ? ನಿಮ್ಮ ವಸ್ತುಗಳನ್ನು ಅಥವಾ ಬಂಗಾರವನ್ನು ಯಾವ ರೀತಿಯಾಗಿ ಗಿರವಿ ಅಂಗಡಿಯಲ್ಲಿ ಅಡವಿಡುತ್ತಿದ್ದೀರಾ?

ನಮ್ಮೆಲ್ಲರಿಗೆ ಈ ವಿಷಯದಲ್ಲಿ ಸಹಾಯ ಬೇಕಾಗಿದೆ ಇದಕ್ಕೆ ಉತ್ತರವನ್ನು ದೇವರ ವಾಕ್ಯದಲ್ಲಿ ನಾವು ನೋಡಬೇಕು. ನಾವು ಒಳ್ಳೆಯ ಆಲೋಚನೆಗಳನ್ನು ಹುಡುಕಬೇಕು. ಕುಟುಂಬದ ಜೊತೆಗೆ ಮಾತನಾಡಬೇಕು. ನಾವು ನಮ್ಮ ಹಣಕಾಸು ವಿಷಯದಲ್ಲಿ ಹೇಗೆ ನಿಭಾಯಿಸುತ್ತೇವೆ ಎಂದು ಪುನಃ ಪುನಃ ನೋಡಬೇಕು. ಇದರ ಉದ್ದೇಶವೇನೆಂದರೆ ಮುಂಬರುವ 40 ದಿನಗಳು ನಾವು ದೇವರ ಜೊತೆಗೆ ಸಮಯವನ್ನು ಕಳೆಯುವುದು ಮತ್ತು ಅವರ ವಾಕ್ಯವನ್ನು ಧ್ಯಾನ ಮಾಡುವುದಾಗಿದೆ. ನೀವು ಒಂದು ಪುಸ್ತಕದಲ್ಲಿ ನಿಮ್ಮ ಪ್ರಾರ್ಥನಾ ಸಮಯದಲ್ಲಿ ಪವಿತ್ರಾತ್ಮರು ನಿಮಗೆ ಯಾವ ವಿಷಯದಲ್ಲಿ ಬದಲಾವಣೆ ಆಗುವುದಕ್ಕೆ ಸಹಾಯ ಮಾಡುತ್ತಾರೋ ಅದನ್ನು ಬರೆದಿಟ್ಟುಕೊಳ್ಳಿ. ನೀವು ಯಾವ ವಿಷಯವನ್ನು ಕಲಿಯುತ್ತಿದ್ದಿರೋ ಅದನ್ನು ನಿಮ್ಮನ್ನು ದಾರಿ ನಡೆಸುವವರ ಬಳಿ ಆಗಿಂದಾಗೆ ಮಾತನಾಡಿ ನಿಮ್ಮ ಕುಟುಂಬದಲ್ಲಿಯೂ ಒಬ್ಬರಿಗೊಬ್ಬರು ಹಂಚಿಕೊಳ್ಳಿ. ನೀವು ಈ ಪಾಠಗಳಿಂದ ಏನನ್ನು ಕಲಿಯುತ್ತಿದ್ದೀರಾವೆಂದು ನಿಮ್ಮ ಕುಟುಂಬ ಸಭೆಯ ಸದಸ್ಯರ ಜೊತೆ ಮತ್ತು ನೀವು ಯಾವ ಸ್ಥಳದಲ್ಲಿದ್ದಿರೋ ಆ ಸ್ಥಳದಲ್ಲಿ ಇದನ್ನು ಹಂಚಿಕೊಳ್ಳಿ.

## ಮೊದಲನೆಯ ವಾರದ ಮೊದಲ ದಿನವನ್ನು ಪ್ರಾರಂಭಿಸೋಣ

## ವಾರ : 1

## ಭೂಪರಲೋಕಗಳ ಒಡೆಯ (ದೇವರು)

"ನಿನ್ನ ಜೊತೆ ಹಣವನ್ನು ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಆದರೆ ಅದನ್ನು ನಿನಗಿಂತ ಮುಂಚೆ ಕಳುಹಿಸಬಹುದು". ರ್‍ಯಾಂಡಿ ಆಲ್‌ಕಾರ್ನ್ – ನಿಧಿ ತಜ್ಞ (ಹಣಕಾಸು)

ಪ್ರತಿ ವಾರದ ದೇವರ ಪಾಠಗಳು 7 ವಿಭಾಗಗಳನ್ನು ಒಳಗೊಂಡಿದೆ. ಅದನ್ನು ನೀವು ನಿಮ್ಮ ಸಮಯಕ್ಕೆ ಅನುಗುಣವಾಗಿ ಕಲಿಯಬಹುದು.

**ಮೊದಲನೆಯ ವಾರ: ಭೂಪರ ಲೋಕಗಳ ಒಡೆಯ/ದೇವರು**

ಈ ಕೆಳಗಿನ ಅಂಶಗಳನ್ನು ಸ್ಪಷ್ಟಪಡಿಸಿಕೊಳ್ಳೋಣ: ಒಡೆಯನು ಭೂಪರ ಲೋಕವನ್ನು ನಿರ್ವಹಿಸಿಕೊಂಡು ಹೋಗುತ್ತಿರುವುದು ಈ ಒಡಯನೇ. ಹೌದು ನೀವು ನಿಮ್ಮ ಆಟಿಕೆಗಳು (ಅಲ್ಪವಸ್ತುಗಳು) ನಿಮ್ಮ ಸಲಕರಣೆಗಳು, ನಿಮ್ಮ ಸಮಯ, ನಿಮ್ಮ ಹಣ, ನಿಮ್ಮ ಸ್ಥಾನಮಾನ, ನಿಮ್ಮ ಬೊಕ್ಕಸ, ನಿಮ್ಮ ಕುಟುಂಬ, ನಿಮ್ಮ ಸ್ನೇಹಿತರು ಹೌದು ಎಲ್ಲವು ಅವರದ್ದೇ ಅವರೇ ನಮ್ಮ ಒಡೆಯರಾದ ದೇವರು.

## ದಿನ – 1 : ಭೂ ಪರಲೋಕಗಳ ಒಡೆಯ (ದೇವರು)

**ಕಂಠಪಾಠದ ವಚನ:** ಕೀರ್ತನೆಗಳು 24:1–4. ಭೂಮಿಯೂ ಅದರಲ್ಲಿರುವ ಸಮಸ್ತವೂ ಯೆಹೋವನದು. ಲೋಕವೂ ಅದರ ನಿವಾಸಿಗಳೂ ಆತನವೇ. ಆತನೇ ಅದರ ಅಸ್ತಿವಾರವನ್ನು ಸಾಗರದ ಮೇಲೆ ಹಾಕಿದವನು. ಅದನ್ನೇ ಜಲರಾಶಿಗಳ ಮೇಲೆ ಸ್ಥಿರಪಡಿಸಿದವನು ಆತನೇ. ಯೆಹೋವನ ಪರ್ವತವನ್ನು ಹತ್ತ ತಕ್ಕವನು ಯಾರು? ಆತನ ಪವಿತ್ರ ಸ್ಥಾನದಲ್ಲಿ ನಿಲ್ಲುವುದಕ್ಕೆ ಎಂಥವನು ಯೋಗ್ಯನು? ಯಾವನು ಅಯೋಗ್ಯ ಕಾರ್ಯಗಳಲ್ಲಿ ಮನಸ್ಸಿಡದೆ ಮೋಸ ಪ್ರಮಾಣ ಮಾಡದೆ ಶುದ್ದ ಹಸ್ತವೂ ನಿರ್ಮಲ ಮನಸ್ಸು ಉಳ್ಳುವನಾಗಿದ್ದಾನೋ ಅವನೆ.

ಊಹಿಸಿಕೊಳ್ಳಿ ಏನೆಂದರೆ ಈ ಒಡೆಯನ ಬಗ್ಗೆ (ದೇವರ) ಎಲ್ಲೂ ನೋಡಿಲ್ಲ, ಕೇಳಿಲ್ಲ ಆದರೆ ಈಗ ನಿಮಗೆ ಗೊತ್ತಾಗಿದೆ ಎಲ್ಲವೂ ಅವರದ್ದೇ. ಈ ಭೂಮಿ, ನಿಮ್ಮ

ಮನೆ, ನಿಮ್ಮ ಜೀವನ ವಿಧಾನ, ನಿಮ್ಮ ವಾಹನಗಳು, ನಿಮ್ಮ ಕುಟುಂಬ ಈ ಅಂಶ ಅರ್ಥವಾಗಿವೆಯಾ ಆದರೂ ಅವರು ನಿನ್ನನ್ನು ದಾಸನ ಹಾಗೆ ನೋಡದೆ ಗೌರವದಿಂದ ನಿನ್ನನ್ನು ನೋಡುತ್ತಾರೆ.

* ದೇವರ ಸಾರ್ವಭೌಮತ್ವವು ನಿಮ್ಮ ಮತ್ತು ಅವರ ಜೊತೆಗಿನ ಸಂಬಂಧವನ್ನು ಹೇಗೆ ಮನದಟ್ಟು ಮಾಡುತ್ತದೆ?
* ನೀವು ಹೇಗೆ ನಿಮ್ಮ ಐಶ್ವರ್ಯ ಅಥವಾ ಸಂಪತ್ತನ್ನು ನೋಡುತ್ತಿರೊ ಅದು ನೀವು ದೇವರನ್ನು ನೋಡುವ ರೀತಿಯ ಮೇಲೆ ಪ್ರಭಾವ ಬೀರುತ್ತದೆ.
* ನಿಮ್ಮಲ್ಲಿರುವ ಎಲ್ಲದಕ್ಕೂ ನೀವು ಯಜಮಾನರಲ್ಲ ದೇವರು ಅವೆಲ್ಲದಕ್ಕೂ ಯಜಮಾನರಾಗಿದ್ದಾರೆ . ಎಂದು ತಿಳಿದುಕೊಂಡ ಮೇಲೆ ನಿಮ್ಮಲ್ಲಿರುವ ವಸ್ತುಗಳನ್ನು ನೀವು ಹೇಗೆ ಕಾಣುತ್ತೀರಾ?

**ಕೀರ್ತನೆಗಳು 33:6–9**

"ಯೆಹೋವನ ಅಪ್ಪಣೆಯಿಂದಲೇ ಆಕಾಶವು ಉಂಟಾಯಿತು. ಅದರಲ್ಲಿರುವದೆಲ್ಲವೂ ಆತನ ಶ್ವಾಸದಿಂದ ನಿರ್ಮಿತವಾಯಿತು. ನೀರುಗಳನ್ನು ಒಟ್ಟುಗೂಡಿಸಿ ಸಮುದ್ರವನ್ನು ಒಂದು ಜಾಡಿನಲ್ಲಿ ಇಟ್ಟವನು ಆತನೇ. ಭೂಮಿಯ ಕೆಳಗೆ ಜಲಾಶಯಗಳನ್ನು ಇಟ್ಟವನು ಆತನೇ. ಭೂಲೋಕದವರೆಲ್ಲರೂ ಯೆಹೋವನಿಗೆ ಭಯಪಡಲಿ, ಭೂನಿವಾಸಿಗಳೆಲ್ಲರೂ ಆತನಿಗೆ ಹೆದರಲಿ ಆತನು ನುಡಿದ ಮಾತ್ರಕ್ಕೆ ಸಮಸ್ತವೂ ಉಂಟಾಯಿತು. ಆತನು ಅಜ್ಞಾಪಿಸುತ್ತಲೇ ಸರ್ವವೂ ಸ್ಥಾಪನೆಯಾಯಿತು.

* ದೇವರ ಮಹತ್ವದ ಬಗ್ಗೆ ಗಮನಿಸಿರಿ (ಯೋಚಿಸಿರಿ)
* ಅವರು ಆಕಾಶವನ್ನು ಮತ್ತು ಅದರಲ್ಲಿರುವ ಅನೇಕ ತಾರೆಗಳನ್ನು ಸೃಷ್ಟಿಸಿದರು.
* ಅವರು ಸಮುದ್ರವನ್ನು "ಜಾಡಿನಲ್ಲಿ" ಶೇಖರಿಸುತ್ತಾರೆ.
* ಈ ಪ್ರಪಂಚದ ಅಸ್ತಿತ್ವವನ್ನು ಮಾತನಾಡಿಸಿದ್ದಾರೆ.
* ಅವರ ಬಳಿ ಹೇಗೆ ಸಮೀಪಿಸುವುದು?

**ಕೀರ್ತನೆಗಳು : 115 : 1 – 15 (ಈ ದೇವರ ವಾಕ್ಯವನ್ನು ಓದಿ)**

* ಕಣ್ಣಿಗೆ ಕಾಣದ ದೇವರು (ವ.2) ಭೂಪರಲೋಕವನ್ನು ಉಂಟು ಮಾಡಿದವರು (ವ. 15)

*    ಇದರ ಅರ್ಥ ಏನೆಂಬುದನ್ನು ಆಲೋಚಿಸಿ.

"ಪರಲೋಕ ದೇವರಿಗೆ ಸೇರಿದ್ದು. ಆದರೆ ಈ ಭೂಮಿಯನ್ನು ಮನುಷ್ಯರಿಗೆ ಕೊಟ್ಟರು.

## ದಿನ – 2

## ಭೂಪರಲೋಕಗಳ ಒಡೆಯ (ದೇವರು)

**ಕೀರ್ತನೆಗಳು 96:1–13**

*    (ವ.3–6) ಅವರ ಮಹಿಮೆಯನ್ನು ಎಲ್ಲಾ ಜನಾಂಗಗಳಿಗೂ ಪ್ರಸಿದ್ಧಿಪಡಿಸು.

ದೇವರು ಯಾಕೆ ಮುಖ್ಯವಾಗಿ ಹೊಗಳಿಕೆಗೆ ಪಾತ್ರರಾಗಿದ್ದಾರೆ ಮತ್ತು ಎಲ್ಲಾ ದೇವರುಗಳಲ್ಲಿಯೂ ಭಯಪಡತಕ್ಕವರು ಇವರೆ ಯಾಕೆ ಎಂಬುದನ್ನು ಬರೆಯಿರಿ.

*    (ವ.7–10) "ದೇವರನ್ನು ಘನಪಡಿಸು" ಇದರ ಅರ್ಥವೇನು? ದೇವರಿಗೆ ಸಿಗಬೇಕಾದ ಕೀರ್ತಿಯನ್ನು ಹೇಗೆ ಕೊಡಬಹುದು.

*    (ವ.11–13) ದೇವರ ಸೃಷ್ಟಿಯಲ್ಲಿ ಯಾವ ಭಾಗವು ಅವರನ್ನು ಆರಾಧಿಸುತ್ತದೆ ನಾವು ನಿಶ್ಯಬ್ಧವಾಗಿದ್ದರೂ.

ದೇವರು ಉಂಟು ಮಾಡಿದ ಸೃಷ್ಟಿಯಲ್ಲಿ ಎಲ್ಲವು ದೇವರನ್ನು ಆರಾಧಿಸುತ್ತದೆ ಎಂದು ಹೇಳಿದೆ ಆದರೆ ಮನುಷ್ಯನು ಮಾತ್ರ ನಾನು ದೇವರನ್ನು ಆರಾಧಿಸುವುದಕ್ಕೋಸ್ಕರ ಸೃಷ್ಟಿಸಲ್ಪಟ್ಟನಾ ಎಂದು ಯೋಚಿಸುತ್ತಾರೆ. ಈ ದಿನ ನಿರ್ಧರಿಸೋಣ ಈ ಭೂಮಿಗೆ ನಾವೇ ದೇವರನ್ನು ಪ್ರಕಟಿಸಬೇಕು.

**ಕೀರ್ತನೆಗಳು 8:1–9**

*    (ವ.1) "ಭೂಲೋಕದಲ್ಲೆಲ್ಲಾ ದೇವರ ನಾಮ ಮಹಿಮೆಯುಳ್ಳದ್ದು" ಇದರ

ಅರ್ಥವೇನು?

* (ವ.2–4) ನಿಮಗೆ ದೇವರು ಯಾರೆಂದು ಅರ್ಥವಾದ ಮೇಲೆ ನಿಮ್ಮ ಬಗ್ಗೆ ಯೋಚನೆ ಮಾಡಲು ಅದು ಹೇಗೆ ನಿಮಗೆ ಸಹಾಯ ಮಾಡುತ್ತದೆ.

## ದಿನ – 3

## ಎಲ್ಲದರ ಒಡೆಯ (ದೇವರು)

**ಕೀರ್ತನೆಗಳು : 102:17**

"ಜನಾಂಗಗಳು ಯೆಹೋವ ಎಂಬ ನಿನ್ನ ನಾಮಕ್ಕೂ ಭೂರಾಜರು ನಿನ್ನ ಪ್ರತಾಪಕ್ಕೂ ಭಯಪಡುವರು.

* ದೇವರ ಉದ್ದೇಶವೇನೆಂದರೆ ಎಲ್ಲಾ ಜನಾಂಗಗಳು ಎಲ್ಲದರ ಒಡೆಯ ಅವರೇ ಎಂಬುದನ್ನು ಸದಾಕಾಲ ಅಂಗೀಕರಿಸಬೇಕೆಂಬುವುದು.

* ನೀನು ದೇವರ ನಾಮಕ್ಕೆ ಭಯಪಟ್ಟು ದೇವರನ್ನು ಭಯ ಭಕ್ತಿಯಿಂದ ಪೂಜಿಸುವುದು ಇದರ ಅರ್ಥವೇನು?

**ಅಪೋಸ್ತಲರು 10:34–38**

ಈ ಒಂದು ಸಂದರ್ಭದಲ್ಲಿ ಪೇತ್ರನಿಗೆ ಅರಿವಾಯಿತು. ರಕ್ಷಣೆಯು ಎಲ್ಲರಿಗೂ ಬೇಕೆಂದು ಅವನು ಇದನ್ನು ಅನ್ಯಜನರಿಗೆ ಮತ್ತು ಯೆಹೋದ್ಯರಿಗೆ ಬೋಧಿಸುತ್ತಿರುವಾಗ ಕೊರಿನೀಲಿಯಸ್ ಎಂಬ ಅನ್ಯಜನದವನು ಮೊದಲು ಮನಸಾಂತರ ಹೊಂದಿದನು.

* ನಮ್ಮ ದೇಶದ ಭೂಪಟವನ್ನು ನೋಡಿ. ನಾವೆಲ್ಲರೂ ಹೋಗಿ ಯೇಸುವಿನ ರಕ್ತದ ಬಗೆ ಸಾರಬೇಕು ಮತ್ತು ದೇವರನ್ನು ಆರಾಧಿಸುವುದಕ್ಕೂ ಒಬ್ಬರನ್ನೊಬ್ಬರು ಪ್ರೀತಿಸುವುದಕ್ಕೂ ನಾವೇ ಹೇಳಿಕೊಡಬೇಕು.

* ಎಲ್ಲಾ ರಾಷ್ಟ್ರದ ಜನಾಂಗಗಳು ಸುಷ್ಟಿಕರ್ತನ ಜೊತೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಳ್ಳಬೇಕೆಂದು ನೀವು ಪ್ರಾರ್ಥನೆ ಮಾಡಿ.

* ನಿಮಗನಿಸುವ ಕೆಲವು ಮುಖ್ಯ ದೇಶಗಳನ್ನು ಆರಿಸಿ. ಅಲ್ಲಿರುವ ಸಭೆಗಳಿಗೋಸ್ಕರ ಪ್ರಾರ್ಥನೆ ಮಾಡಿ.

* ನಮಗೋಸ್ಕರ ಪ್ರಾರ್ಥನೆ ಮಾಡಿ ನಾಯಕರು ಅವರ ಒತ್ತಡಗಳಿಂದ,

ತೊಂದರೆಗಳಿಂದ (ಹಣಕಾಸು,ರಾಜಕೀಯ,ನ್ಯಾಯಸ್ಮರಣೆ) ಬಿಡುಗಡೆಯಾಗಿ ಈ ಪ್ರಪಂಚದಲ್ಲಿರುವ ಜನರಿಗೆಲ್ಲರಿಗೂ ಯೇಸುವಿನ ಬಗ್ಗೆ ತಿಳಿಸಬೇಕು.

**ರೋಮಾಪುರದವರು 10:12–21**

* (ವ.12) "ಎಲ್ಲರಿಗೂ ಒಬ್ಬನೇ ಕರ್ತ ಆತನು ತನ್ನ ನಾಮವನ್ನು ಹೇಳಿಕೊಳ್ಳುವವರಿಗೆ ಹೇರಳವಾಗಿ ಕೊಡುವವನಾಗಿದ್ದಾನೆ.

ಆಲೋಚಿಸಿ ದೇವರಲ್ಲಿ ಪಕ್ಷಪಾತವಿಲ್ಲ ಆದರೆ ಎಲ್ಲಾ ಜನಾಂಗಗಳು ಜನರನ್ನು ಪ್ರೀತಿ ಮಾಡುತ್ತಾರೆ ಮತ್ತು ಅವರನ್ನು ಆಶೀರ್ವಾದ ಮಾಡುತ್ತಾರೆ.

* (ವ.21) "ನನ್ನ ಮಾತಿಗೆ ಅವಿಧೇಯರಾಗಿ ಎದುರು ಮಾತಾಡುವ ಜನರನ್ನು ನಾನು ದಿನವೆಲ್ಲಾ ಕೈಚಾಚಿ ಕರೆದೆನೆಂದು" ಹೇಳುತ್ತಾರೆ.

ಕರ್ತನಿಗೆ ಧನ್ಯವಾದ ತಿಳಿಸೋಣ ಅವರ ತಾಳ್ಮೆಗೆ ನಮ್ಮನ್ನು ಕ್ಷಮಿಸುವ ಗುಣಕ್ಕೆ ಮತ್ತು ಅವರ ಕೃಪಾವರಗಳಿಗೋಸ್ಕರ.

* ದೇವರಿಗೆ ಎಲ್ಲರು ರಕ್ಷಣೆ ಹೊಂದಬೇಕು ಮತ್ತು ಸತ್ಯದ ಅರಿವಿನಲ್ಲಿ ಬರಬೇಕೆಂಬುದನ್ನು ಅರ್ಥಮಾಡಿಕೊಳ್ಳಲು ನೀವು ಪ್ರಾರ್ಥನೆ ಮಾಡಿ.

* ನಿಮ್ಮನ್ನು ದೇವರು ಅವರ ಕಾರ್ಯಕ್ಕೆ ಮತ್ತು ಅವರ ಪ್ರೀತಿಯನ್ನು ಎಲ್ಲಾ ಜನಾಂಗಗಳಿಗೂ ಸಾರಲು ಉಪಯೋಗಿಸಬೇಕೆಂದು ಪ್ರಾರ್ಥಿಸಿರಿ ಮತ್ತು ನಿಮ್ಮ ಪ್ರಾಪಂಚಿಕತನದಿಂದ, ವಸ್ತು ವಿಷಯಗಳಿಂದ, ಸೋಂಬೇರಿತನದಿಂದ ಅಥವಾ ಸ್ವಇಚ್ಛೆಯಿಂದ ಹೊರಬರಬೇಕೆಂದು ಪ್ರಾರ್ಥಿಸಿರಿ.

## ದಿನ – 4

## ನನ್ನ ಒಡೆಯರು (ನನ್ನ ದೇವರು)

**ಧರ್ಮೋಪದೇಶಕಾಂಡ: 8:6–20**

* (ವ.6–9) ದೇವರು ಇಸ್ರೇಲರಿಗೆ ಕೊಟ್ಟಿದ್ದಕ್ಕೂ ನಿಮ್ಮ ಭೂಮಿಯನ್ನು ಕೊಟ್ಟಿದ್ದಕ್ಕೂ ಏನು ಹೋಲಿಕೆಯಿದೆ? ನೀವು ಯಾವುದಕ್ಕೆ ಕೃತಜ್ಞತೆಯಿಂದಿರಬೇಕು.

* (ವ.18) ದೇವರು ನಿಮಗೆ ಐಶ್ವರ್ಯವನ್ನುಂಟು ಮಾಡುವ ಸಾಮರ್ಥ್ಯವನ್ನು ಕೊಡುತ್ತಾರೆ? ಇದು ನಿಮಗೆ ಯಾವ ಅರ್ಥವನ್ನು ಕೊಡುತ್ತದೆ.
* (ವ.19–20) "ನಾನು ಯಾವತ್ತು ದೇವರನ್ನು ಮರೆಯುವುದಿಲ್ಲ"? ಈ ವಿಷಯದಲ್ಲಿ ನೀವು ಯಾವ ರೀತಿಯಾದ ನಿರ್ಧಾರ ಮಾಡುತ್ತೀರಾ.

**1 ಕೋರಿಂಥಿಯರು 6:19–20**

ನೀವು ನಿಮ್ಮ ಸ್ವಂತ ಸೊತ್ತಲ್ಲ ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು ಆದ ಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ".

* ಈ ವಾಕ್ಯದ ಅರ್ಥವೇನೆಂಬುವುದು ನಿಮಗೆ ತಿಳಿದಿದೆಯಾ?

**II ಕೊರಿಂಥಿದವರು 8:9**

"ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮಗೆ ಗೊತ್ತಾಗಿದೆಯಲ್ಲಾ ಆತನು ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ ಸೇರುವುದರಿಂದ ನೀವು ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು".

* ಈ ಮೇಲಿನ ವಚನ ನಿಮಗೆ ಯಾವ ಅರ್ಥವನ್ನು ಕೊಡುತ್ತದೆ "ಕ್ರಿಸ್ತನು ಬಡವನಾಗಿ" ಎಂಬುದರ ಬಗ್ಗೆ.
* "ಈಗ ನೀವು ಐಶ್ವರ್ಯವಂತರಾಗಿದ್ದೀರಾ" ಈ ಸಾಲಿನ (ವಚನದ) ಅರ್ಥವೇನು?

## ದಿನ – 5

## ನನ್ನ ಐಶ್ವರ್ಯದ ಒಡೆಯ

**ಲೂಕನು 16:1:15**

ವ.8 "ಯಜಮಾನನು ಇದನ್ನು ಕೇಳಿ ಅನ್ಯಾಯಗಾರನಾದ ಆ ಮನೆ ವಾರ್ತೆಯವನನ್ನು ಇವನು ಜಾಣತನ ಮಾಡಿದನು ಎಂದು ಹೊಗಳಿದನು. ಯಾಕೆಂದರೆ ಲೌಕಿಕರು ತಮ್ಮಂಥವರ ವಿಷಯದಲ್ಲಿ ಬೆಳಕಿನ ರಾಜ್ಯದವರಿಗಿಂತಲೂ ಜಾಣರಾಗಿದ್ದಾರೆ.

ವ.9 "ಅನ್ಯಾಯದ ಧನದ ಮೂಲಕವಾಗಿ ನಿಮಗೆ ಸ್ನೇಹಿತರನ್ನು ಮಾಡಿಕೊಳ್ಳಿರಿ. ಹೀಗೆ ಮಾಡಿದರೆ ಅದು ನಿಮ್ಮ ಕೈ ಬಿಟ್ಟು ಹೋದಾಗ ಅವರು ನಿಮ್ಮನ್ನು ಶಾಶ್ವತವಾದ ವಾಸಸ್ಥಾನಗಳಲ್ಲಿ ಸೇರಿಸಿಕೊಳ್ಳುವರು ಎಂದು ನಾನು ನಿಮಗೆ ಹೇಳುತ್ತೇನೆ.

* ಈ ಸಂದರ್ಭದಲ್ಲಿ ಯೇಸುವು ಜಾಣತದ ಮನೆ ವಾರ್ತೆಯವನ ಬಗ್ಗೆ ಒಂದು ಸಾಮ್ಯವನ್ನು ಹೇಳುತ್ತಾರೆ. ಅವನು ಹಣವನ್ನು ತಪ್ಪಾಗಿ ಉಪಯೋಗಿಸಿದರಿಂದ ಅವನ ಕೆಲಸ ಹೋಯಿತು. ಮತ್ತು ಅವನು ಇನ್ನಿರುವುದನ್ನು ಕಳೆದುಕೊಳ್ಳಬಾರದೆಂದು ಕೆಲವು ತಪ್ಪು ನಿರ್ಧಾರಗಳನ್ನು ಮಾಡುತ್ತಾನೆ. ಇದರೆಲ್ಲದಲ್ಲಿಯೂ ಆ ನಿಮಯ ತಪ್ಪಿದ ವಾರ್ತಾಗಾರನ ಕ್ರಿಯೆಗಳು ಸ್ವಾಭಾವಿಕವಾಗಿ ತಪ್ಪಾಗಿದೆ. ಯೇಸುವು ಅವನಿಗೆ ಆಜ್ಞೆ ಮಾಡಲು ಕೆಲವು ದಾರಿಗಳನ್ನು ಹುಡುಕಿದರು.

* ಈ ಸಾಮ್ಯದಲ್ಲಿ ದೇವರೆ "ಯಜಮಾನ" ಎಲ್ಲದರ ಹಕ್ಕುದಾರ ಮತ್ತು ನಾವು ಜಾಣತನ ಮನೆವಾರ್ತೆಯವರು.

* ವಚನ 9 ರಿಂದ ಯಾವ ವಿಷಯವನ್ನು ಕಲಿಯುತ್ತಿದ್ದೀರಾ?

ವ.10–12 "ಸ್ವಲ್ಪವಾದದ್ದರಲ್ಲಿ ನಂಬಿಗಸ್ತನಾದವನು ಬಹಳವಾದದ್ದರಲ್ಲಿಯೂ ನಂಬಿಗಸ್ತನಾಗುವನು. ಸ್ವಲ್ಪವಾದದ್ದರಲ್ಲಿ ಅನ್ಯಾಯುಗಾರನಾದವನು ಬಹಳವಾದದ್ದರಲ್ಲಿಯೂ ಅನ್ಯಾಯಗಾರನಾಗುವನು. ಹೀಗಿರುವುದರಿಂದ ಅನ್ಯಾಯದ ಧನದ ವಿಷಯದಲ್ಲಿ ನೀವು ನಂಬಿಗಸ್ತರಲ್ಲವರಾದರೆ ನಿಜವಾದ ಧನವನ್ನು ನಿಮ್ಮ ವಶಕ್ಕೆ ಯಾರು ಕೊಟ್ಟಾರು? ಮತ್ತೊಬ್ಬನ ಸೊತ್ತಿನ ವಿಷಯದಲ್ಲಿ ನೀವು ನಂಬಿಗಸ್ತಲ್ಲದವರಾದರೆ ನಿಮ್ಮದನ್ನು ನಿಮಗೆ ಯಾರು ಕೊಟ್ಟಾರು?

* ನೀವು ಯಾವ ದಾರಿಯಲ್ಲಿ "ಹೆಚ್ಚು ನಂಬಿಗಸ್ತರಾಗಿದ್ದಿರಾ"?

* ಈ ವಚನ ನಿಮಗೆ ಏನನ್ನು ಸವಾಲು ನೀಡುತ್ತದೆ. ಈ ದಿನ ದೇವರು ನಿಮ್ಮ ಕೈಯಲ್ಲಿ ಒಪ್ಪಿಸಿರುವುದರ ಬಗ್ಗೆ.

ವ.13 "ಯಾವ ಆಳಾದರೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ತಾತ್ಸಾರ ಮಾಡುವನು. ನೀವು ದೇವರನ್ನು ಧನವನ್ನು ಕೂಡ ಸೇವಿಸಲಾರಿರಿ ಅಂದನು.

* ಈ ಪ್ರಪಂಚ ನಮಗೆ ಯಜಮಾನ ಎಂಬುವುದನ್ನು ಬಿಡಿಸಿ ಹೇಳಲು ಯೇಸುವು ಯಾಕೆ "ವಿಗ್ರಹಗಳನ್ನು ಮತ್ತು ಮೋಹಕ ವಸ್ತುಗಳನ್ನು ಆಯ್ಕೆ ಮಾಡಲಿಲ್ಲ".

ನೀವು ಏನು ಯೋಚನೆ ಮಾಡುತ್ತೀರಾ ಅವರು ಯಾಕೆ "ಹಣವನ್ನು" ತೆಗೆದುಕೊಂಡರೆಂದು (ಐಶ್ವರ್ಯ).

* ನಾವು ಅಪರಾಧ ಪ್ರಜ್ಞೆಯಿಂದ "ಹಣವನ್ನು" ಪ್ರೀತಿಸುತ್ತಿದ್ದರೆ ಯೇಸುವು ನಮಗೆ ಏನನ್ನು ಬೋಧಿಸುತ್ತಿದ್ದಾರೆಂದರೆ ದೇವರ ಜೊತೆಗಿನ ಸಂಬಂಧದ ಮೇಲೆ

ಹಣ ಪ್ರಭಾವ ಬೀರುತ್ತದೆ.

ವ.14–15 "ಫರಿಸಾಯರು ಈ ಮಾತುಗಳನ್ನೆಲ್ಲಾ ಕೇಳಿ ತಾವು ಹಣದಾಸೆಯುಳ್ಳವರಾಗಿದ್ದರಿಂದ ಹಾಸ್ಯ ಮಾಡಿದರು. ಆಗ ಆತನು ಅವರಿಗೆ ಹೇಳಿದ್ದೇನೆಂದರೆ ಮನುಷ್ಯರ ಮುಂದೆ ನೀತಿವಂತರೆಂದು ತೋರಿಸಿಕೊಳ್ಳುವವರು ನೀವು. ಆದರೆ ದೇವರು ನಿಮ್ಮ ಹೃದಯಗಳನ್ನು ತಿಳಿದುಕೊಂಡಿದ್ದಾನೆ. ಮನುಷ್ಯರಲ್ಲಿ ಶ್ರೇಷ್ಠವೆನಿಸಿಕೊಳ್ಳುವಂಥದ್ದು ದೇವರ ದೃಷ್ಟಿಯಲ್ಲಿ ಅಸಹ್ಯವಾಗಿದೆ".

* ಆ ದಿನಗಳಲ್ಲಿ ಫರಿಸಾಯರೆ "ನೀತಿ ನಿಯಮಗಳನ್ನು ಕಾಪಾಡುವವರು" ಈಗಿನ ಕಾಲದ ಶಿಷ್ಯರ ಹಾಗೆ. ಅವರು ಬೇರೆಯವರಿಂದ ಎದುರು ನೋಡುತ್ತಿದ್ದರು. ನಾವು ನಮ್ಮ ದೇವರ ಮೇಲಿನ ವಿಶ್ವಾಸದಿಂದ ಒಳ್ಳೆಯ ಮತದವರೆಂದು ಹೇಳಬೇಕೆಂದು ಎಲ್ಲದಕ್ಕಿಂತ ದೇವರ ವಿಷಯದಲ್ಲಿ ಉತ್ಸಾಹದಿಂದಲೂ ತಮ್ಮನ್ನು ತಾವೇ ಒಪ್ಪಿಸುತ್ತಿದ್ದರು. ಆ ಕಾಲದಲ್ಲಿ ಯೇಸು ಅವರು ಹಣವನ್ನು "ಪ್ರೀತಿ ಮಾಡುತ್ತಾರೆಂದು ಗುರುತಿಸಿದರು".

* ಆ ಕಾಲದಲ್ಲಿ ಫರಿಸಾಯರು ಯಾವ ರೀತಿ ಈ ಬಲೆಗೆ ಬಿದ್ದರೊ ಅದೇ ರೀತಿಯಲ್ಲಿ ಬದ್ಧವಾದ ಮತ್ತು ಉತ್ಸಹಭರಿತವಾದ ಯೇಸುವಿನ ಶಿಷ್ಯರಾದ ನಾವು ಬೀಳಬಹುದು.

* ಯಾವ ನಿಯಮಗಳನ್ನು ನೀವು ಈ ದಿನದ ವಾಕ್ಯದ ಮೂಲಕ ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತೀರಾ.

## ದಿನ – 6

## ಕರ್ತನ ಒಡೆತನಕ್ಕೆ ಬರುವ ಅಡಚಣೆಗಳು

**ಹಣದ ಪ್ರೀತಿಯು ಸಕಲ ವಿಧವಾದ ಕೆಟ್ಟತನಕ್ಕೆ ಬೇರಾಗಿದೆ.**

1 ತಿಮೊಥಿ : 6:10 "ಕೆಲವರು ಹಣದ ಪ್ರೀತಿಗೋಸ್ಕರ ತಮ್ಮ ನಂಬಿಕೆಯಿಂದ ದೂರ ಹೋಗುತ್ತಾರೆ. ಇದು ಕಾಲಾನು ಕ್ರಮದಲ್ಲಿ ಆಗಬಹುದು. ಮೊದಲು ಅವರು ಜೀವನದಲ್ಲಿ "ಭದ್ರತೆ" ಬೇಕೆಂದು ಬಯಸುತ್ತಾರೆ. ನಂತರ ಅದು "ಅಭಿವೃದ್ದಿಯಾಗಿ" ಕೊನೆಗೆ "ಸುಖಭೋಗ" ನಮ್ಮ ಹೃದಯ ಮತ್ತು ಮನಸ್ಸು ಗಳನ್ನು ಸೂರೆಗೊಳ್ಳುತ್ತದೆ.

* "ಇನ್ನೂ ಸ್ವಲ್ಪ ಬೇಕು" ಎಂಬ ಹಣದ ಪ್ರೀತಿಯು ನಿಮ್ಮ ಹೃದಯವನ್ನು ಹೇಗೆ ಸೆಳೆಯುತ್ತಿದೆ.

**ನಿಮ್ಮ ಹೃದಯವನ್ನು ಎಲ್ಲಾ ಲೋಭದಿಂದ ಕಾಪಾಡಿಕೊಳ್ಳಿರಿ.**

ಲೂಕ 12 : 13–21 ಬುದ್ದಿಯಿಲ್ಲದ ಐಶ್ವರ್ಯವಂತ

* ಲೋಭವು ನಿಮ್ಮನ್ನು ಯಾವ ವಿಧವಾಗಿ ಆಕರ್ಷಿಸುತ್ತದೆ?
* ತನಗೋಸ್ಕರ ಸಂಪತ್ತನ್ನು ಈ ಲೋಕದಲ್ಲಿ ಕೂಡಿಸಿಕೊಳ್ಳುವ ಅಪರಾಧಕ್ಕೆ ನೀನೆಷ್ಟು ಬಲಿಯಾಗಿರುವಿ?
* " ದೇವರ ವಿಷಯದಲ್ಲಿ ಐಶ್ವರ್ಯವಂತರಾಗುವುದಕ್ಕೆ" ನೀವು ಹೇಗೆ ಹೆಚ್ಚಾಗಿ ನಿಮ್ಮಲ್ಲಿರುವ ಸಂಪತ್ತನ್ನು ಹೂಡಬಹುದು?

**ಅತಿ ಇಚ್ಚಾಪೂರೈಕೆ ದಂಡನೆಗೆ ಗುರಿಮಾಡುತ್ತದೆ.**

ಲೂಕ 16:19–31, ಐಶ್ವರ್ಯವಂತನು ಮತ್ತು ಬಡ ಲಾಜರಸ್

* ಈಗ " ಸುಖಭೋಗಗಳನ್ನು ನೀನು ಹೇಗೆ ಅನುಭವಿಸುತ್ತಿರುವಿ
* ನಿನ್ನ ಅಕ್ಕಪಕ್ಕದಲ್ಲಿರುವ "ಬಡಮನುಷ್ಯರ ಬಗ್ಗೆ ನಿಮಗೆಷ್ಟು ಅರಿವಿದೆ.

**ಎಲ್ಲಾ ಪರಿಸ್ಥಿತಿಯಲ್ಲಿ ಸಂತೃಪ್ತರಾಗಿರುವುದು.** ಫಿಲಿಪ್ಪಿ 4:10–13

* ನೀವು ಎಲ್ಲಾ ಪರಿಸ್ಥಿತಿಯಲ್ಲಿ ಹೇಗೆ ನಿಮ್ಮ ಜೀವನದಲ್ಲಿ ಹೆಚ್ಚಾಗಿ ಸಂತೃಪ್ತರಾಗಿರ ಬಹುದು ?

## ದಿನ – 7

## ಕರ್ತನ ಒಡೆತನಕ್ಕೆ ಕೆಲವು ಪ್ರತಿಕಾರ್ಯಗಳು

1 ತಿಮೊಥಿ 6 : 17–19 " ಈ ಲೋಕದಲ್ಲಿ ಐಶ್ವರ್ಯವುಳ್ಳವರು ಅಹಂಕಾರಿಗಳಾಗಿರದೆ ಅಸ್ಥಿರವಾದ ಐಶ್ವರ್ಯದ ಮೇಲೆ ನಿರಿಕ್ಷೆಯನ್ನಿಡದೆ ನಮ್ಮ ಸುಖಕ್ಕೋಸ್ಕರ ಎಲ್ಲವನ್ನು ಹೇರಳವಾಗಿ ದಯಪಾಲಿಸುವ ಜೀವವುಳ್ಳ ದೇವರ ಮೇಲೆ ನಿರೀಕ್ಷೆಯನ್ನಿಡ ಬೇಕೆಂತಲೂ, ಅವರು ಒಳ್ಳೆಯದನ್ನು ಮಾಡುವವರೂ, ಸತ್ಕಾರ್ಯಗಳಲ್ಲಿ ಐಶ್ವರ್ಯವಂತೆ ಮುಂದಿನ ಕಾಲಕ್ಕೆ ಒಳ್ಳೆಯು ಅಸ್ತಿವಾರವಾಗುವಂಥವುಗಳನ್ನು ತಮಗೆ ಕೂಡಿಸಿಟ್ಟು ಕೊಳ್ಳಬೇಕೆಂತಲೂ ಅವರಿಗೆ ಅಜ್ಞಾಪಿಸು.

ಈ ವಚನವನ್ನು ಓದುವಾಗ ನಾವು ಸಾದಾರಣವಾಗಿ ಯೋಚಿಸುವುದು ಏನೆಂದರೆ ಈ ವಚನ ನನಗೆ ಅನ್ವಯಿಸುವುದಿಲ್ಲ ಈ ಲೋಕದಲ್ಲಿರುವ ಎಲ್ಲಾ ಐಶ್ವರ್ಯವಂತರಿಗೆ ಮಾತ್ರ ಅನ್ವಯಿಸುತ್ತದೆ. ಅವರಿಗೆ ಹೋಲಿಸಿದಲ್ಲಿ ನಾವು ಬಡವರು ಎಂದು ಯೋಚಿಸುತ್ತೇವೆ.

www.globalrichlist.com, ವೆಬ್‌ಸೈಟಲ್ಲಿ ನಿಮ್ಮ ಆದಾಯವನ್ನು ಹಾಕಿ ನೋಡಿದರೆ, ನೀವೆಷ್ಟು ಬಡವರು ಅಥವಾ ಐಶ್ವರ್ಯವಂತರು ಎಂಬುದು ನಿಮಗೆ ಗೊತ್ತಾಗುತ್ತದೆ.

* ನಿಮ್ಮ ಆದಾಯ ತಿಂಗಳಿಗೆ 10,000 ರೂ. ಆಗಿದ್ದರೆ ನೀವು ಜಗತ್ತಿನ 19.79% ಐಶ್ವರ್ಯವಂತರಲ್ಲಿ ಒಬ್ಬರಾಗಿದ್ದೀರಿ ಹಾಗೆಂದರೆ ಜಗತ್ತಿನ ಪ್ರತಿ 100 ಜನರಲ್ಲಿ 80 ಜನರು ನಿಮಗಿಂತ ಬಡವರಾಗಿದ್ದಾರೆ.

* ನಿಮ್ಮ ಆದಾಯ ತಿಂಗಳಿಗೆ 30,000/– ರೂ ಆಗಿದ್ದರೆ ನೀವು3.40% ಐಶ್ವರ್ಯವಂತರಲ್ಲಿ ಒಬ್ಬರಾಗಿದದೀರಿ.

* ನಿಮ್ಮ ಆದಾಯ ತಿಂಗಳಿಗೆ 50,000/, ರೂ ಆಗಿದ್ದೆರೆ ನೀವು ಜಗತ್ತಿನ ಅತೀ ಹೆಚ್ಚಿನ ಐಶ್ವಯ್ವಂತರಾದ 0.86% ಜನರಲ್ಲಿ ಒಬ್ಬರಾಗಿದ್ದೀರಿ.

* ಹಾಗೆಯೇ ನಿಮ್ಮ ಆದಾಯ ತಿಂಗಳಿಗೆ 1 ಲಕ್ಷವಾಗಿದ್ದರೆ.

ನೀವು ಜಗತ್ತಿನ ಅತಿ ಸಿರಿವಂತ ಐಶ್ವರ್ಯವಂತರು 0.13% ರಲ್ಲಿ ಒಬ್ಬರಾಗಿದ್ದೀರಿ.

ಹಾಗಾದರೆ ಈಗ ಹೇಳಿ ಜಗತ್ತಿನಲ್ಲಿರುವ ಇತರರೊಡನೆ ಹೋಲಿಸಿದರೆ ನೀವು ಐಶ್ವರ್ಯವಂತರೇ ಅಥವಾ ಬಡವರೇ ? ದೇವರು ನಿಮ್ಮನ್ನು ಹೇಗೆ ನೋಡುತ್ತಾರೆ– ಐಶ್ವರ್ಯವಂತ ಅಥವಾ ಬಡವ?

ಈಗ ನಿಮಗೆ ತಿಳಿದಿದೆ, ಜಗತ್ತಿನ ಇತರ ಜನರೊಡನೆ ಹೋಲಿಸಿದರೆ ನಿಮ್ಮ ನಿಲುವು ಏನು? ನೀವು ಐಶ್ವರ್ಯವಂತರೇ ಅಥವಾ ಬಡವರೇ?

ಈಗ ಈ ವಚನವನ್ನು ಓದಿ ದೇವರು ನಿಮಗೆ ಏನು ಹೇಳುತ್ತಿದ್ದಾರೆಂಬುದನ್ನು ತಿಳಿಯಿರಿ

* ಈ ವಾರದಲ್ಲಿ ಕರ್ತನ ಒಡೆತನ ಮತ್ತು ಪ್ರಭುತ್ವದ ಬಗ್ಗೆ ನಾನು ಏನು ಕಲಿತಿದ್ದೇನೆ?

* ನನ್ನ ಬಗ್ಗೆ ವಾಸ್ತವ ನಿಜಸ್ಥಿತಿಯನ್ನು ತಿಳಿದುಕೊಂಡಿದ್ದೇನಾ?

* ನಾನು ಐಶ್ವರ್ಯವಂತನೆಂಬ ನಿಜಸ್ಥಿತಿಯನ್ನು ಒಪ್ಪಿಕೊಂಡಿರುವೆನೋ ? ಇದೆಲ್ಲಾ ನನ್ನ ಶೋದನೆಗಳು ಎಂಬುದನ್ನು ನಾನು ಒಪ್ಪಿಕೊಂಡಿರುವೆನೊ?

* ನನ್ನ ಐಶ್ವರ್ಯವೆಲ್ಲಾ ದೇವರಿಂದ ಬಂದುದೆಂಬುದನ್ನು ನಾನು ನಿಜವಾಗಿ ನಂಬುತ್ತೇನೋ?

* ನಾನು ದೇವರ ಹಣಕ್ಕೆ ಬರೀ ಒಬ್ಬ ಮೇಲ್ವಿಚಾರಕ ಎಂಬುದನ್ನು ನಂಬುತ್ತೇನೋ?

* ನಾನು ದೇವರು ಕೊಟ್ಟ ಸಕಲ ಸಂಪತ್ತನ್ನು (ಹಣ ಒಳಗೊಂಡು) ಸರಿಯಾಗಿ ನಿರ್ವಹಿಸದಿದ್ದರೆ ಅದೊಂದು ಪಾಪ ಎಂಬುದನ್ನು ಒಪ್ಪಿಕೊಂಡಿರುವೆನೋ?

* ನನ್ನ ಪ್ರಾರ್ಥನೆ ಏನು?

## ವಾರ – 2

## ಮೇಲ್ವಿಚಾರಕರು (ಅಂತಿಮ)

"ದೇವರು ಎಲ್ಲಕ್ಕೂ ಒಡೆಯನಾಗಿದ್ದಾನೆ? ನಾನು ಅವನ ಮೇಲ್ವಿಚಾರಕನು

ರೊಡೀ ಎಕೊರ್ನ್ "ಸಂಪತ್ತಿನ ಮೂಲತತ್ವ"

ವಾರ –2 "ದೇವರು ಪರಲೋಕಕ್ಕೆ ಮತ್ತು ಭೋಲೊಕಕ್ಕೆ ಒಡೆಯನಾಗಿದ್ದಾನೆ ಎಂಬುದು ನಮಗೆ ಮನದಟ್ಟಾಗಿದೆ. ಎಲ್ಲಾ ವಸ್ತುಗಳೂ ಅವನಿಗೆ ಸೇರಿದ್ದು ಅವನು ನನಗೂ ಒಡೆಯನಾಗಿದ್ದಾನೆ ನನ್ನ ಸಂಪತ್ತಿಗೂ ಆತನೇ ಒಡೆಯ ನಾವು ಈ ವಾರ ಮೇಲ್ವಿಚಾರಕರಾಗಿ ದೇವರು ನಮಗೆ ಕೊಟ್ಟಿರುವ ಪಾತ್ರದ ಬಗ್ಗೆ ಯೋಚಿಸೋಣ.

ನೆನಪಿನ ವಚನ : ಮತ್ತಾಯ 25:21 "ಆಗ ಅವನ ಯಜಮಾನನು ಅವನಿಗೆ ನಂಬಿಗಸ್ತನಾದ ಒಳ್ಳೆಯ ಸೇವಕನೇ, ಒಳ್ಳೆಯದನ್ನು ಮಾಡಿದ್ದೀ. ಚಿಕ್ಕಕಾರ್ಯದಲ್ಲಿ ನೀನು ನಂಬಿಗಸ್ತನಾದ್ದರಿಂದ ನಾನು ನಿನ್ನನ್ನು ದೊಡ್ಡಕಾರ್ಯಗಳ ಮೇಲೆ ಅಧಿಕಾರಿಯನ್ನಾಗಿ ನೇಮಿಸುವೆನು. "ನೀನು ನಿನ್ನ ಯಜಮಾನನ ಸಂತೋಷದಲ್ಲಿ ಭಾಗ್ಯಿಯಾಗು" ಎಂದನು.

## ದಿನ–8

## ನಂಬಿಗಸ್ತನಾದ ಮೇಲ್ವಿಚಾರಕನು

"ಆದ್ದರಿಂದ ಜನರು ನಮ್ಮನ್ನು ಕ್ರಿಸ್ತನ ದಾಸರೆಂತಲೂ, ದೇವರ ಗೂಢಾರ್ಥಗಳ ವಿಷಯದಲ್ಲಿ ನಂಬಿಗಸ್ತ ಪಾರುಪತ್ಯಗಾರರೆಂದೂ ಎಣಿಸಬೇಕು. ಹೀಗಿರುವುದರಿಂದ ಪಾರುಪತ್ಯಗಾರನು ನಂಬಿಗಸ್ತನಾಗಿ ಕಂಡುಬರುವುದು ಅನವಶ್ಯ ವಾಗಿರುತ್ತದೆ...... ನಿನ್ನನ್ನು ಇತರರಿಗಿಂತಲೂ ವ್ಯತ್ಯಾಸವುಳ್ಳವನನ್ನಾಗಿ ಮಾಡಿದವರು ಯಾರು?ನೀನು ದೇವರಿಂದ ಪಡೆಯದಿರುವಂಥದ್ದು ನಿನ್ನಲ್ಲಿ ಏನಾದರೂ ಇದೆಯೋ? ಪಡೆದ ಮೇಲೆ ಪಡೆಯದವನಂತೆ ನೀನು ಹೆಮ್ಮೆ ಪಟ್ಟುಕೊಳ್ಳುವುದೇಕೆ? (1 ಕೊರಿಂಥ 4:1,2,7)

ಪವಿತ್ರ ಗ್ರಂಥದ ಪ್ರಕಾರ ಮೇಲ್ಲಿಚಾರಕಾನೆಂದರೆ: ದೇವರು ಸಂಪತ್ತನ್ನು, ದೇವರು ರೀತಿಯಲ್ಲಿ ನಿರ್ವಹಿಸಿ ದೇವರು ಮಹಿಮೆ ತರುವುದು.

ನೀನೊಬ್ಬ ಸೇವಕ' ಮತ್ತು "ಮೇಲ್ವಚಾರಕ" ಎಂಬುದರ ಬಗ್ಗೆ ನಿನಗೇನನಿಸುತ್ತದೆ?

.

“ಆಸ್ತಿಯನ್ನು ಒಪ್ಪಿಸು” ಎಂದರೆ ಒಬ್ಬನ ಆಶ್ರಯದಲ್ಲಿ ತನ್ನೆಲ್ಲಾ ಸಂಪತ್ತನ್ನು ಹಾಕುವುದು”

ದೇವರು ಬಹಳ ವಿಷಯಗಳಲ್ಲಿ ಅವರ ಅಸ್ತಿಯನ್ನು ನಮಗೆ ಒಪ್ಪಿಸಿದ್ದಾರೆ.

ದೇವರು ನಿಮಗೆ ಕೊಟ್ಟಿರುವ ವಿಷಯಗಳ ಬಗ್ಗೆ ಪಟ್ಟಿಮಾಡಿ.

* ಕುಟುಂಬ, * ಸಂಬಂದಗಳು * ಸಂಪತ್ತು * ಪ್ರತಿಭೆಗಳು * ಸಧಾವಕಾಶಗಳು

* ಜೀವನೋಪಾಯ * ಇತ್ಯದಿ.

ಹಕ್ಕು ಎಂಬುದರ ಅರ್ಥ “ನಾನು ಸಹಜವಾಗಿ ಎಲ್ಲಾ ತರದ ಸೌಕರ್ಯಗಳಿಗೆ ಮತ್ತು ವಿಶೇಷ ಗೌರವಗಳಿಗೆ ಯೋಗ್ಯನು ಎಂಬ ನಂಬಿಕೆ” ಇದರಿಂದಲೇ ನಾವು ದೇವರು ನಮಗೆ ಒಪ್ಪಿಸಿರುವ ಸಂಪತ್ತಿನ ಬಗ್ಗೆ ಸಂತೃಪ್ತರಾಗಿರುವುದಿಲ್ಲ. ನಾವು ನಂಬಿಗಸ್ತ ಮೇಲ್ವಿಚಾರಕರಾಗಲು, ನಾವು ಹಕ್ಕುದಾರರು ಎಂಬ “ಭಾವನೆ ನಮ್ಮನ್ನು ಹೇಗೆ ಭಾದಿಸುತ್ತದೆ?

ಹಕ್ಕುದಾರರು ಎಂಬ ಭಾವನೆಯಿಲ್ಲದೆ, ದೇವರು ನಿಮಗೆ ಒಪ್ಪಿಸಿರುವ ಸಕಲ ಸಂಪತ್ತನ್ನೂ ಸರಿಯಾಗಿ ನಿರ್ವಹಿಸಿ ಒಬ್ಬ ನಂಬಿಗಸ್ತ ಮೇಲ್ವಿಚಾರಕನಾಗಿರುವಂತೆ ಪ್ರಾರ್ಥಿಸಿ.

## ದಿನ–9

## ಮೇಲ್ವಿಚಾರಕತೆಯ ಸಾಮ್ಯ

ಮತ್ತಾಯ 25: 14–29 ಇಬ್ಬರು ನಂಬಿಗಸ್ತ ಮೇಲ್ವಿಚಾರಕರು ಮತ್ತು ಒಬ್ಬ ಸೋಮಾರಿ ಮೇಲ್ವಿಚಾರಕನ ನಡತೆಯ ಬಗ್ಗೆ ವಿವರಣೆ.

ಈ ಸಾಮ್ಯ ನಮಗೆ ಅನ್ವಯಿಸುತ್ತದೆ ದೇವರು ಒಡೆಯನುನಾನು ಮೇಲ್ವಿಚಾರಕರು/ಪಾರುಪತ್ಯಗಾರರು 10 ವರ್ಷದಲ್ಲಿನಾವು ಸಾಧಾರಣವಾಗಿ 10 ಲಕ್ಷ ರೂ.ಹಿಡಿದು 10 ಕೋಟಿರೂ. ತನಕ ವ್ಯವಹಾರ ನಡೆಸುತೇವೆ. ನಿಮ್ಮ ಲೆಕ್ಕದಡಿಬಂದು ಹೋದ ಈ ಲಕ್ಷ ಮತ್ತು ಕೋಟಿ ಹಣದ ಬಗ್ಗೆತಳಿದಾಗ ನೀವೇನು ಯೋಚಿಸುತ್ತೀರಿ?

ದೇವರು ಒಬ್ಬಬ್ಬ ಮೇಲ್ವಿಚಾರಕನಿಗೆ ಬೇರೆ ಬೇರೆ ತರದ ಸಂಪತ್ತನ್ನು ಕೊಟ್ಟಿದನ್ನು ಗಮನಿಸಿ. ನಾನು ಯೋಗ್ಯನು ಎಂಬ ಭಾವನೆ, ನಿಮಗೆ ದೇವರು ಕೊಟ್ಟ ಸಂಪತ್ತನ್ನು,ಮತ್ತು ಇತರರಿಗೆ ಕೊಟ್ಟ ಸಂಪತ್ತನ್ನು ಹೋಲಿಸಿ, ಅತ್ರುಪ್ತಿ ಹೊಂದಲು ಹೇಗೆ ಶೋಧನೆಯುಂಟಾಗುತ್ತದೆ?

ಮೈಗಳ್ಳನಾದ ದುಷ್ಟ ಮೇಲ್ಲಿಚಾರಕನು ಅವನ ಸೋಮಾರಿತನವನ್ನು (ನಿರ್ವಹಿಸಲು ಮನಸ್ಸಿಲ್ಲದುದನ್ನು) ಹೇಗೆ ಸಮರ್ಥಿಸಿ ಕೊಂಡನು?

ದೇವರ ಬಗ್ಗೆ ನೀವು ಹೇಗೆ ವರ್ಣಿಸುವಿರಿ? (ವಚನ21)

ದೇವರು ನಂಬಿಕೆಯ ಮೇಲ್ವಿಚಾರಕತೆಗೆ ಹೇಗೆ ಪ್ರತಿಫಲ ಕೊಡುತ್ತಾರೆ?

ಮತ್ತಾಯ 25 : 21 ಬಾಯಿಪಾಠ ಮಾಡಿ.

## ದಿನ 10

## ನನ್ನ ಮೇಲ್ವಿಚಾರಕತೆಯ ವ್ಯಕ್ತಿತ್ವ

2 ಬಗೆ ಮಿತವ್ಯಯಿ ಅಥವಾ ಉದಾರಿ. ನೀವು ಯಾವ ಬಗೆಯವರು?

ಮಿತವ್ಯಯಿ: ಎಲ್ಲವನ್ನು ಜಾಗರೂಕತೆಯಿಂದ ಮಿತವಾಗಿ ಬಳಸುವುದು ಅಥವಾ ಖರ್ಚುಮಾಡುವುದು. ವಿವೇಕದಿಂದ ಹಣಕೂಡಿಡುವುದು ಅಥವಾ ಉಳಿಸುವುದು. ದುಂದು ವೆಚ್ಚ ಮಾಡದಿರುವುದು.

ಜ್ಞಾನೋಕ್ತಿ : 14:23 ಎಲ್ಲಾ ಪ್ರಯಾಸದಲ್ಲಿ ಲಾಭವಿದೆ. ಹರಟೆ, ಮತ್ತು ಬಡತನಕ್ಕೆ ಮಾತ್ರ ದಾರಿ.

ಜ್ಞಾನೋಕ್ತಿ : 21:17 ಭೋಗಾಸಕ್ತನು ಕೊರತೆಪಡುವನು ದ್ರಾಕ್ಷಾರಸವನ್ನೂ ತೈಲವನ್ನೂ ಅಪೇಕ್ಷಿಸುವವನು ದರಿದ್ರನಾಗುವನು.

ಜ್ಞಾನೋಕ್ತಿ: 21:20 ಜ್ಞಾನವಂತನ ನಿವಾಸದಲ್ಲಿ ಆಯ್ದ ಐಶ್ವರ್ಯವೂ ಎಣ್ಣೆಯೂ ಇರುತ್ತದೆ. ಆದರೆ ಬುದ್ಧಿಹೀನನು ಇದ್ದದ್ದೆಲ್ಲವನ್ನೂ ನುಂಗಿ ಬಿಡುತ್ತಾನೆ.

ಜ್ಞಾನೋಕ್ತಿ: 31:13, 17 ಆಕೆಯು ಉಣ್ಣೆಯನ್ನು ಸೆಣಬನ್ನು ತಂದು ತನ್ನ ಕೈಗಳಿಂದ ಕುತೂಹಲವಾಗಿ ಕೆಲಸ ಮಾಡುವಳು ತನ್ನ ಕೈಕೆಲಸದ ಆದಾಯದಿಂದ ದ್ರಾಕ್ಷಿತೋಟ ನೆಡುವಳು. ಆಕೆಯು ತನ್ನ ಬಲದಿಂದ ನಡುವನ್ನು ಕಟ್ಟಿಕೊಂಡು ತನ್ನ ತೋಳುಗಳು ಶಕ್ತಿಯಿಂದ ಕೆಲಸ ಮಾಡುವಳು. ಈ ವಚನಗಳಿಂದ ಮಿತವ್ಯಯಿಯಾಗಿರುವ ಬಗ್ಗೆ ಏನು ಕಲಿತಿರಿ?

ಉದಾರಿ: ದಾರಾಳವಾಗಿ ಕೊಡುವುದು ಅಥವಾ ಹಂಚುವುದು ನಿಸ್ವಾರ್ಥಿ.

ಜ್ಞಾನೋಕ್ತಿ : 11:25 ಉದಾರಿಯು ಪುಷ್ಟನಾಗುವನು, ನೀರು ಹಾಯಿಸುವವನಿಗೆ ನೀರು ದೊರಕುವುದು.

ಕೀರ್ತನೆ: 112:5 ದಯೆತೋರಿಸಿ ಸಾಲ ಕೊಡುವವನಿಗೆ ಒಳೆಯದಾಗುವುದು. ಅವನು ತನ್ನ ಕಾರ್ಯಗಳನ್ನು ನ್ಯಾಯದಿಂದ ನಡೆಸುವನು

ಜ್ಞಾನೋಕ್ತಿ : 31:20 ಆಕೆಯು ಬಡವರಿಗಾಗಿ ಕೈ ಬಿಚ್ಚುವಳು. ಹೌದು ದಿಕ್ಕಿಲ್ಲದವರಿಗೆ ದಾನ ಮಾಡುವಳು.

ಈ ವಚನಗಳಿಂದ ಉದಾರಿಯಾಗಿರುವುದರ ಬಗ್ಗೆ ಏನು ಕಲಿತಿರಿ?

ನಿಮಗೆ ಅನ್ವಯಿಸುವ ಉತ್ತರಗಳನ್ನು ಗುರುತಿಸಿ!

**1. ನನ್ನ ಹಣವನ್ನು ನಿರ್ವಹಿಸಲು ನಾನು**

ಎ) ಅಂದಾಜು ಪಟ್ಟಿಮಾಡಿ ಅದಕ್ಕೆ ಅಂಟಿಕೊಂಡಿರುತ್ತೇನೆ

ಬಿ)ಹಣದ ಬಗ್ಗೆ ಬಹಳ ಎಚ್ಚರವಾಗಿರುತ್ತೇನೆ

ಸಿ)ಅದನ್ನು ಬಳಸಿ ಸಂತೋಷ ಪಡುವುದರ ಬಗ್ಗೆಯೇ ಯೋಚಿಸುತ್ತೇನೆ.

ಡಿ)ಈಗ ಬೇಕಾದ ಹಾಗೆ ಖರ್ಚುಮಾಡಿ ನಾಳೆಯ ಬಗ್ಗೆ ಚಿಂತಿಸುವುದಿಲ್ಲ

**2. ಊಟ ತಿಂಡಿಗೆ ಹೊರಗೆ ಹೋಗಬೇಕಾದಾಗ ನಾನು**

ಎ)ಸಾಕಷ್ಟು ಮಿತವಾಗಿ ಖರ್ಚುಮಾಡಲು ಪ್ರಯತ್ನಿಸುತ್ತೇನೆ

ಬಿ)ಫಲಹಾರ ಮಂದಿರಕೊಳಗೆ ಹೋಗುವ ಮೊದಲು ಅವರ ಹಣ ಪಟ್ಟಿಯನ್ನು ನೋಡುತ್ತೇನೆ.

ಸಿ)ಬೆಲೆ ನೋಡದೆ ನನಗೆ ಏನು ಇಷ್ಟವೋ ಅದನ್ನು ನೋಡಿ ಕೊಂಡುಕೊಳ್ಳುತ್ತೇನೆ.

ಡಿ)ತಿಂಡಿಗಳನ್ನು ಸಂತೋಷದಿಂದ ತಿಂದು, ಮಿಕ್ಕ ತಿಂಡಿಗಳನ್ನು ಮನೆಗೆ ತೆಗೆದುಕೊಂಡು ಹೋಗುತ್ತೇನೆ.

**3. ನಾನು ಅಂಗಡಿಯಿಂದ ಸಾಮಾನು ತರುವುದು ಹೇಗೆಂದರೆ**

ಎ)ಬೇಕಾದ ಸಾಮಾನಿನ ಪಟ್ಟಿಮಾಡಿ ಅದಕ್ಕೆ ಅಂಟಿಕೊಂಡಿರುತ್ತೇನೆ

ಬಿ)ನನಗೆ ಅವಶ್ಯಕತೆಯಿದ್ದಾಗ ಮಾತ್ರ ಖರೀದಿಸುತ್ತೇನೆ.

ಸಿ)ನಾನು ಪಟ್ಟಿ ಉಪಯೊಗಿಸುವುದಿಲ್ಲ, ಹಣಖರ್ಚುಮಾಡುವುದು ಎಂದರೆ ನನಗೆ ತುಂಬಾ ಇಷ್ಟ

ಡಿ)ನನಗೆ ಇಷ್ಟವಾದದ್ದು ಕಣ್ಣಿಗೆ ಕಂಡರೆ ಸಾಕು, ನಾನು ಅದನ್ನು ಕೊಂಡು ಕೊಳ್ಳುತ್ತೇನೆ.

**4. ಹಣ ನಿರ್ವಹಣೆಯ ಬಗ್ಗೆ ನಾನು ತುಂಬಾ ಪ್ರಾಮುಖ್ಯತೆ ಕೊಡುವುದು**

ಎ)ಹಣ ಕೂಡಿಡುವುದು ಮತ್ತು ಹಣ ಹೂಡುವುದು

ಬಿ)ಎಷ್ಟಾಗುವುದೊ ಅಷ್ಟನ್ನು ಕಷ್ಟಕಾಲಕ್ಕೆ ಕೊಡಿಡಲು ಪ್ರಯತ್ನಿಸುವುದು

ಸಿ)ನನ್ನ ಕುಟುಂಬಕ್ಕೆ ಕೊಡುವುದು

ಡಿ)ದೇವರಿಗೆ ಮತ್ತು ಇತರರಿಗೆ ಕೊಡುವುದಕ್ಕೆ ಖರ್ಚುಮಾಡುವುದು

ನೀವು ಗುರುತಿಸಿದ ಉತ್ತರಗಳನ್ನು ನೋಡಿ ನಿಮ್ಮನ್ನು ನೀವೇ ಹೆಚ್ಚು "ಮಿತವ್ಯಯಿ" ಎಂದು ಕೊಳ್ಳುತ್ತೀರೊ ಅಥವಾ "ಉದಾರಿಯೆಂದು" ಕೊಳ್ಳುತ್ತೀರೋ? (1&2 ಮಿತವ್ಯಯಿ 3&4 ಉದಾರಿ)

* ಮೇಲ್ವಿಚಾರಕನಾಗಿರುವುದರ ಬಗ್ಗೆ ನಿಮ್ಮಲ್ಲಿರುವ ಕೆಲವು ಸಾಮರ್ಥ್ಯಗಳೇನು?
* ಮೇಲ್ವಿಚಾರಕನಾಗಿರುವುದರ ಬಗ್ಗೆ ನಿಮ್ಮಲ್ಲಿರುವ ಕೆಲವು ಬಲಹೀನತೆಗಳೇನು?
* ನಿನ್ನಲ್ಲಿರುವ ಮೇಲ್ವಿಚಾರಕ ಬಲಹೀನತೆಗಳನ್ನು ಸೈತಾನನು ಹೇಗೆ ಆಕ್ರಮಣ ಮಾಡಬಹುದು?
* ನಿನ್ನಲ್ಲಿರುವ ಮೇಲ್ಲಿಚಾರಕ ಸಾಮರ್ಥ್ಯಗಳನ್ನು ದೇವರ ರಾಜ್ಯದ ಸೇವೆ ಮಾಡಲು ನಿನ್ನನ್ನು ಹೇಗೆ ಉಪಯೋಗಿಸಬಹುದು?

ಜ್ಞಾನೋಕ್ತಿ 23:4–5 ಐಶ್ವರ್ಯವಂತನಾಗುವುದಕ್ಕೆ ಪ್ರಯಾಸ ಪಡಬೇಡ, ಸ್ವಬುದ್ಧಿಯನ್ನೇ ಆಶ್ರಯಿಸಬೇಡ. ಇಲ್ಲದಿರುವದರ ಮೇಲೆ ನಿನ್ನ ದೃಷ್ಟಿಯನ್ನು ಇಡುವಿಯಾ? ಐಶ್ವರ್ಯವು ನಿಸ್ಸಂದೇಹವಾಗಿ ರೆಕ್ಕೆಗಳನ್ನು ಕಟ್ಟಿಕೊಂಡು ಹದ್ದಿನಂತೆ ಆಕಾಶದ ಕಡೆಗೆ ಹಾರಿ ಹೋಗುವುದು.

## ದಿನ – 11

## ಕಾರ್ಯಭಾರಿಯ ಉದಾಹರಣೆಗಳು (ಹಳೆ ಒಡಂಬಡಿಕೆ)

ನಾವು ಕಾರ್ಯಭಾರಿಗಳಾಗಿ "ತಾನು ಹೊಂದಿದ ಕೃಪಾವರವನ್ನು ಎಲ್ಲರ ಸೇವೆಯಲ್ಲಿ ಉಪಯೋಗಿಸಲಿ (1 ಪೇತ್ರ 4:10)

ಮಿತವ್ಯಯದ ಕಾರ್ಯಭಾರಿಯಾದ ಕೆಲವರಿಗೆ ಉದಾರತೆಯಿಂದ ಕೊಡುವ ಉದಾಹರಣೆಗಳು ಸವಾಲೆನಿಸಬಹುದು. ಮತ್ತು ಒಳ್ಳೆಯ ಕಾರ್ಯಭಾರಿಗಳಾಗಲೂ ಕರೆ  ನೀಡುವ ವಾಕ್ಯಗಳ ಮೇಲೆ ಸಮರ್ಥಿಸಿಕೊಳ್ಳುವ ಭಾವನೆ ಬರಬಹುದು.

ಉದಾರತೆಯ ಕಾರ್ಯಭಾರಿಯರಿಗೆ ಪರಿಶ್ರಮ ನಿರ್ವಹಣೆ ಬಗ್ಗೆ ಹೇಳುವ ವಾಕ್ಯಗಳು ಸವಾಲೆನಿಸಬಹುದು ಮತ್ತು ಉದಾರತ್ವದ ಬಗ್ಗೆ ಕೂಗಿ ಹೇಳುವ ವಾಕ್ಯಗಳನ್ನು ನೋಡಿ ಸಮರ್ಥಿಸಿಕೊಳ್ಳಬಹುದು.

ನಮ್ಮ ಕಾರ್ಯಭಾರಿಯ ವ್ಯಕ್ತಿತ್ವ ಒಂದು ವೇಳೆ ನಾವು ಅರ್ಥ ಮಾಡಿಕೊಂಡರೆ ನಮ್ಮ ಜವಾಬ್ದಾರಿಯಂತ ಕಾರ್ಯಗಳು ಒಳ್ಳೆಯ ರೀತಿಯಲ್ಲಿ ಸಮತೋಲನ ಮಾಡಲು ಮತ್ತು ಉದಾರತೆಯಾಗಿರುವುದರಲ್ಲಿ ಸಹಾಯವಾಗುತ್ತದೆ ಒಳ್ಳೆಯ ಕಾರ್ಯಭಾರಿಯಾಗಲು ಸಹಾಯ ಮಾಡುವ ವಚನಗಳನ್ನು ನೋಡಿರಿ.

**1) ಮನೆ: ಆದಿಕಾಂಡ 12:1–9**

ದೇವರು ಅಬ್ರಾಹಮನಿಗೆ ತನ್ನ ಮನೆಯನ್ನು ಬಿಟ್ಟು ಬರುವುದಕ್ಕೆ ಹೇಳಿದರು. ನೀವಿರುವಂಥ ಪ್ರದೇಶದಲ್ಲಿ ನೀವು ಒಬ್ಬ ಮಿತವ್ಯಯ ಅಥವಾ ಉದಾರತೆಯ ಕಾರ್ಯಭಾರಿಯಾಗಿ ದೇವರ ಮೇಲೆ ವಿಶ್ವಾಸವುಳ್ಳವರಾಗಿರಲು ಈ ವಾಕ್ಯವು ನಿಮಗೆ ಹೇಗೆ ಸಹಾಯವಾಗುವುದು?

**2)ಕುಟುಂಬ : ಆದಿಕಾಂಡ 22: 1–18**

ಆಬ್ರಾಹಾಮನು ತನ್ನ ಮಗನನ್ನು ಯಜ್ಞವಾಗಿ ಆರ್ಪಿಸುವುದಕ್ಕೆ ಕರೆಯಲ್ಪಟ್ಟನು. ಒಬ್ಬ ಮಿತವ್ಯಯಿ, ಈ ಉದಾರತೆಯ ಕಾರ್ಯಭಾರಿಯಾಗಿ ಕುಟುಂಬದೊಂದಿಗೆ ವಿಶ್ವಾಸವುಳ್ಳ ವರಾಗಿ, ಇಂಥಹ ಸವಾಲು ಗಳಿಗೆ ಸಮೀಪಿಸಲು ಈ ವಾಕ್ಯವು ನಿಮಗೆ ಹೇಗೆ ಸಹಾಯವಾಗುವುದು?

**3)ವೃತ್ತಿ ಜೀವನ : ದಾನಿಯೇಲ 5:1–28**

ದಾನಿಯೇಲನು ತನ್ನ ವೃತ್ತಿ ಜೀವನವನ್ನು ತ್ಯಾಗಮಾಡಿದನು. ನಿವು ಒಬ್ಬ ಮಿತವ್ಯಯಿ ಅಥವಾ ಉದಾರತೆಯ ಕಾರ್ಯಭಾರಿಯಾಗಿ ನಿಮ್ಮ ಜೀವನದೊಂದಿಗೆ ವಿಶ್ವಾಸವುಳ್ಳವರಾಗಿ ಇಂಥಹ ಸವಾಲುಗಳಿಗೆ ಸಮೀಪಿಸಲು ಈ ವಾಕ್ಯವು ನಿಮಗೆ ಹೇಗೆ ಸಹಾಯವಾಗುವುದು?

**4)ಹುದ್ದೆ ಅಥವಾ ಸ್ಥಾನ : 1 ಅರಸು 11**

ಸೊಲೊಮೊನನು ತನ್ನ ಅಧಿಕಾರ ಮತ್ತು ಸ್ಥಾನ, ಅನೇಕ ಪತ್ನಿಯರನ್ನು ಹೊಂದುವ ಮೂಲಕ ಅನೇಕ ರೀತಿಯ ಸಂಪತ್ತನ್ನು ಕೊಡಿಸುವ ಮೂಲಕ ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡನು.

ಈ ಒಂದು ಕೆಟ್ಟ ಉದಾಹರಣೆ ಯಿಂದ ಕಾರ್ಯಭಾರಿಯ ಪಾಠದ ಬಗ್ಗೆ ಏನನ್ನು ಕಲಿಯುವಿರಿ?

ಪ್ರತಿಫಲ : ದೇವರ ಸಂಪನ್ಮೂಲತೆಯಲ್ಲಿ ನಿಮ್ಮ ಕಾರ್ಯಭಾರಿಯ ಪಾತ್ರವನ್ನು ಅರ್ಥಮಾಡಿಕೊಳ್ಳಲು ಈ ವಾಕ್ಯವು ನಿಮಗೆ ಹೇಗೆ ಸಹಾಯವಾಗುವುದು?

# ದಿನ – 12

## ಕಾರ್ಯಭಾರಿಯ ಉದಾಹರಣೆಗಳು (ಹೊಸ ಒಡಂಬಡಿಕೆ)

ನಾವು ಹೊಸ ಒಡಂಬಡಿಕೆಯತ್ತ ಗಮನ ಹರಿಸಿದಾಗ ನಾವು ಉನ್ನತ ರೀತಿಯಲ್ಲಿ ಶರಣಾಗತರಾಗಲು ಯೇಸು ನೀಡಿರುವ ಆನೇಕ ಉದಾಹರಣೆಗಳಿವೆ.

ಯೇಸುವೇ ದೇವರು=ಯಜಮಾನ ನಮ್ಮ ಜೀವನ ಬಹಳ ಕಾಲ ನಮ್ಮದಾಗಿರುವುದಿಲ್ಲ. ಈ ಉದಾಹರಣೆಗಳನ್ನು ಪರಿಗಣಿಸಿ ಮತ್ತು ಒಬ್ಬ ಮಿತವ್ಯಯಿ ಅಥವಾ ಉದಾರತೆಯ ಕಾರ್ಯಭಾರಿಯಾಗಿರಲು, ಈ ಕಾರ್ಯಭಾರಿತನದ ಉದಾಹರಣೆಗಳು ನಿಮ್ಮ ಜೀವನಕ್ಕೆ ಹೇಗೆ ಅನ್ವಯವಾಗುವುದು ಎಂದು ಕೆಲವು ಪ್ರತಿಫಲಗಳನ್ನು ಬರೆಯಿರಿ.

**1)ವೃತ್ತಿ ಜೀವನ : ಮತ್ತಾಯ 4: 18–22**

ಎಲ್ಲ ಅಪೊಸ್ತಲರು ತಮ್ಮ ವೃತ್ತಿ ಜೀವನವನ್ನು (ಮೀನುಹಿಡಿಯುವ) ಬಿಟ್ಟು ಕೊಟ್ಟರು. ತೆರಿಗೆ ಸಂಗ್ರಹಿಸುವವರು, ಪೌಲನು ಸಹ ಫರಿಸಾಯನಾಗಿದ್ದ. ನಾವು ನಮ್ಮ ವೃತ್ತಿ ಜೀವನ ಬಿಟ್ಟು ಕೊಡದೇ ಇರಬಹುದು. ಆದರೆ ನಾವು ವೃತ್ತಿ ಜೀವನವನ್ನು ದೇವರಿಗೆ ಒಪ್ಪಿಸಿಬಿಡಬಹುದು.

**2)ಸಂಬಂಧಗಳು : ಯೋಹಾನ 15:18–25**

ಯೇಸು ಎಚ್ಚರಿಸುತ್ತಾರೆನೆಂದರೆ, ನಾವು ನಮ್ಮ ಸ್ನೇಹಿತರನ್ನು ಕಳಕೊಳ್ಳಬಹುದು. "ಜನರು ನಮ್ಮನ್ನು ದ್ವೇಷಿಸಬಹುದು. ಒಂದು ವೇಳೆ ಅವರು ನಮ್ಮ ಬಗ್ಗೆ ಹಿತವಾಗಿ ಮಾತಾಡಿದರೆ ಆಗ ನಾವು ಆತನ ಹಿಂಬಾಲಕರಲ್ಲ, ನಮ್ಮ ಎಲ್ಲಾ ಸಂಬಂಧಗಳು ದೇವರಿಗಾಗಿಯೇ ಇರಬೇಕು.

**3)ಆಸ್ತಿ : ಅಪೋಸ್ತಲರ ಕೃತ್ಯಗಳು 4:32–37**

ನಂಬಿದ್ದ ಮಂಡಲಿಯವರು ಆತ್ಮಿಕ ಕುಟುಂಬದ ಅವಶ್ಯಕತೆಗಳನ್ನ ಪೂರೈಸಲು ತಮಗಿದ್ದ ಆಸ್ತಿಯನ್ನೆಲ್ಲಾ ಸಂತೋಷದಿಂದ ಕೊಟ್ಟರು. ಈಗ ಅವರಿಗೆ ನೂರಾರು ಸಹೋದರರು ಸಹೋದರಿಯರು ತಾಯಂದಿರು ಮನೆಗಳೂ ಸಹಿತ ಇರುವರು.

(ಮಾರ್ಕ 10:29–30)

**4) ಭವಿಷ್ಯ : ಯಾಕೋಬ 4:13–17**

ಯೊಕೋಬನು ನಂಬಿಗಸ್ಥರನ್ನು ಎಚ್ಚರಿಸುತ್ತಾ ಯಾರು ಭವಿಷ್ಯದ ಬಗ್ಗೆ ಯೋಜನೆಗಳನ್ನು ಮಾಡುತ್ತಾರೋ ಅಂಥವರು ಮೊದಲು ದೇವರ ಚಿತ್ತವೇನಿದೆ ಎಂಬುದನ್ನು ತಿಳಿದುಕೊಂಡು ನಂತರ ತನ್ನ ಭವಿಷ್ಯದ ಯೋಜನೆಗೆ ಬದ್ಧರಾಗ ಬೇಕು.

**5)ಸಮಸ್ತವು : ಲೂಕ 14:33**

"ಹಾಗೆಯೇ ನಿಮ್ಮಲ್ಲಿ ಯಾವನೇ ಆಗಲಿ ತನಗಿರುವುದನ್ನೆಲ್ಲಾ ಬಿಟ್ಟುಬಿಡದೆ ಹೋದರೆ ಅವನು ನನ್ನ ಶಿಷ್ಯನಾಗಿರಲಾರನು."

**ಫಲಿತಾಂಶ : ಮತ್ತಾಯ 19 : 29**

"ಮತ್ತು ನನ್ನ ಹೆಸರಿನ ನಿಮಿತ್ತ ಮನೆಗಳನ್ನಾಗಲಿ, ಅಣ್ಣತಮ್ಮಂದಿರನ್ನಾಗಲಿ, ಅಕ್ಕತಂಗಿಯರನ್ನಾಗಲಿ, ತಂದೆಯನ್ನಾಗಲಿ, ತಾಯಿಯನ್ನಾಗಲಿ, ಮಕ್ಕಳನ್ನಾಗಲಿ, ಭೂಮಿಯನ್ನಾಗಲಿ ಬಿಟ್ಟು ಬಿಟ್ಟಿರುವವರೆಲ್ಲರಿಗೆ ಅನೇಕ ಪಾಲು ಹೆಚ್ಚಾಗಿ ಸಿಕ್ಕುವುದು. ಮತ್ತು ಅವರು ನಿತ್ಯಜೀವನಕ್ಕೆ ಬಾಧ್ಯರಾಗುವರು.

ಪ್ರತಿಫಲನ : ದೇವರ ಸಂಪನ್ಮೂಲತೆಯಲ್ಲಿ ಕಾರ್ಯನಿರ್ವಾಹಕನಾಗಿ ನಿಮ್ಮ ಪಾತ್ರವನ್ನು ಈ ಪಾಠದ ಮೂಲಕ ಹೇಗೆ ಅರ್ಥಮಾಡಿಕೊಳ್ಳಿವಿರಿ.

## ದಿನ – 13

## ಕಾರ್ಯಭಾರಿತನದ ಸವಾಲುಗಳು

ಸೈತಾನನಿಗೆ ದೇವರ ಯೋಜನೆಗಳು ಗೊತ್ತು ಮತ್ತು ನಮಗೆ ಅನೇಕ ರೀತಿಯಾಗಿ ಶೋಧನೆ ಕೊಡುತ್ತಾನೆ. "ಇಹಲೋಕದ ನಡವಳಿಕೆಯನ್ನು ಅನುಸರಿಸದೇ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ" (ರೋಮಾಪುರ 12:2) ನಾವು ಯಾವಾಗಲೂ ಆತನ ಯೋಜನೆಗಳಿಗೆ ಜಾಗ್ರತರಾಗಿ ಪ್ರಾರ್ಥಿಸಬೇಕು. (2ನೇ ಕೊರಿಂಥಿಯವರಿಗೆ 2:1)

ಮಿತವ್ಯಯಿ ಅಥವಾ ಉದಾರತೆಯುಳ್ಳ ಕಾರ್ಯಭಾರಿ ಯಾಗಿರಲು ಸವಾಲು ಎದುರಿಸುತ್ತಿರುವವರಿಗೆ ಈ ವಾಕ್ಯಗಳು ಸಹಾಯವಾಗಬಹುದು.

**1) ಚಿಂತೆ: ಮತ್ತಾಯ 6:25**

ಈ ಕಾರಣದಿಂದ ನಮ್ಮ ಪ್ರಾಣಧಾರಣೆಗೆ ಊಟ ಮಾಡಬೇಕು ಏನು ಕುಡಿಯಬೇಕು ನಮ್ಮ ದೇಹ ರಕ್ಷಣೆಗೆ ಏನು ಹೊದ್ದುಕೊಳ್ಳಬೇಕು ಎಂದು ಚಿಂತೆ ಮಾಡಬೇಡಿರಿ ಎಂಬುದಾಗಿ ನಿಮಗೆ ಹೇಳುತ್ತೇನೆ ಊಟಕ್ಕಿಂತ ಪ್ರಾಣವು ಉಡುಪಿಗಿಂತ ದೇಹವು ಮೇಲಾದದ್ದಲ್ಲವೇ.

ಯಾವಾಗ ನಾವು ಚಿಂತೆಗೊಳಗಾಗುತ್ತೇವೆಯೋ ಆಗ ಶೋಧನೆಗಳಿಂದ ನಂಬಿಗಸ್ಥರಾಗುವ ಬದಲು ಆತಂಕಗೊಳ್ಳುತ್ತೇವೆ. ಅಂಥ ಸಮಯದಲ್ಲಿ ನಾವು ದೇವರು ನಿಜವಾಗಿಯೂ ನಮ್ಮನ್ನು ಸಂರಕ್ಷಿಸುತ್ತಾರಾ ಎಂದು ಪ್ರಶ್ನೆ ಮಾಡುತ್ತೇವೆ. ನಮ್ಮ ಅವಶ್ಯಕತೆಗಳನ್ನು ಪೂರೈಸಿದಾರೋ ಅವರು ನಮ್ಮನ್ನು ಭವಿಷ್ಯದಲ್ಲಿಯೂ ನೋಡಿಕೊಳ್ಳುವರೋ ಎಂಬುದಾಗಿ ವಿಶ್ವಾಸವೆಂಬುದು ದೃಷ್ಟಿಕೋನ ಮತ್ತು ನಿರ್ಧಾರವನ್ನು ಒಳಗೊಂಡಿರುತ್ತದೆ. ದೈವಿಕವಾದ ದೃಷ್ಟಿಕೋನ ಹೊಂದಲು ಶಿಷ್ಯನ ಶರಣಾಗತಿ ವಿಶ್ವಾಷವುಳ್ಳ ನಿರ್ಧಾರಕ್ಕಾಗಿ ಪ್ರಾರ್ಥಿಸಿರಿ.

**2) ಆದ್ಯತೆ:**

ಮತ್ತಾಯ 6:33 "ನೀವು ಮೊದಲು ದೇವರ ರಾಜ್ಯಕ್ಕಾಗಿಯೂ, ನೀತಿಗಾಗಿಯೂ ತವಕಪಡಿರಿ ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು.

ಮಿತವ್ಯಯಿ ಆದವರು ಜವಾಬ್ದಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು

ಯೋಚನೆ ಹೊಂದುವರು. ಉದಾರತೆಯುಳ್ಳವರು ಕೊಡುವುದಕ್ಕೆ ಹೆಚ್ಚಿನ ಆದ್ಯತೆ ನೀಡುವರು ಮೊದಲು ದೇವರ ರಾಜ್ಯವನ್ನು ಹುಡುಕಿದಾಗ ಕಾರ್ಯಬಾರಿತನದಲ್ಲಿ ಜವಾಬ್ದಾರಿ ಮತ್ತು ಉದಾರತೆಯಲ್ಲಿ ಸಮತೋಲನ ಹೊಂದಬಹುದಾಗಿದೆ.

ದೇವರ ರಾಜ್ಯವನ್ನು ಹುಡುಕಿದಾಗ ಕಾರ್ಯಬಾರಿತನದಲ್ಲಿ ಜವಾಬ್ದಾರಿ ಮತ್ತು ಉದಾರತೆಯಲ್ಲಿ ಸಮತೋಲನ ಹೊಂದಬಹುದಾಗಿದೆ.

ದೇವರ ಸಂಪನ್ಮೂಲತೆಯನ್ನು ನಿರ್ವಹಿಸುವುದರಿಂದ ದೇವರ ಮಹಿಮೆಗೆ ದಾರಿ ಮಾಡಿಕೊಡುವುದು.

ದೇವರ ಚಿತ್ತಕ್ಕನುಸಾರವಾಗಿ ಆದ್ಯತೆಯನ್ನು ಕೊಡುವುದಕ್ಕೋಸ್ಕರ ನಮ್ಮ ಹೃದಯಕ್ಕಾಗಿ ಪ್ರಾರ್ಥಿಸೋಣ ಹೊರತು ನಮ್ಮ ಒಲವಿನ ಕಡೆಗಲ್ಲ.

**3) ಉದ್ಯೋಗಿ: ಜ್ಞಾನೋಕ್ತಿಗಳು 13:4**

"ಸೋಮಾರಿಯ ಆಸೆಯು ವ್ಯರ್ಥ ಉದ್ಯೋಗಿಯ ಆತ್ಮಕ್ಕೆ ಪುಷ್ಟಿ.

**ಜ್ಞಾನೋಕ್ತಿಗಳು 10:4**

"ಜೋಲುಗೈ ದಾರಿದ್ರ್ಯ; ಚುರುಕುಗೈ ಐಶ್ವರ್ಯ"

ಕೆಲವು ಜನರು ಸಹಜವಾಗಿ ಬೇರೆಯವರಿಗಿಂತ ಕಷ್ಟಪಟ್ಟು ಕೆಲಸಮಾಡುವವರಾಗಿ ಮತ್ತು ಶ್ರದ್ಧೆಯುಳ್ಳವರಾಗಿರುತ್ತಾರೆ. ಸತ್ಯವೇನೆಂದರೆ ನಾವೆಲ್ಲರೂ ನಮ್ಮದೇ ಆದ ಮಾರ್ಗದಲ್ಲಿ ಕಷ್ಟಪಟ್ಟು ಕೆಲಸಮಾಡುತ್ತೇವೆ ಮತ್ತು ಕೆಲವದರಲ್ಲಿ ಹಾಗೆ ಬಿಡುತ್ತೇವೆ.

ಯೇಸು ನಮಗೆ ಸಲಿಸಾಗಿ ಹೋಗುವ ಮಾರ್ಗಗಳಲ್ಲಿ ಇಕ್ಕಟ್ಟಾದ ಮಾರ್ಗದಲ್ಲಿ ಹೋಗಲು ನಾವು ಎಲ್ಲಾ ರೀತಿಯಾಗಿ ಕಷ್ಟಪಡಬೇಕು ಎಂದು ಸವಾಲು ಹಾಕುತ್ತಾರೆ ಶಿಷ್ಯತ್ವ ವೆಂದು ಜವಾಬ್ದಾರಿಗಳನ್ನು ಹೊಂದಿರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. "ನಮ್ಮ ರಕ್ಷಣೆಗೋಸ್ಕರ ನಾವು ಕಷ್ಟ ಪಡಬೇಕು. (ಫಿಲಿಪ್ಪಿ 2:2) ಮತ್ತು "ನಮ್ಮ ನಂಬಿಕೆಯನ್ನು ಕ್ರಿಯೆಗಳ ಮೂಲಕ ತೋರಿಸಬೇಕು. (ಯಕೋಬ 2:14)

ನಿಮಗೆ ನೇಮಕವಾದ ಸಂಪನ್ಮೂಲತೆಯನ್ನು ನಿರ್ವಹಿಸುವುದಕ್ಕಾಗಿ ಮತ್ತು ನೀವು ಬದಲಾವಣೆ ಹೊಂದಲು ಯಾವುದೇ ಸೋಮಾರಿತನ ತಡೆಹಿಡಿಯದಂತೆ ಪ್ರಾರ್ಥಿಸಿರಿ.

ನಿಮ್ಮನ್ನು ಹಾನಿಮಾಡುವ ಯವುದೇ ರೀತಿಯ ಸೋಮಾರಿತನವನ್ನು ಇನ್ನೊಬ್ಬ ಶಿಷ್ಯರೊಂದಿಗೆ ಅರಿಕೆ ಮಾಡಿ ನಿಮ್ಮ ಹೃದಯವನ್ನು ನಿರ್ಮಲವಾಗಿಸಿಕೊಳ್ಳಿ, ಮತ್ತು ದೇವರ ಸಂಪನ್ಮೂಲತೆಯಲ್ಲಿ ಒಬ್ಬ ಉತ್ತಮ ಕಾರ್ಯಭಾರಿಯಾಗಿ ನಿಮ್ಮನ್ನು ಅಣಿಗೊಳಿಸಿರಿ

4) ನಿರ್ಧಾರ : ಯಹೋಶವ 24:15

"ಯಹೋವನನ್ನು ಸೇವಿಸುವುದು ನಿಮಗೆ ಸರಿಕಾಣದಿದ್ದರೆ ಯಾರನ್ನು ಸೇವಿಸ ಬೇಕೆಂದಿದ್ದಿರಿ? ನಿರ್ಧಾರ ಇಲ್ಲದೇ ಯಾವ ಗುಣಗಳು ಬದಲಾವಣೆಯಾಗಲಾರದು.

ಈ ದಿನದಂದು ನಿಮ್ಮ ಕಾರ್ಯಭಾರಿತನದಲ್ಲಿ ಎದುರಿಸುತ್ತಿರುವ ಸವಾಲುಗಳಿಂದ ಹೊರಬರಲು ಕೆಲವು ನಿರ್ಧಾರಗಳನ್ನು ಬರೆಯಿರಿ.

ನಿರ್ಧಾರ 1:

ನಿರ್ಧಾರ 2:

ನಿರ್ಧಾರ 3:

## ದಿನ – 14

## ದೇವರ ಸಂತೋಷ

ಎರಿಕ್ ಲಿಡೆಲ್ ಅವರ "ಬೆಂಕಿಯ ರಥಗಳ" ಲ್ಲಿನ ಪ್ರಸಿದ್ಧವಾದ ಹೇಳಿಕೆ "ನಾನು ಓಡುವಾಗ ದೇವರ ಸಂತೋಷವನ್ನು ಅನುಭವಿಸುತ್ತೇನೆ" ನಾವು ದೇವರ ಸಂಪನ್ಮೂಲತೆಗಳನ್ನು ಉತ್ತಮವಾಗಿ ನಿರ್ವಹಿಸಿದಾಗ ನಾವು ಕೊಡುವವರಾಗಿರುತ್ತೇವೆ. ಮತ್ತು ದೇವರ ಸಂತೋಷವನ್ನು ಅನುಭವಿಸುತ್ತೇವೆ.

ಕೆಳಗಿನ ವಚನಗಳನ್ನು ಗಮನಿಸಿರಿ ಮತ್ತು ನೀವು ಕೊಡುವುದರಲ್ಲಿ ದೇವರ ಸಂತೋಷದ ಪ್ರತಿಫಲನಗಳನ್ನು ಬರೆಯಿರಿ.

**1) ದೇವರ ಸಂತೋಷ:**

ಯೋಹಾನ 3:16 ಆತನು ತನ್ನ ಮಗನನ್ನು ಕೊಟ್ಟನು: ಸ್ವಇಚ್ಛೆಯಿಂದ, ಸಂತೋಷದಿಂದ, ನಿರೀಕ್ಷಿಸುತ್ತಿರುವವನಾಗಿ.

**2) ಯೇಸುವಿನ ಸಂತೋಷ:**

ಇಬ್ರಿಯರಿಗೆ 12:2 "ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕೋಸ್ಕರ ಅವಮಾನವನ್ನು ಅಲಕ್ಷ್ಯ ಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡನು".

ಲೂಕ 9:57–58 ಯೇಸು ಕಷ್ಟಕರವಾದ ಜೀವನ ಶೈಲಿಯನ್ನು ಆರಿಸಿ ಕೊಂಡನು. ಸ್ವರ್ಗದಲ್ಲಿರುವುದಕ್ಕಿಂತ ಇಹಲೋಕಕ್ಕೆ ಬರುವುದಲ್ಲಿಯೂ ಸಹ

**3) ನಮ್ಮ ಸಂತೋಷ:**

ಅಪೋಸ್ತಲರ ಕೃತ್ಯಗಳು 20:35 "ತೆಗೆದುಕೊಳ್ಳುವುದಕ್ಕಿಂತ ಕೊಡುವುದೇ ಹೆಚ್ಚಿನ ಭಾಗ್ಯ"

ಆಶೀರ್ವಾದ ಹೊಂದಿದವರು = ಅತಿಶಯವಾದ ಸಂತೋಷ 2 ಕೊರಿಂಥ 9:7

"ಸಂತೋಷವಾಗಿ ಕೊಡುವವನ ಮೇಲೆ ದೇವರ ಪ್ರೀತಿಯುಂಟು" ಕೊಡುವುದು ನಮ್ಮ ಸಂತೋಷ.

ನೀವು ಕೊಡುವುದರಲ್ಲಿ ದೇವರ ಸಂತೋಷದ ಬಗ್ಗೆ ನಿಮ್ಮ ಯೋಚನೆ ಯಾವ ರೀತಿ ಇದೆ?

**ಕೂಡಿಕೆ:** ಹಣದ ಹರಿವಿನ ಯೋಜನೆ

ಮುಂಗಡ ಲೆಕ್ಕ ನಿಮ್ಮ ಹಣ ಎಲ್ಲಿ ಹೋಯಿತು ಎಂದು ಯೋಚಿಸುವುದಕ್ಕಿಂತ ಎಲ್ಲಿ ಹೋಗಬೇಕು ಎಂದು ಹೇಳುತ್ತದೆ.

ಒಂದು ವೇಳೆ ಪ್ರತಿ ತಿಂಗಳಿಗೆ 20,000 ಕ್ಕಿಂತ ಅಧಿಕ ಹಣ 10 ವರ್ಷಗಳವರೆಗೆ ಹೂಡಿಕೆ ಮಾಡಿದರೆ ನಮ್ಮ ಖಾತೆಯಲ್ಲಿ 24 ಲಕ್ಷಕ್ಕಿಂತಲೂ ಹೆಚ್ಚು ಮೊತ್ತ ಉಳಿತಾಯವಾಗುವುದು. ಮುಂಗಡ ಲೆಕ್ಕ ಮಾಡಿರಿ ಪ್ರತಿ ರೂಪಾಯಿಯ ಲಾಭಕ್ಕೆ ವಹಿಸಿರಿ ಖರ್ಚು ಮಾಡಲು ಒಂದು ಭಾಗವನ್ನು ಗುರುತಿಸಿರಿ ಆದ್ದರಿಂದ ಲಾಭ – ಖರ್ಚು= ಸೊನ್ನೆ.

ಪ್ರತಿ ತಿಂಗಳು ನಿಮ್ಮ ಮುಂಗಡ ಪತ್ರವನ್ನು ಸಮತೋಲನದಲ್ಲಿಟ್ಟುಕೊಳ್ಳುವುದೇ ನಿಮಗೆ ಸವಾಲಾಗಿದೆ.

ನಿಮಗೆ ಸಹಾಯ ಬೇಕೆಂದರೆ ನಿಮ್ಮ ನಾಯಕರೊಂದಿಗೆ ಮಾತನಾಡಿ ಅವರ ಸಲಹೆ ಮೇರೆಗೆ ಬಡ್ಜಟ್ ಹಾಕಿ ತಿಂಗಳಿನ ಎಲ್ಲ ಖರ್ಚನ್ನು ಸೇರಿಸಿ.

**ಖರ್ಚುವೆಚ್ಚ ಭಾಗ:** ಕಾಣಿಕೆ ಮನೆ ಬಾಡಿಗೆ ಮಕ್ಕಳ ಶಿಕ್ಷಣದ ಖರ್ಚು, ನೀರು, ವಿದ್ಯುತ್, ಗ್ಯಾಸ್, ಕಿರಾಣಿ ಖರ್ಚು, ಬಟ್ಟೆ, ಇ.ಎಮ್.ಐ, ಹೊರಗಡೆ ಆಹಾರ ಸೇವನೆ, ವೈಯಕ್ತಿಕ (ಕೇಶರಾಶಿ, ಮುಖದ ಶೃಂಗಾರ ಇತ್ಯಾದಿ) ವೈದ್ಯಕೀಯ, ಮನರಂಜನೆ (ಚಲನಚಿತ್ರ, ಕ್ರೀಡೆ) ಉಡುಗೊರೆ ಮತ್ತು ಉಳಿತಾಯ.

ನಾವು ಬಡ್ಜಟ್‌ನ್ನು ಶುರು ಮಾಡಿದಾಗ ಯಾರೂ ಅದರ ತಕ್ಕ ಹಾಗೆ ಇರುವುದಿಲ್ಲ.

**ಕುಂದು ಹೋಗದಿರಿ:** ನಾವು ಬಡ್ಜಟ್ಟನ್ನು ಬರೆದಿಟ್ಟುಕೊಂಡಾಗ ಅದಕ್ಕನುಗುಣವಾಗಿ ನಡೆಯಲು 3 ತಿಂಗಳು ಬೇಕಾಗುತ್ತದೆ. ಲಕ್ಷಗಟ್ಟಲೆ ಸಂಪಾದಿಸುವುದಕ್ಕೆ ನೀವು ಬಹಳ ಕಷ್ಟಪಟ್ಟು ಕೆಲಸ ಮಾಡುತ್ತೀರಿ, ಅದನ್ನು ಹಾಳುಮಾಡುವುದೇಕೆ!

ಸಹಾಯ ತೆಗೆದು ಕೊಳ್ಳಿರಿ, ಜವಾಬ್ದಾರಿಯುಳ್ಳ ಹೊಣೆಗಾರರನ್ನು ಈ ಯೋಜನೆಯಲ್ಲಿ ಸೇರಿಸಿಕೊಳ್ಳಿ.

## ವಾರ 3

## ಸಾಲವೆಂಬ ಆನೆ

'ನನ್ನ ಹೃದಯವು ಯಾವಾಗಲೂ ದೇವರ ಹಣವನ್ನು ಹಿಂಬಾಲಿಸುತ್ತದೆ" ರಾಂಡಿ ಅಲ್ಕಾರ್ನ್, ದಿ ಟ್ರೆಸ್ಸುರೆ ಪ್ರಿನ್ಸಿಪಲ್

ವಾರ 1: ಭೂಮಿ ಆಕಾಶದ ಒಡೆಯನ್ನನ್ನು, ನಾವು ಗುರುತಿಸುತ್ತೇವೆ

ವಾರ 2: ದೇವರು ನಮಗೆ ಒಪ್ಪಿಸಿರುವ ಎಲ್ಲಾ ಸಂಪತ್ತಿಗೆ ನಾವು ವ್ಯವಸ್ಥಾಪಕರು/ ಪಾರುಪತ್ಯಗಾರರು

ವಾರ 3: ನಾವು ಈಗ ಸೈತಾನನ "ಸಾಲ" ಅನ್ನುವ ದೊಡ್ಡ ಕುತಂತ್ರವನ್ನು ಬಹಿರಂಗಪಡಿಸ ಬೇಕು

ಬಾಯಿಪಾಠ ಮಾಡಬೇಕಾದ ವಚನ : ರೋಮಾಪುರದವರಿಗೆ 13: 8 ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಋಣವೇ ಹೊರತು ಬೇರೆ ಯಾವ ಸಾಲವೂ ನಿಮಗೆ ಇರಬಾರದು. ಮತ್ತೊಬ್ಬರನ್ನು ಪ್ರೀತಿಸುವವನು ನ್ಯಾಯಪ್ರಮಾಣವನ್ನೆಲ್ಲಾ ನೆರವೇರಿಸಿದ್ದಾನೆ.

## ದಿನ – 15

### ದೇವರ ಒದಗಿಸುವಿಕೆ

1) ಆದಿಕಾಂಡ 22:14 ಅಬ್ರಹಾಮನು ಆ ಸ್ಥಳಕ್ಕೆ ಯಹೋವ ಯಾರೆ ಎಂದು ಹೆಸರಿಟ್ಟನು. ಯಹೋನ ಬೆಟ್ಟದಲ್ಲಿ ಒದಗುವುದು ಎಂಬುದಾಗಿದೆ.

* ದೇವರು ಅಬ್ರಹಾಮನಿಗೆ ತನ್ನ ಮಗನನ್ನು ಕರೆದಾಗ ಅಬ್ರಾಹಾಮನಿಗೆ ಅವಶ್ಯಕವಾದದ್ದನ್ನು ಒದಗಿಸುವುದು.
* ಯಾವ ಸನ್ನಿವೇಶದಲ್ಲಿ ದೇವರು ನಮಗೆ ಒದಗಿಸಲು ಸಾಧ್ಯವಿಲ್ಲ ಎಂಬುದಾಗಿ ಶೋಧನೆ ಬರುತ್ತದೆ.

2) ಮತ್ತಾಯ 6:26 "ಆಕಾಶದಲ್ಲಿ ಹಾರಾಡುವ ಹಕ್ಕಿಗಳನ್ನು ನೋಡಿರಿ ಅವು ಬಿತ್ತುವುದಿಲ್ಲ, ಕೊಯ್ಯುವುದಿಲ್ಲ ತುಂಬಿಟ್ಟುಕೊಳ್ಳುವುದಿಲ್ಲ ಆದಾಗ್ಯೂ ಪರಲೋಕದಲ್ಲಿರುವ ನಿಮ್ಮ ತಂದೆಯು ಅವುಗಳನ್ನು ಸಾಕಿ ಸಲಹುತ್ತಾನೆ. ಅವುಗಳಿಗಿಂತ ನೀವು ಹೆಚ್ಚಿನವರಲ್ಲವೋ?"

* **ಯೇಸುವಿನ ಸವಾಲು:** ದೇವರು ಹಾರಾಡುವ ಪಕ್ಷಿಗಳಿಗೆ ಒದಗಿಸುವ ಹಾಗೇ ನಮಗೂ ಸಹ ಒದಗಿಸುವರು ಎಂಬುದಾಗಿ ನಂಬಿಕೆಯಿಡಿರಿ.
* ದೇವರು ನಿಮಗೆ ಹೇಗೆ ಒದಗಿಸಿದ್ದಾರೆ?

3) ಫಿಲಿಪ್ಪಿ 4:19 "ನನ್ನ ದೇವರು ಕ್ರಿಸ್ತ ಯೇಸುವಿನ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು".

* ದೇವರು ನಮ್ಮ ಎಲ್ಲ ಅವಶ್ಯಕತೆಗಳನ್ನು ಪೂರೈಸುವರು, ಎಂದು ಪೌಲನು ಎಲ್ಲ ಶಿಷ್ಯರನ್ನು ಉತ್ಸಾಹಪಡಿಸುತ್ತಾನೆ. ದೇವರು ತಕ್ಷಣವೇ ನಿಮ್ಮ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಯಾವ ರೀತಿ ಪ್ರಾರ್ಥಿಸುವಿರಿ?

4) 1ತಿಮೊಥೆ 6:17–19 'ಇಹಲೋಕ ವಿಷಯದಲ್ಲಿ ಐಶ್ವರ್ಯವುಳ್ಳವರು ಅಹಂಕಾರಿಗಳಾಗಿರದೆ ಅಸ್ಥಿರವಾದ ಐಶ್ವರ್ಯದ ಮೇಲೆ ನಿರೀಕ್ಷೆಯನ್ನಿಡದೆ ನಮ್ಮ ಅನುಭೋಗಕ್ಕೋಸ್ಕರ ನಮಗೆ ಎಲ್ಲವನ್ನು ಹೇರಳವಾಗಿ ದಯಪಾಲಿಸುವ ದೇವರ ಮೇಲೆ ನಿರೀಕ್ಷೆಯನ್ನಿದೆ ಬೇಕೆಂತಲೂ ವಾಸ್ತವವಾದ ಜೀವವನ್ನು ಹೊಂದುವದಕೋಸ್ಕರ ಅವರು ಒಳ್ಳೆದನ್ನು ಮಾಡುವವರು ಸತ್ಕಾರ್ಯಾಗಳಲ್ಲಿ ಐಶ್ವರ್ಯವಂತರು ದಾನಧರ್ಮಗಳನ್ನು ಮಾಡುವವರು ಪರೋಪಕಾರ

ಮಾಡುವವರೂ ಆಗಿದ್ದು ಮುಂದಿನ ಕಾಲಕ್ಕೆ ಒಳ್ಳೆಯ ಆಸ್ತಿವಾರವಾಗುವಂಥಗಳನ್ನು ತಮಗೆ ಕೂಡಿಸಿಟ್ಟು ಕೊಳ್ಳಬೇಕೆಂತಲೂ ಅವರಿಗೆ ಆಜ್ಞಾಪಿಸು.

* ದೇವರು ಒದಗಿಸುವಿಕೆಯ ಮೇಲೆ ಭರವಸೆವನ್ನಿಡದೇ ಇದ್ದಾಗ ಶ್ರೀಮಂತಿಕೆ (ನಮ್ಮ) ಏನಾಗುತ್ತೆ ಎಂದು ಪೌಲನು ಹೇಳುತ್ತಾನೆ?

* ನಮ್ಮ ಸಂತೋಷಕೋಸ್ಕರ ದೇವರು ಎಲ್ಲವನ್ನು ಆಶೀರ್ವದಿಸುವರು ಎಂದು ಏಕೆ ಯೋಚಿಸುತ್ತಿರಿ?

* ಈ ಆಜ್ಞೆ ನಿಮಗೆ ಹೇಗೆ ಅನ್ವಯವಾಗುತ್ತದೆ?

* ನಿಮ್ಮ ಜೀವನದಲ್ಲಿರುವ ದೇವರ ಒದಗಿಸುವಿಕೆಯ ದೃಷ್ಟಿಕೋನಕ್ಕಾಗಿ ಪ್ರಾರ್ಥಿಸಿರಿ.

## ದಿನ 16
## ವಿಶ್ವ ಸಂದೇಶ 1

ಪರಿಚಯ : ಸೈತಾನನ ಯೋಜನೆಗಳು

ವಿಮೋಚನಕಾಂಡ 22:25 ನಿನ್ನ ಬಳಿಯಲ್ಲಿ ಬಡವರಾಗಿರುವ ನನ್ನ ಜನರಿಗೆ ಹಣವನ್ನು ಸಾಲವಾಗಿ ಕೊಟ್ಟರೆ ಅವರಿಂದ ಬಡ್ಡಿ ತಕ್ಕೊಳ್ಳಬಾರದು. ಇಲ್ಲವೆ ಅವರ ಮೇಲೆ ಬಡ್ಡಿ ಹೊರಿಸ ಬೇಡ.

ಯೋಹಾನನು 8:44 ನೀವು ನಿಮ್ಮ ತಂದೆಆದ ಸೈತಾನನಿಗೆ ಸಂಬಂಧಪಟ್ಟವರಾಗಿದ್ದೀರಿ. ನಿಮ್ಮ ತಂದೆಯ ದುರಾಶೆಗಳನ್ನೇ ನೀವು ಮಾಡುವುದಕ್ಕೆ ಇಚ್ಛೈಸುತ್ತೀರಿ: ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ಸತ್ಯದಲ್ಲಿ ನಿಲ್ಲಲಿಲ್ಲ. ಯಾಕಂದರೆ ಅವನಲ್ಲಿ ಸತ್ಯವೇ ಇಲ್ಲ; ಅವನು ಸುಳ್ಳಾಡುವಾಗ ತನ್ನ ಸ್ವಂತವಾದವುಗಳಿಂದ ಮಾತ್ರ.

ಪ್ರಕಟನೆ 12:9 ಭೂಲೋಕದವರನ್ನೆಲ್ಲಾ ಮೋಸಗೊಳಿಸುವ ಆ ಮಹಾ ಘಟಸರ್ಪನು ಅಂದರೆ ಪಿಶಾಚಿನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದೊಬ್ಬಲ್ಪಟ್ಟು ಭೂಮಿಗೆ ಬಿದ್ದನು; ಅವನ ದೂತರೂ ಅವನೊಂದಿಗೆ ದೊಬ್ಬಲ್ಪಟ್ಟರು.

ನಾವು ಬಹುಶಃ ಜಾಹೀರಾತುಗಳನ್ನೂ ನೋಡಿ ಇದು ಗ್ರಾಹಕೀಕರಣವನ್ನು ಉತ್ತೇಜಿಸುತ್ತದೆ ಎಂದು ಅರ್ಥ ಮಾಡಿಕೊಳ್ಳುತ್ತೇವೆ. ಇಂದಿನ ಪ್ರಾರ್ಥನಾ ಸಮಯದಲ್ಲಿ, ಜಾಹಿರಾತಿನ ಸಂದೇಶಗಳು ಎಷ್ಟು ವ್ಯಾಪಕವಾಗಿಯೂ ಮತ್ತು ಅಂಕುರಿಸುವುದಾಗಿಯೂ ಇದೆ, ಮತ್ತು ಇಂತಹ ಸುಳ್ಳುಗಳನ್ನು ನಮಗೆ ಪ್ರತಿದಿನಾ ಮಾರಾಟ ಮಾಡುತಿದ್ದಾರೆ ಎಂದು ಗುರುತಿಸುವುದಕ್ಕಾಗಿ ಪ್ರಾರ್ಥಿಸಿ.

1. ನಿಮ್ಮನ್ನು ಗುರಿ ಮಾಡಲಾಗುತ್ತಿದೆ

ಸಾಲ, ಇತಿಹಾಸದಲ್ಲಿ ಅತ್ಯಂತ ಯಶಸ್ವಿಯಾಗಿ ಮಾರಾಟವಾಗಿರುವ ಉತ್ಪನ್ನ ವಾಗಿದೆ!

* 1910: ಸಿಯರ್ಸ್‌ಕ್ಯಾಟಲಾಗ್/ಅನುಕ್ರಮಣಿಕೆ ಹೇಳುತ್ತದೆ, "ಸಾಲದ ಖರೀದಿ ಮೂರ್ಖತನ ಆಗಿದೆ" ಪೋರ್ಡ್ ಸಾಲದ ಬಳಕೆಯನ್ನು ನಿಷೇಧಿಸಿದ್ದರು:

* 1950: ಡೈನರ್ಸ್ ಕ್ಲಬ್, ರೆಸ್ಟೊರಂಟ್ ಗಳಲ್ಲಿ ಪಾವತಿಸಲು ಒಂದು ಅನುಕೂಲಕರ ರೀತಿಯಲ್ಲಿ ರಚಿಸಿದ್ದರು

* 1958: ಬ್ಯಾಂಕ್ ಆಫ್ ಅಮೆರಿಕಾ, 60,000ಜನರಿಗೆ "ಬಂಕವೇರಿಕಾರ್ಡ್" ಅಂಚೆಯ ಮೂಲಕ ಕಳುಹಿಸಿದರು, 1976 ರಲ್ಲಿ ಅದನ್ನು "ವೀಸಾ" ಎಂದು ಮರುನಾಮಕರಣ ಮಾಡಿದರು.

* 2010: ಕ್ರೆಡಿಟ್ ಕಾರ್ಡ್ ಉದ್ಯಮದ ಒಟ್ಟು ವರ್ಷದ ಆದಾಯ ಡಾಲರ್ 150 ಶತಕೋಟಿ ಮಾಡುತ್ತದೆ!

ನಮ್ಮ ಅಜ್ಜ ಅಜ್ಜಿಯರು, ಸಾಲವನ್ನು ಪಾಪವೆಂದು ಭಾವಿಸುತ್ತಿದ್ದರು ("ನಮ್ಮ ಸಾಲಗಳಿಗೋಸ್ಕರ ನಮಗೆ ಕ್ಷಮಿಸು!" ಎಂದು ಯೇಸು ಪ್ರಾರ್ಥಿಸಿದರು).

ಏನು ಬದಲಾವಣೆಯಾಯಿತು? ಅವರು ಭಾವಿಸಿದ್ದು ತಪ್ಪಾ? ನೀವು ಸಾಲದಲ್ಲಿ ಜೀವಿಸುವುದು "ಸರಿ" ಎಂದು ನಂಬಲು ಪ್ರಾರಂಭಿಸಿದ್ದೀರಾ?

2. ಎಲ್ಲಾ ಸುಳ್ಳುಗಳ ತಂದೆ!!!

ಈ ರೀತಿಯ ಸಾಮೂಹಿಕ ಪ್ರಚಾರದ ಪರಿಣಾಮವಾಗಿ, ನಾವು ಅನೇಕ ಸುಳ್ಳುಗಳನ್ನೂ ನಂಬುತ್ತೇವೆ

* ಸುಳ್ಳು : ಸಾಲ ನಮ್ಮ ಸಂಪತ್ತನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲು ಸಹಾಯ ಮಾಡುತ್ತದೆ

ಸತ್ಯ : ಸಾಲವು ನಮ್ಮನ್ನು ಸಂಪತ್ತಿನ ಸಮಿಕರಣದ ತಪ್ಪು ಬದಿಯಲ್ಲಿ ನಿಲ್ಲಿಸುತ್ತದೆ. ಸಾಲಗಳು ಸಹ ಹಣಹೂಡಿಕೆಯಂತೆಯೇ ಬಡ್ಡಿಯಾಗಿ ಹೆಚ್ಚುತ್ತದೆ: ಚಕ್ರಬಡ್ಡಿ

* ಸುಳ್ಳು : ಮಾಸಿಕ ಪಾವತಿಯನ್ನು ಲೆಕ್ಕಮಾಡಿ ನಾನು ವಸ್ತುಗಳನ್ನು ಖರೀದಿಸುವುದು ಒಳ್ಳೆ ನಿರ್ವಹಣೆ.

ಸತ್ಯ : ಯಾವುದೇ ಮಾರಾಟಗಾರ ಹಣಕಾಸು ಮತ್ತು ಮಾಸಿಕ ಪಾವತಿ ಬಗ್ಗೆ ಮಾತನಾಡಿದಾಗ, ನಿಮಗೆ ವಸ್ತುವಿನ ಅಸಲಿ ಮೌಲ್ಯ ತಿಳಿಸಲು ಪ್ರಯತ್ನಿಸುತ್ತಿಲ್ಲ, ಅದರ ಬದಲು ನಿಮ್ಮನ್ನು ಸಾಲದ ಚಕ್ರದಲ್ಲಿ ಸಿಕ್ಕಿಹಾಕಿಸಲು ಪ್ರಯತ್ನಿಸುತ್ತಿದ್ದಾನೆ.

* ಸುಳ್ಳು : ನಗದು ಮರಳಿ ನೀಡುವ ಕ್ರೆಡಿಟ್ ಕಾರ್ಡ್ ಕೊಡುಗೆಗಳು ನಮ್ಮ ಹಣ ಉಳಿಸುತ್ತದೆ.

ಸತ್ಯ : ನೀವು ನಗದು ಕೊಟ್ಟು ಖರೀದಿಸಿದಕ್ಕಿಂತ ಸುಮಾರು 20% ಹೆಚ್ಚಾಗಿ ಕ್ರೆಡಿಟ್ ಕಾರ್ಡ್‌ನಿಂದ ಖರೀದಿಸಿದಾಗ ಕೊಡುತ್ತೀರಾ! ಅದ್ದರಿಂದ, ನೀವು20% ಮರಳಿ ಪಡೆಯುವಲ್ಲಿ ಹೊರತು, ನೀವು ಯಾವುದೇ ಹಣದ ಉಳಿತಾಯ ಮಾಡುತ್ತಿಲ್ಲ

ನಿಮಗೆ ಎಂತಹ ಸುಳ್ಳುಗಳನ್ನೂ ಕೇಳುತ್ತಿದ್ದೀರಾ?

## ದಿನ 17

## ಜಗತ್ತಿನ ಸಂದೇಶ 2

**ಜ್ಞಾನೋಕ್ತಿ 18:11**

ಧನವಂತನು ತನ್ನ ಐಶ್ವರ್ಯವನ್ನು ಬಲವಾದ ಕೋಟೆಯೆಂದೂ ಎತ್ತರವಾದ ಗೋಡೆಯೆಂದು ಭಾವಿಸಿಕೊಳ್ಳುತ್ತಾನೆ.

**ನೆನಪು ಮಾಡಿಕೊಳ್ಳಿ:** ನೀವು ಶ್ರೀಮಂತರಾಗಿದ್ದೀರಿ ಹೌದು ನೀವು ಶ್ರೀಮಂತರಾಗಿದ್ದೀರಿ.

**ಎಚ್ಚರ:** ನೀವು ಜಗತ್ತಿನಿಂದ ಮೋಸಗೊಳಗಾಗುತ್ತೀದ್ದೀರಿ.

**ಅಪಾಯ :** ನಿಮ್ಮ ಆಸ್ತಿಪಾಸ್ತಿಯ ಮೇಲೆ ಅಧಿಕ ರಕ್ಷಣೆ ಒಡ್ಡುತ್ತಿದ್ದೀರಿ.

**ಬಿಕ್ಕಟ್ಟು :** ತಪ್ಪಾದ ದೇವರನ್ನು ಹಿಂಬಾಲಿಸಿ ನಿಮ್ಮನ್ನು ನೀವು ಆಘಾತಗೊಳಪಡಿಸಿಕೊಳ್ಳುತ್ತಿದ್ದೀರಿ ದೇವರನ್ನು ಮತ್ತು ಹಣವನ್ನು ನೀವು ಸೇವೆ ಮಾಡಲು ಸಾಧ್ಯವಿಲ್ಲ.

1) ನಮ್ಮ ನೆರೆಯವರೊಂದಿಗೆ ಇರಿಸಿಕೊಳ್ಳುವ ಗಾದೆಯನ್ನು ನಾವೆಲ್ಲರೂ ಕೇಳಿರುವ ವಿಷಯವಾಗಿದೆ. ಆದರೆ ಖರ್ಚು ಮಾಡುವ ನಿಮ್ಮ ಹವ್ಯಾಸದ ಫಲಿತಾಂಶದ ಬಗ್ಗೆ ಜಾಗರೂಕವಾಗಿರಿ ಮತ್ತು ಸುಂದರವಾದ ಮನೆ, ದೊಡ್ಡದಾದ ಟಿ.ವಿ. ಆರಾಮವಾಗಿರುವ ಕಾರು, ಬಣ್ಣಬಣ್ಣದ ಬಟ್ಟೆಗಳೆಲ್ಲ ನಿಮಗೆ ನಿಜವಾಗಿಯೂ ಅವಶ್ಯಕತೆ ಇದೆಯೋ ಎಂದು ಸರಿಯಾಗಿ ನಿರ್ಧಾರ ಮಾಡಿರಿ.

ಈ ಐಷಾರಾಮಿಗಳು ಹೊರಗಣ ತೋರಿಕೆಯನ್ನು ಉತ್ತೇಜಿಸುತ್ತದೆ ಅವು ನಿಮ್ಮ ಜೀವನ ಮಟ್ಟವನ್ನು ಹೆಚ್ಚಿಸುತ್ತವೆ ಅಂದರೆ ನಿಮ್ಮ ಅಗತ್ಯಕ್ಕೆ ಮತ್ತು ಸಾಮರ್ಥ್ಯಕ್ಕೆ ಮೀರಿ ಜೀವಿಸಿರಿ ಎಂದು ಆಕರ್ಷಿಸುತ್ತದೆ. ಈ ತರಹದ ಯೋಜನೆ ನಿಮ್ಮ ಕೊಡುವಂತಹ ಮಟ್ಟವನ್ನು ಕಡಿಮೆಗೊಳಿಸಿದೆಯಾ?

**2) ಹೊಸ ಉಪಕರಣಗಳು ( ವಸ್ತುಗಳು)**

ಹೊಳೆಯುವ ಹೊಸ ಹೊಸ ವಸ್ತುಗಳು ನಮ್ಮೆಲ್ಲರಿಗೂ ಇಷ್ಟೇ ಜಗತ್ತಿನ ಜಾಹೀರಾತುಗಳಿಂದ. ಹೇಗೆ ನೀವು ಮರುಳಾಗುತಿದ್ದೀರಿ? ಈ ಜಾಹೀರಾತುಗಳ ಸಂದೇಶವು ನಿಮ್ಮ ಸಾಮರ್ಥ್ಯಕ್ಕಿಂತಲೂ ಮೀರಿ ಹೊಸ ವಸ್ತುಗಳ್ನನು ಖರೀದಿಸಲು ಮರುಳುಗೊಳಿಸಿವೆಯಾ?

**3) ಉತ್ತಮವಾದ ವಸ್ತುಗಳು:**

ನಮ್ಮ ಬಲಹಿನತೆ ನಮ್ಮ ಐಷಾರಾಮಿಯಾಗಿದೆ. ಒಳ್ಳೆಯ ಹೋಟೆಲಗಳಲ್ಲಿ ಊಟಮಾಡುವುದು ನಮಗೆ ಇಷ್ಟ ಒಳ್ಳೆಯ ರಜಾಕಾಲಗಳು, ನಮ್ಮನ್ನು ರಂಜಿಸಲು ಒಳ್ಳೆಯ ಸ್ಪಾ ಚಿಕಿತ್ಸೆಗಳು ಈ ಎಲ್ಲಾ ವಿಷಯಗಳು ಪಾಪವಲ್ಲ ಆದರೆ ಇವೆಲ್ಲವನ್ನು ಮಾಡುವುದಕ್ಕಿಂತ ಮುಂಚೆ ನಿಮಗೆ ಸಾಮರ್ಥ್ಯ ಇದೆಯಾ ಎಂದು ಯೋಚಿಸಿದ್ದೀರಾ? ಅಥವಾ ನಿಮಗಾಗಿ ನೀವು ಖರ್ಚುಮಾಡ ಬೇಕು ಎಂಬ ತಕ್ಷಣ ನಿರ್ಧಾರಗಳನ್ನು ಮಾಡುತ್ತೀರಾ?

ಪ್ರಪಂಚದ ಸಂದೇಶದ ಪ್ರಕಾರ 'ನೀವು ಬಿಡುವು ಮಾಡಿಕೊಳ್ಳಲು ಯೋಗ್ಯರಾಗಿದ್ದೀರಿ ಎನ್ನುವ ಪ್ರಪಂಚದ ಸಂದೇಶವನ್ನು ಖರಿದೆಸುವವರಾಗಿದ್ದೀರಿ. ಜಾಹೀರಾತುಗಳು ಏಕೆ ನಮ್ಮಯೊಳಗೆ ನಾವು ಹಾಳಾಗಬೇಕೆಂದು ಹೇಳುತ್ತದೆ? ಎಂದು ನಾವು ಅವರ ಉತ್ಪನ್ನಗಳನ್ನು ಖರೀದಿಸುತ್ತೇವೆ.

(ಅಗತ್ಯತೆಗೆ ಅಲ್ಲ ಆದರೆ ಬೇಡಿಕೆ ಅಥವಾ ಆಸೆಗಾಗಿ ಸೈತಾನನು ಮತ್ತು ಪ್ರಪಂಚದ ಸಂದೇಶವು ಮಾರಟಮಾಡುತ್ತಿದೆ ಎಂದು ಕೆಲ ಸಮಯ ಪ್ರಾರ್ಥಿಸಿರಿ)

(ಹೇಗೆ ಸೈತಾನನು ಮತ್ತು ಪ್ರಪಂಚವು ಬೇಕಾದ ವಸ್ತುಗಳನ್ನು ಅಗತ್ಯದಲ್ಲಿದೆ ಬೇಡಿಕೆ ಅಥವಾ ಆಸೆಗಾಗಿ ತಮ್ಮ ಸಂದೇಶವನ್ನು ಮಾರಾಟಮಾಡುತ್ತಿದೆ ಎಂದು ಕೆಲ ಸಮಯ ಪ್ರಾರ್ಥಿಸಿರಿ)

ಈ ವಸ್ತುಗಳೂ ನಿಮ್ಮನ್ನು ಸಂತೋಷ ಪಡಿಸಿದೆಯಾ?

## ದಿನ – 18

## ಸಾಲ ಕೊಡುವುದು ಮತ್ತು ಸಾಲ ಪಡೆಯುವುದು

**ಜ್ಞಾನೋಕ್ತಿ: 22:7:**

ಬಲ್ಲಿದನು ಬಡವನಿಗೆ ಒಡೆಯ ಸಾಲಗಾರನು ಸಾಲಕೊಟ್ಟವನಿಗೆ ಸೇವಕ ನಿಮಗೆ ಸಾಲವಿದ್ದರೆ ನೀವು ಸೇವಕರಾಗಿದ್ದೀರಿ ಸಾಲಗಾರನು ಯಾವಾಗಲೂ ಸಾಲ ಕೊಟ್ಟವನಿಗೆ ದಾಸನಾಗಿರುತ್ತಾನೆ.

ವಚನವನ್ನು ನಂಬುವುದಿಲ್ಲವೋ? ಸಾಲ ಕೊಟ್ಟವನಿಗೆ ಮರು ಪಾವತಿಸಿದೆ ಇದ್ದರೆ ಹೇಗೆ ನಿಮ್ಮ ಹಿಂದೆ ಬೀಳುತ್ತಾನೆ ಎಂದು ನೋಡಿ ಮತ್ತು ಹಿಂತಿರುಗಿಸದಿದ್ದರೆ ಇನ್ನು ಪರಿಣಾಮಗಳು ಎದುರಿಸಬೇಕೆಂದು ನೋಡಿರಿ.

ನೀವು ಈ ಹೊತ್ತು ಯಾರಿಗೆ ಸೇವಕರಾಗಿದ್ದೀರಿ? ಯಾವುದಾದರೂ ಕಂಪನಿಯಿಂದ ನೀವು ಸಾಲ ಪಡೆದಿದ್ದರೆ ಪಟ್ಟಿ ಮಾಡಿರಿ?

**ಜ್ಞಾನೋಕ್ತಿ 22:26–27**

ಕೈ ಮೇಲೆ ಕೈ ಹಾಕಿ ಸಾಲಕ್ಕೆ ಹೊಣೆಯಾಗುವುದರಲ್ಲಿ ನೀನೂ ಒಬ್ಬನಾಗಬೇಡ ಆ ಸಾಲವನ್ನು ತೀರಿಸುವುದಕ್ಕೆ ನಿನ್ನಿಂದಾಗದಿರಲು ಸಾಲ ಕೊಟ್ಟವರು ನಿನ್ನ ಕೆಳಗಿನ ಹಾಸಿಗೆಯನ್ನು ಕಿತ್ತುಹಾಕುವುದಿಲ್ಲವೇ.

**ಕೆಲವು ಸಲಹೆಗಳು:**

**1) ಸಾಲ ಪಡೆಯಬೇಡಿರಿ:**

ನೀವು ಸಾಲಗಾರನಿಗೆ ಸೇವಕರಾಗುವಿರಿ ಇದು ನಿಮ್ಮ ಸಂಬಂಧವನ್ನು ಕುಗ್ಗಿಸುತ್ತದೆ. ತಿಂಗಳ ಬಡ್ಡಿ ವಸೂಲಿ ಮಾಡಿ ಸಾಲ ಕೊಡುವ ಖಾಸಗಿ ಕಂಪನಿಗಳಿಂದ ಸಾಲವನ್ನು ಪಡೆಯಬೇಡಿರಿ (ಕೇವಲ 2 ರೂ ತಿಂಗಳಿಗೆ ಎಂದು ಅವರು ನಿಮ್ಮನ್ನು ಆಕರ್ಷಿಸುತ್ತಾರೆ ಆದರೆ ನಿಜವಾಗಿ ನೋಡಬೇಕಾದರೆ 12x2=24% ಪ್ರತಿ ವರ್ಷದ ಬಡ್ಡಿ ಇದು ಮಾತ್ರವೇ ದೊಡ್ಡ ಮೊತ್ತ ದುರಾದೃಷ್ಟವೆಂದರೆ ಅನೇಕ ಜನರು 3% ಮತ್ತು 4% ರೂ. ಪ್ರತಿ ತಿಂಗಳಂತೆ ಸಾಲವನ್ನು ತೆಗೆದುಕೊಳ್ಳುತ್ತಾರೆ.

**2) ಸಾಲ ಕೊಡಬೇಡಿ**

ಸ್ನೇಹಿತರಿಗೆ ಸಲವನ್ನು ಯಾವತ್ತೂ ಕೊಡಬೇಡಿರಿ ಅವರನ್ನು ನಿಮ್ಮ ಸೇವಕರನ್ನಾಗಿ ಮಾಡುವುದರ ಮೂಲಕ ಯೇಸುವಿನ ಭೋಧನೆಯಂತೆ ನಿರೀಕ್ಷೆ ಯಿಲ್ಲದೆ ಸಾಲ ಕೊಡುವುದು ಒಂದು ವರದಾನ ವೆಂದು (ಉಡುಗೊರೆ) ಎಂದು ಭಾವಿಸಿ.

**3) ಸಾಲಕ್ಕೆ ಸಹ ರುಜು ಮಾಡ ಬೇಡಿ**

ಒಬ್ಬ ವ್ಯಕ್ತಿಯು ಪಡೆದ ಹಣವನ್ನು ಮರುಪಾವತಿಸುವ ಸಾಮರ್ಥವುಳ್ಳವನಾಗಿದ್ದಾನೆ ಎಂದು ಬ್ಯಾಂಕುಗಳು ನಂಬುವುದಿಲ್ಲ. ಸಹ ರುಜು ಮಾಡಲೇ ಬೇಕಾದ ಪಕ್ಷದಲ್ಲಿ ನೀವೇ ಖುದ್ದಾಗಿ ಸಾಲವನ್ನು ಪಡೆದುಕೊಳ್ಳಿ.

**4) ಹಲವಾರು ಸಾಲಗಳನ್ನು ಒಂದುಗೂಡಿಸುವ ಯೋಜನೆಗೆ ಮರುಳಾಗಬೇಡಿ**

ಒಂದು ಸಾಲ ತೀರಿಸಲು ಇನ್ನೊಂದು ಸಾಲ ತೆಗೆದುಕೊಳ್ಳುವುದು ಬುದ್ದಿವಂತಿಕೆಯಲ್ಲ. ಈ ತರಹ ಅನೇಕ ಸಂಘಟನೆಗಳು ಜನರನ್ನು ಜೊತೆ ಮಾಡುತ್ತಾರೆ. ಅವರು ತಮ್ಮ ಲಾಭಕ್ಕಾಗಿ ಈ ತರಹದ ವ್ಯಾಪಾರಗಳನ್ನು ಮಾಡುತ್ತಾರೆಂದು ನೆನಪಿನಲ್ಲಿಟ್ಟು ಕೊಳ್ಳಿರಿ ಮತ್ತು ನಿಮ್ಮ ಹಣದಿಂದ ತಮ್ಮ ಪಾಲನ್ನು ದೋಚಿಕೊಳ್ಳುತ್ತಾರೆ.

ಯಾವ ರೀತಿಯಲ್ಲಿ ನೀವು ಸಾಲ ಕೊಡುವುದು ಮತ್ತು ಸಾಲ ಮಾಡುವ ಅಭ್ಯಾಸವನ್ನು ಮರು ಚಿಂತಿಸುತ್ತೀರಿ?

## ದಿನ – 19:

## ಲೆಕ್ಕ ಮಾಡಿರಿ: ಚಕ್ರಬಡ್ಡಿಯ ತತ್ವಗಳು

**ಜ್ಞಾನೋಕ್ತಿಗಳು 13:11**

ಸುಮ್ಮನೆ ಸಿಕ್ಕಿದ ಸಂಪತ್ತು ಕ್ಷಯಿಸುವುದು, ದುಡಿದು ಕೂಡಿಟ್ಟುಕೊಂಡವರಿಗೆ ಅಭಿವೃದ್ಧಿಯಾಗುವುದು.

ಚಕ್ರಬಡ್ಡಿಯ ತತ್ವವು ನಿಮಗೆ ವಿರೋಧವಾಗಿ ಅಥವಾ ನಿಮ್ಮ ಪರವಾಗಿ ಕೆಲಸ ಮಾಡಬಹುದು.

**ಎರಡು ಉದಾಹರಣೆಗಳು:**

**ಸಾಲ ಸಂಗ್ರಹಣೆ:**

ತಮ್ಮ ಮಗನ ಮೊದಲ ವರ್ಷದ ಹುಟ್ಟುಹಬ್ಬ ಆಚರಿಸಲು 80 ವರ್ಷದ ಸಂಪತಿ

ಸುಮ್ಮನೆ ಸಿಕ್ಕಿದ ಸಂಪತ್ತು ಕ್ಷಯಿಸುವುದು, ದುಡಿದು ಕೂಡಿಟ್ಟುಕೊಂಡವರಿಗೆ ಅಭಿವೃದ್ಧಿಯಾಗುವುದು.

ಚಕ್ರಬಡ್ಡಿಯ ತತ್ವವು ನಿಮಗೆ ವಿರೋಧವಾಗಿ ಅಥವಾ ನಿಮ್ಮ ಪರವಾಗಿ ಕೆಲಸ ಮಾಡಬಹುದು.

**ಎರಡು ಉದಾಹರಣೆಗಳು:**

**ಸಾಲ ಸಂಗ್ರಹಣೆ:**

ತಮ್ಮ ಮಗನ ಮೊದಲ ವರ್ಷದ ಹುಟ್ಟುಹಬ್ಬ ಆಚರಿಸಲು 80 ವರ್ಷದ ಸಂಪತಿಗಳಾದ ಜಾನ್ ಮತ್ತು ಜೇನ್ ಎಂಬುವವರು 10,000 ರೂ ಸಾಲ ಪಡೆಯುತ್ತಾರೆ. ನೂರಕ್ಕೆ 3 ರೂ, ಬಡ್ಡಿ ಎಂದು ಅವರಿಗೆ ಹೇಳಲ್ಪಟ್ಟೀತು ಇದು ಬಹಳ ಕಡಿಮೆ ಬಡ್ಡಿ ಎಂದು ಭಾವಿಸಿ ಅವರು ಸಾಲ ತೆಗೆದು ಕೊಂಡರು ಆದರೆ ನಿಜವಾಗಿಯೂ ನೋಡಬೇಕಾದರೆ ಶೇಕಡ 3% ಬಡ್ಡಿ ಪ್ರತಿ ತಿಂಗಳಿಗೆ ಮತ್ತು ವರ್ಷದ ಕೊನೆಯಲ್ಲಿ ಬಡ್ಡಿಯ ಜೊತೆ ಅವರು ರೂ 14,258 ರೂ ಯನ್ನು ಹಿಂತಿರುಗಿಸ ಬೇಕು ಆದ್ದರಿಂದ ಚಕ್ರಬಡ್ಡಿಯೇ 42.58% ಒಂದು ವೇಳೆ ಸಾಲ ತೆಗೆದುಕೊಂಡು ಎರಡು ವರ್ಷಗಳ ನಂತರ ಪಾವತಿಸುವುದಾದರೆ ಒಟ್ಟು ರೂ 20,328 ಗಳನ್ನು ಹಣ ಹಿಂತಿರುಗಿಸ ಬೇಕು.

(ಇದು ನಿಮ್ಮ ಸಾಲಕ್ಕಿಂತ ಎರಡು ಪಟ್ಟು ಹೆಚ್ಚಾಗಿದೆ) ಇದೇ ತರಹ ಕ್ರೆಡಿಟ್ ಕಾರ್ಡ್ ಕಂಪನಿಯವರು ಮತ್ತು ಅನೇಕ ಬಡ್ಡಿ ವ್ಯಾಪಾರ ಮಾಡುವವರು ಹಣ ವಸೂಲಿ ಮಾಡುತ್ತಾರೆ.

**ಸಾಲ ಸಂಗ್ರಹಣೆ**

ಟೀನಾಳ ತಂದೆ ತಾಯಿ ಅವಳ ಮದುವೆಗಾಗಿ ಚಿನ್ನ ಖರೀದಿಸಲು ಬಯಸುತ್ತಾರೆ. ಅದಕ್ಕೆ ಅವರು 50,000 ರೂ ಸಾಲವನ್ನು ತಮ್ಮ ಪಕ್ಕದ ಮನೆಯವರಿಂದ ತೆಗೆದು ಕೊಂಡು 2 ವರ್ಷದ ನಂತರ ಹಿಂತಿರುಗಿಸಲು ನಿರ್ಧರಿಸುತ್ತಾರೆ. ನೆರೆಮನೆಯವರು ತಿಂಗಳಿಗೆ ರೂ 1,268 ಬಡ್ಡಿ ಎರಡು ವರ್ಷದ ತನಕ ಕೊಡಬೇಕೆಂದು ಹೇಳುತ್ತಾರೆ ಬಹಳ ಕಡಿಮೆ ಬಡ್ಡಿ ಎಂದು ಭಾವಿಸಿ ಅವರು ಸಾಲವನ್ನು ತೆಗೆದುಕೊಳ್ಳುತ್ತಾರೆ ಆದರೆ ನಿಜವಾಗಿ ನೋಡಬೇಕಾದರೆ ಬಡ್ಡಿ ಹಣವನ್ನು ಮಾತ್ರ ಕೊಡಿಸಿದರೆ 30425 ರುಪಾಯಿ 2 ವರ್ಷಗಳಿಗೆ ಆಗುವುದು ಮತ್ತು ಅದರೊಂದಿಗೆ ಅವರು ತೆಗೆದು ಕೊಂಡಿರುವ 52,000 ರೂಪಾಯಿ ಕೂಡ ಮರು ಪಾವತಿಸಬೇಕಾಗುತ್ತದೆ.

**ಭಾಗ್ಯ ಸಂಪಾದಿಸುವುದು:**

ವರ್ಷಕ್ಕೆ 8.5% ರ ಬಡ್ಡಿಯಂತೆ ನೀವು ಪ್ರತಿ ತಿಂಗಳು 500 ರೂಪಾಯಿ ಮರುಕಳಿಸುವ ಠೇವಣಿ ಮಾಡಿರಿ 5 ವರ್ಷಗಳ ಕಾಲ ಮಾಡಿರಿ.

5 ವರ್ಷ ನಂತರ ರೂ 37425 ರೂಪಾಯಿ ನೀವು ಪಡೆಯುವಿರಿ ಇದು ಸ್ವಲ್ಪ ಮೊತ್ತವಾದರು ಪ್ರತಿ ತಿಂಗಳು ಹೊಡಿಕೆ ಮಾಡುವುದರಿಂದ ನೀವು ಬುದ್ಧಿವಂತರಾಗಿ ಉಳಿತಾಯ ಮಾಡುವವರಾಗುವಿರಿ.

* ಈ ರೀತಿಯಾದ ಊಳಿತಾಯದಿಂದ ಹಣವನ್ನು ಕೂಡಿಡುವುದಕ್ಕೆ ಯಾವುದೇ ಅಪಾಯವಿಲ್ಲ
* ಕೊಟ್ಯಾಧಿಪತಿಗಳು ಯಾವಾಗಲೂ ಹಳೇ ಕಾರುಗಳನ್ನು ಬಳಸುತ್ತಾರೆ ಮತ್ತು ಅವರ ಸಾಮರ್ಥ್ಯಕ್ಕೆ ಮಿಗಿಲಾದ ದೊಡ್ಡ ಮನೆಯಲ್ಲಿ ವಾಸಿದುವುದಿಲ್ಲ
* ಲಾಟರಿಗಳು ಕೆಳವರ್ಗಗಳಿಗೆ ತುತ್ತಾಗುತ್ತವೆ ಮತ್ತು ರಾಜ್ಯಕ್ಕೆ ಹೆಚ್ಚಳ ಪಡಿಸುತ್ತವೆ.
* ದೇವರು ದಯಪಾಲಿಸಿರುವ ಸ್ವಲ್ಪವಾದವುಗಳಲ್ಲಿ ನಂಬಿಕೆಯಿಂದ ನಿರ್ವಹಿಸಿದರೆ ಮಾತ್ರ ಬಹಳವಾದವುಗಳನ್ನು ಎದುರುನೋಡಿರಿ.

ಲೂಕ 16:10 ರ ಪ್ರಕಾರ 'ಸ್ವಲ್ಲವಾದದ್ದಲ್ಲಿ ಸಂಬಿಗಸ್ತನಾದವನು ಬಹಳವಾದದ್ದರಲ್ಲಿ ನಂಬಿಗಸ್ತನಾಗುವನು ಸ್ವಲ್ಪವಾದದ್ದರಲ್ಲಿ ಅನ್ಯಾಯುವಾಗನಾದವನು ಬಹಳವಾದದ್ದರಲ್ಲಿಯೂ ಅನ್ಯಾಯಗಾರನಾಗುವನು.

ಚಕ್ರಬಡ್ಡಿಯ ತತ್ವಗಳನ್ನು ನಿಮ್ಮ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳುವಿರಿ?

# ದಿನ – 20

## ನನ್ನ ಸಾಲದ ಜವಾಬ್ದಾರಿ ತೆಗೆದುಕೊಳ್ಳುವುದು

**ಕೀರ್ತನೆ 37:21–26**

ದುಷ್ಟನು ಸಾಲ ಮಾಡಿಕೊಂಡು ತೀರಿಸಲಾರದೆ ಹೋಗುವನು. ನೀತಿವಂತನು ಪರೋಪಕಾರಿಯಾಗಿ ಧರ್ಮ ಕೊಡುವನು ಯಹೋವನ ಆಶೀರ್ವಾದವು ಯಾರಿಗಿರುವುದೋ ಅವರು ದೇಶವನ್ನು ಅನುಭವಿಸುವರು. ಆತನ ಶಾಪವು ಯಾರಿಗಿರುವುದೋ ಅವರು ತೆಗೆದು ಹಾಕಲ್ಪಡುವರು.

ಸತ್ಪುರುಷನ ಗತಿಸ್ಥಾಪನೆಯು ಯೊಹೋವನಿಂದಲೇ ಆಗಿದೆ. ಆತನು ಅವರ ಪ್ರವರ್ತನೆಯನ್ನು ಮೆಚ್ಚುತ್ತಾನೆ. ಅವನು ಕೆಳಗೆ ಬಿದ್ದರೂ ಏಳದೆ ಹೋಗುವುದಿಲ್ಲ. ಯಹೋವನು ಅವನನ್ನು ಕೈ ಹಿಡಿದು ಉದ್ಧಾರ ಮಾಡುವನು. ನಾನು ಬಾಲಕನಾಗಿದ್ದೆನು ಈಗ ವೃದ್ಧನಾಗಿದ್ದೇನೆ ಈವರೆಗೂ ನೀತಿವಂತನು ದಿಕ್ಕಿಲ್ಲದೆ ಬಿದ್ದಿರುವುದನ್ನಾಗಲಿ ಅವನ ಸಂತತಿಯವರು ಭಿಕ್ಷೆ ಬೇಡಿ ತಿನ್ನುವುದನ್ನಾಗಲಿ ನೋಡಲಿಲ್ಲ ಅವನು ಯಾವಾಗಲೂ ಧರ್ಮಿಷ್ಠನಾಗಿ ಹಣ ಸಹಾಯವನ್ನು ಮಾಡುತ್ತಾನೆ. ಅವನ ಸಂತತಿಯವರು ಆಶೀರ್ವಾದ ಹೊಂದುವರು.

* ದುಷ್ಟನು ಸಾಲ ಮಾಡಿ ಅದರ ಪರಿಣಾಮಗಳನ್ನು ನೋಡುವನು.

* ದೇವರು ನೀತಿವಂತನನ್ನು ನೋಡಿಕೊಳ್ಳುತ್ತಾನೆ ಪ್ರಾರ್ಥಿಸಿರಿ ಸಲಹೆ ಪಡೆದುಕೊಳ್ಳಿರಿ ಮತ್ತು ಸಾಲ ಮಾಡುವುದನ್ನು ತಡೆಯಲು ಎಲ್ಲಾ ಪ್ರಯತ್ನ ಮಾಡಿರಿ.

* ಸಾಲ ಮಾಡಿದಾಗ “ನೀನು ಕೊಟ್ಟಿರುವುದು ನನಗೆ ಸಾಲುವುದಿಲ್ಲ” ಎಂದು ದೇವರಿಗೆ ಹೇಳುವವರಾಗಿದ್ದೇವೆ.

* ಹೇಗೆ ಕೀರ್ತನೆಗಾರನು ನಂಬಿಗಸ್ತನ ವಿಷಯದಲ್ಲಿ ಹೇಳುತ್ತಾನೆ?

ಸಾಲದ ವಿಷಯದಲ್ಲಿ ವಿಕಿಪೀಡಿಯಾ ಹೇಳುವ ಪ್ರಕಾರ ಅತೀಯಾದ ಸಾಲದಿಂದ ಅನೇಕ ಸಾಮಾಜಿಕ ಪರಿಣಾಮಗಳು ಅಂದರೆ ಹಣಕಾಸಿನ ಕಷ್ಟ, ಕಡಿಮೆ ಶಾರೀರಿಕ ಮತ್ತು ಮಾನಸಿಕ ಆರೋಗ್ಯ, ಕುಟುಂಬದಲ್ಲಿ ಚಿಂತನೆ, ಖಿನ್ನತೆ, ಕೆಲಸ ಪಡೆಯುವುದರಲ್ಲಿ ತೊಂದರೆ ಚಿಕ್ಕಪುಟ್ಟ ಹಣಕಾಸಿನ ಸೇವೆಯಿಂದ ಹೊರಬರುವುದು ಕೆಲಸದಲ್ಲಿ ಒತ್ತಡ ಮತ್ತು ಕೈಗಾರಿಕಾ ರೋಗಗಳು ಸಾಮಾಜಿಕ ಸಂಬಂಧಗಳಲ್ಲಿ ಒತ್ತಡ, ಕೆಲಸದಲ್ಲಿ ಅನುಪಸ್ಥಿತಿ, ಅವ್ಯವಸ್ಥಿತ ಜೀವನ ಸಂಬಂಧಗಳಲ್ಲಿ ಚಿಂತನೆ, ಕೀಳರಿಮೆ ಇತ್ಯದಿ

ಸಾಲದ ಪರಿಣಾಮಗಳು : ಆರೋಗ್ಯ, ಕುಟುಂಬ, ಸಂಬಂಧಗಳು, ಸ್ವಇಚ್ಛೆ ಸ್ವಾಭಿಮಾನ

ಸಾಲ ಹೇಗೆ ನಿಮ್ಮ ಮೇಲೆ ಪರಿಣಾಮ ಬೀರಿದೆ ಎಂದು ಯೋಚಿಸಿರಿ ಈ ಎಲ್ಲಾ ವಿಷಯದಲ್ಲಿ ಸಹಾಯ ಮಾಡುವವರ ಜೊತೆ ಹಂಚಿ ಕೊಂಡು ಪ್ರಾರ್ಥಿಸಿರಿ ಮತ್ತು ಸಹಾಯ ಪಡೆಯಿರಿ.

ದಿನ 15ನೇ ವಚನಗಳನ್ನು ಪುನಃ ಓದಿರಿ (ದೇವರ ಒದಗಿಸುವಿಕೆ) ಮತ್ತು ದೇವರು ದಯಪಾಲಿಸುವುದರಲ್ಲಿ ನಂಬಿಗಸ್ತರಾಗಿರುವ ಹೃಹಯಕ್ಕಾಗಿ ಪ್ರಾರ್ಥಿಸಿರಿ.

## ದಿನ 21

## ನಿರ್ಧಾರಿಸಿ

**ಜ್ಞಾನೋಕ್ತಿಗಳ 23:24**

ದುಡ್ಡಿನಾಸೆಯಿಂದ ದುಡಿಯಬೇಡ, ಸ್ವಬುದ್ಧಿಯನ್ನೇ ಆಶ್ರಯಿಸಬೇಕು.

**ಜ್ಞಾನೋಕ್ತಿ 21:25–26**

ಸೋಮಾರಿಯ ಆಕೆಯು ಅವನನ್ನು ಕೊಲ್ಲುವುದು ಅವನ ಕೈಗಳು ದುಡಿಯಲೊಲ್ಲವಷ್ಟೇ ಧರ್ಮಿಯು ದಿನವೆಲ್ಲ ಆಶಿಸುತ್ತಲೇ ಇರುವನು.

* ಸಾಲವು ಜನರನ್ನು ಬಡವರಾಗಿಸಿ ಬ್ಯಾಂಕುಗಳನ್ನು ಶ್ರೀಮಂತಗೊಳಿಸುತ್ತದೆ.

* ಶ್ರೀಮಂತರಾಗಿಸುವ ಯಾವುದೇ ಉಪಾಯವಿಲ್ಲ

* ಸಾಲ ಪಡೆಯುವವನು ಸಾಲ ಕೊಟ್ಟವನಿಗೆ ಯಾವಾಗಲೂ ಗುಲಾಮನಾಗಿರುತ್ತಾನೆ ಯಾವಾಗಲೂ!

* ನಿಮ್ಮ ಹಣಕಾಸಿನ ವಿಷಯದಲ್ಲಿ ಒಳ್ಳೆಯ ನಿರ್ಧಾರಗಳನ್ನು ಮಾಡಲು ಮನೆಗೆಲಸ ಮಾಡಿರಿ.

**ರೋಮಪುರ 13:8**

ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಋಣವೇ ಹೊರತು ಬೇರೆ ಯಾವ ಸಾಲವೂ ನಿಮಗೆ ಇರಬಾರದು.

ಈ ವಾರದ ಸಾಲದ ವಿಷಯದ ಪಾಠಗಳಿಂದ ನಿಮ್ಮ ನಿರ್ಧಾರಗಳೇನು?

## ವಾರ 4

## ಪರಲೋಕದಲ್ಲಿನ ಸಂಪತ್ತು (ಕೊನೆಯ)

"ಪ್ರಾಪಂಚಿಕತೆಯಿಂದ ಹೊರಬರುವ ಏಕೈಕ ಪರಿಹಾರ 'ಕೊಡುವುದು' –ರಾಂಡಿ ಅಲ್ಕಾರ್ನ್, ದಿ ಟ್ರೆಸ್ಸುರೆ ಪ್ರಿಸ್ಸಿಪಲ್

ಪ್ರಾಪಂಚಿಕತೆಯಿಂದ ಹೊರಬರುವುದು, ಸಾಲದಿಂದ ಹೊರಬರುವುದಕ್ಕಿಂತ ಕಷ್ಟಕರವಾಗಿರುತ್ತದೆ. ನಾವು ನಮ್ಮ ಪರಲೋಕದ ಸಂಪತ್ತನ್ನು ಬಿಟ್ಟುಕೊಟ್ಟರೆ, ಪ್ರಪಂಚ ನಮಗೆ ಹಲವಾರು ತರಹದ ಸಂಪತ್ತನ್ನು ಕೊಡಲು ಮುಂದೆ ಬರುತ್ತದೆ. ಶಿಷ್ಯರಾದ ನಾವು ಸಂಪತ್ತಿಗೋಸ್ಕರ ಹುಡುಕಾಡಿದೆವು, ಆಗ ನಮಗೆ ದೇವರು ಸಿಕ್ಕಿದರು. ಈಗ ನಾವು ಈ ಸಂಪತ್ತನ್ನು ಪ್ರತಿಯೊಂದು ರೀತಿಯಲ್ಲಿ ಪ್ರತಿಯೊಂದು ಆತ್ಮಕ್ಕೆ ಹಂಚಿದರೆ, ಪರಲೋಕದಲ್ಲಿನ ನಮ್ಮ ಸಂಪತ್ತು ಬೆಳೆಯುತ್ತದೆ. ನಮಗೆ ಹೇರಳವಾಗಿ ದೇವರು ಆಶೀರ್ವಾದ ಮಾಡಿದರೆ, ಅದು ನಮಗೆ ಆಶೀರ್ವದಿಸಿದ್ದು ಆರಾಮವಾದ ಜೀವನ ಜೀವಿಸುವುದಕ್ಕಲ್ಲ, ಇತರರಿಗೆ ಸಹಾಯ ಮಾಡುವುದಕ್ಕೋಸ್ಕರ ಮಾತ್ರ. – ರಾಂಡಿ ಅಲ್ಕಾರ್ನ್

ಬಾಯಿ ಪಾಠ ಮಾಡಬೇಕಾದ ವಚನ : 2 ಕೊರಿಂಥಿಯವರಿಗೆ 9: 11 ಹೀಗೆ ನೀವು ಎಲ್ಲಾ ವಿಷಯಗಳಲ್ಲಿ ಐಶ್ವರ್ಯವಂತರಾಗಿದ್ದು ಉದಾರವಾಗಿ ಕೊಡಲು ಶಕ್ತರಾಗುವಿರಿ; ಅದು ನಮ್ಮ ಮೂಲಕ ದೇವರಿಗೆ ಕೃತಜ್ಞತಾಸ್ತುತಿಯನ್ನುಂಟು ಮಾಡುವದು.

## ದಿನ – 22

## ನಿಧಿಯ ಬೇಟೆ:

ನಿಧಿ ನಿಧಿ ಎಂಬ ಪದ ತುಂಬಾ ಆಕರ್ಷಿತವಾದದ್ದು. ಅದನ್ನು ಹುಡುಕಿ ಪಡೆದುಕೊಳ್ಳಲು ಸೆಳೆಯುತ್ತದೆ. ಬಹುಶಃ ನಮ್ಮ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಲು ಐಶ್ವರ್ಯವನ್ನು ಹುಡುಕುತ್ತೇವೆ ಮತ್ತು ಪ್ರತಿಯೊಬ್ಬರು ಈ ಐಶ್ವರ್ಯವನ್ನು ಹುಡುಕುವಂತೆ ಮಾಡುತ್ತದೆ. ಆದರೆ ಈ ನಿಧಿಯನ್ನು ಹುಡುಕಲು ಹಣ ಬೇಕಾಗಲ್ಲ. ಇದು 'ಒಳ್ಳೆಯ ಜೀವನದ' ಗುಟ್ಟಾಗಿದೆ. ಅಥವಾ ಜೀವನದಲ್ಲಿನ ಸಮಸ್ಯೆಗಳಿಗೆ ಪರಿಹಾರವಾಗಿದೆ.

ನಾವು ಸಂಪತ್ತನ್ನು ಎದುರು ನೋಡುತ್ತಿದ್ದೇವೆಂದು ಯೇಸುವಿಗೆ ತಿಳಿದಿದೆ. ಮತ್ತು ನಿಧಿ ಎಂದರೆ ಕೇವಲ ನಮ್ಮಲ್ಲಿರುವ ಆಸ್ತಿಯಂತೆ ಎಂದು ಅನೇಕರು ತಪ್ಪಾಗಿ ಆಲೋಚಿಸುತ್ತಿದ್ದಾರೆಂತಲೂ ಆತನಿಗೆ ತಿಳಿದಿದೆ.

ವೆಬ್‌ಸ್ಸರ್ ಹೇಳುತ್ತದೆ – ನಿಧಿ ಎನ್ನುವುದು "ಬೆಲೆ ಕಟ್ಟಲಾರದಂಥ ಅತ್ಯಮೂಲ್ಯವಾದ ಸಂಪತ್ತು".

**ಮತ್ತಾಯ – 6:19–21**

* ಯೇಸುವು ಪರ್ವತದ ಮೇಲೆ ಪ್ರಸಂಗ ಮಾಡುತ್ತಿರುವಾಗ ನಿಧಿ (ಸಂಪತ್ತಿನ) ಅರ್ಥವನ್ನು ಅರ್ಥವಾಗುವ ಹಾಗೆ ಆತನನ್ನು ಹಿಂಬಾಲಿಸುವ ವಿಷಯ ಕುರಿತು ಸ್ಪಷ್ಟಪಡಿಸುತ್ತಿದ್ದಾರೆ.

* ಆಸ್ತಿ ಮತ್ತು ನಿಧಿ ಸರಿಸಮವಾಗಿದೆ ಎಂಬ ಅಭಿಪ್ರಾಯವನ್ನು ಸರಿಪಡಿಸಿದರು. ಇದು ಕೇವಲ ಪ್ರಾಪಂಚಿಕ ವಿಚಾರದಿಂದ ಮಾತ್ರ ಕೂಡಿದಲ್ಲ. ಇದು ಸಂಸ್ಕೃತಿಯ ವಿರೋಧವಾಗಿರುವುದು. ಆದ್ದರಿಂದ ಇದರ ಬಗ್ಗೆ ನನಗೆಲ್ಲಾ ಗೊತ್ತು ಎಂದು ತಕ್ಷಣ ಕಲ್ಪಿಸಿಕೊಳ್ಳುವುದು ಸರಿಯಲ್ಲ.

ಯೇಸು ಕ್ರಿಸ್ತನು ಆಸ್ತಿ, ಐಶ್ವರ್ಯದ ಬಗ್ಗೆ ಶ್ರೀಮಂತರ ಕುರಿತು ಬೋಧಿಸುತ್ತಾರೆ.

**ಮತ್ತಾಯ – 19:23**

"ಐಶ್ವರ್ಯವಂತನು ಪರಲೋಕ ರಾಜ್ಯದಲ್ಲಿ ಸೇರುವುದು ಕಷ್ಟ"

*   ಈ ವಚನದ ಅರ್ಥವನ್ನು ನಾವೂ ಕೆಲವೊಮ್ಮೆ ತಪ್ಪಾಗಿ ಬೋಧಿಸುತ್ತೇವೆ. ಯಾಕೆಂದರೆ ಜನರನ್ನು ನೋಯಿಸಬಾರದೆಂಬುವುದು ನಮ್ಮ ಉದ್ದೇಶವಾಗಿದೆ. ಮತ್ತು ಅವರ ಮುಂದೆ ಹೇಳದೇ ತಪ್ಪಾಗಿ ಬೋಧಿಸುವುದುಂಟು.

*   ಆದರೆ ಯೇಸುವು ಇಲ್ಲಿ ಬಲವಾಗೆ ಕಟ್ಟು ಬದ್ಧವಾಗೆ ಬೋಧಿಸುತ್ತಾ ನಿಮ್ಮ ಮನಸ್ಸು ಎಲ್ಲಿ ಕೊಡುವಿರೋ, ಅಲ್ಲೇ ಹೋಗುತ್ತೇ ನಿಮ್ಮ ಪ್ರಯಾಸ, ಸಮಯ, ಹಣ, ಭೂಲೋಕದಲ್ಲಿನ ಗಂಟು ಅಥವಾ ಪರಲೋಕದಲ್ಲಿನ ಗಂಟು ನಿಮ್ಮ ಹೃದಯ ಹಿಂಬಾಲಿಸುತ್ತದೆ.

ಎ) ಪರಲೋಕದಲ್ಲಿ ನಿಧಿ ಕೂಡಿಟ್ಟುಕೊಳ್ಳುವುದರ ಕುರಿತು ಯೇಸುವು ಏನೆಂದು ಹೇಳುತ್ತಾರೆ?

1)   ನೀತಿಯುಳ್ಳ ಕಾರ್ಯಗಳು ರಹಸ್ಯವಾಗೆ ನಡೆಯಲಿ

**ಮತ್ತಾಯ – 6:1**

ಜನರು ನೋಡಲಿ ಎಂದು ನಿಮ್ಮ ಧರ್ಮಕಾರ್ಯಗಳನ್ನು ಅವರ ಮುಂದೆ ಮಾಡಬಾರದು. ನೋಡಿರಿ ಹಾಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯ ಹತ್ತಿರ ನಿಮಗೆ ಫಲ ದೊರೆಯದು.

2) ನಿನ್ನ ಆಸ್ತಿಯನ್ನು ಮಾರಿ ಬಡವರಿಗೆ ಕೊಡು

ಮತ್ತಾಯ – 19:21

ಲೂಕ – 12:33

ಲೂಕ – 18:22

"ನೀನು ಸಂಪೂರ್ಣನಾಗಬೇಕೆಂದಿದ್ದರೆ ಹೋಗಿ ನಿನ್ನ ಆಸ್ತಿಯನ್ನು ಮಾರಿ ಬಡವರಿಗೆ ಕೊಡು, ಪರಲೋಕದಲ್ಲಿ  ನಿನಗೆ ಸಂಪತ್ತಿರುವುದು. ನೀನು ಬಂದು ನನ್ನನ್ನು ಹಿಂಬಾಲಿಸು" ಎಂದು ಹೇಳಿದನು.

3) ಪರಲೋಕದಲ್ಲಿ ನಿನ್ನ ನಿಧಿಯನ್ನು ಕೂಡಿಸಿಡಲು ನೀನು ಸಿದ್ಧನಾಗಿದ್ದೀಯಾ?

## ದಿನ – 23

## ನಿಧಿಯನ್ನು ದಯಪಾಲಿಸುವವನು

**ಯೋಹಾನ – 3:16**

ದೇವರು ಕೊನೆಯವರೆಗೂ ದಯಪಾಲಿಸುವವನು/ಕೊಡುವವನು.

**ಆದಿಕಾಂಡ – 1:26**

ನಾವು ದೇವರ ಹೋಲಿಕೆಯಂತೆ ಮಾಡಲ್ಪಟ್ಟವರೆಂದರೆ ನಾವು ದೇವರ ಹಾಗೆ ಕೊಡುವವರಾಗಿರಲು ಮಾಡಲ್ಪಟ್ಟಿದ್ದೇವೆ.

* ದೇವರ ನಿಧಿಯನ್ನು ಉದಾರವಾಗೆ/ಹೇರಳವಾಗೆ ಸಾರಲು (ಹಂಚಲು) ಈ ವಚನ ಹೇಗೆ ಸಹಾಯಕವಾಗಿದೆ?

* ದೇವರು ದಯಪಾಲಿಸುವವರು ಎನ್ನುವುದಕ್ಕೆ ಇನ್ನು ಬೇರೆ ಯಾವ ವಚನಗಳು ನೆನಪಿಗೆ ಬರುತ್ತವೆ?

**2 ಕೋರಿಂಥಿಯವರಿಗೆ – 9:10–11**

ಬಡವರಿಗೆ ಬೀಜವನ್ನು ಉಣ್ಣುವವನಿಗೆ ಆಹಾರವನ್ನು ಕೊಡುವಾತನು ನಿಮಗೂ ಬಿತ್ತುವುದಕ್ಕೆ ಬೀಜವನ್ನು ಕೊಟ್ಟು ನಿಮ್ಮ ಧರ್ಮಕಾರ್ಯಗಳಿಂದಾಗುವ ಫಲಗಳನ್ನು ವೃದ್ಧಿಪಡಿಸುವನು. ಹೀಗೆ ನೀವು ಎಲ್ಲಾ ವಿಷಯಗಳಲ್ಲಿ ಐಶ್ವರ್ಯವಂತರಾಗಿದ್ದು ಉದಾರವಾಗಿ ಕೊಡ ಶಕ್ತರಾಗುವಿರಿ. ಇದಲ್ಲದೆ ನಿಮ್ಮ ದಾನಗಳು ನಮ್ಮ ಕೈಯಿಂದ ಮತ್ತೊಬ್ಬರಿಗೆ ಸೇರಿದಾಗ ದೇವರಿಗೆ ಕೃತಜ್ಞತಾ ಸ್ತುತಿಯನ್ನುಂಟು ಮಾಡುವುದು.

* ದೇವರು ಆತನ ನಿಧಿಯನ್ನು ನಮಗೆ ಕೊಡುವನು

* ದೇವರು ದಯಪಾಲಿಸುವ ಪರಲೋಕ ರಾಜ್ಯದ ಸಂಪತ್ತನ್ನು ಕಟ್ಟಕಡೆಗೂ ಸಾರಬೇಕು.

* ನಮ್ಮ ಉದಾರತೆಯ ಫಲಿತಾಂಶದಿಂದ ಜನರಿಂದ ಹೇಗೆ ದೇವರಿಗೆ ಕೃತಜ್ಞತೆ ಸಲ್ಲುತ್ತದೆ?

## ದಿನ – 24

### ನಿಧಿಯ ಅಡಿಪಾಯ!

**ಮತ್ತಾಯ – 13:44**

ಪರಲೋಕ ರಾಜ್ಯವು ಹೊಲದಲ್ಲಿ ಹೂಳಿಟ್ಟ ದ್ರವ್ಯತೆ ಹೋಲಿಕೆಯಾಗಿದೆ. ಒಬ್ಬನು ಅದನ್ನು ಕಂಡುಕೊಂಡು ಮುಚ್ಚಿಬಿಟ್ಟು ಅದರಿಂದಾದ ಸಂತೋಷದಿಂದ ತನ್ನ ಬದುಕನ್ನೆಲ್ಲಾ ಮಾರಿ ಆ ಹೊಲವನ್ನು ಕೊಂಡುಕೊಂಡನು.

1) ಮನುಷ್ಯನು ಅಪೇಕ್ಷಿಸುವುದೆಲ್ಲಾ ಈ ದ್ರವ್ಯ (ನಿಧಿ)ಯಿಂದ ಸಿಗುವುದೆಂದು ಹೇಗೆ ಗೊತ್ತಾಗುತ್ತದೆ?

* ದೇವರ ರಾಜ್ಯದಲ್ಲಿ ದೊರೆಯುವುದು ನಿಜವಾದ ದ್ರವ್ಯ.

ಈ ಕೆಳಗಿನ ವಚನಗಳು (ನಿಧಿ) ದ್ರವ್ಯತ್ವ (ಅಂದರೆ ನಮಗೆ ಆಸ್ತಿ ಕೊಡುವ ಬಗ್ಗೆ) ಹೇಗೆ ಹೋಲಿಕೆಯಾಗಿದೆ ಎಂದು ತಿಳಿಯೋಣ.

* ಲೂಕ – 3 (ಸ್ನಾನಿಕನಾದ ಯೋಹಾನ) – ಬಟ್ಟೆ/ಊಟ ಹಂಚಿಕೊಳ್ಳುವುದು, ಮೋಸ ಮಾಡದಿರುವುದು, ತೃಪ್ತರಾಗಿರುವುದು.

* ಮತ್ತಾಯ – 19:21 (ಶ್ರೀಮಂತನ ನಿಬಂಧನ) – ನಿನ್ನಲ್ಲಿರುವ ಆಸ್ತಿಯನ್ನು ಮಾರಿ ಬಡವರಿಗೆ ಕೊಡು ನನ್ನಲ್ಲಿರುವ ದ್ರವ್ಯವನ್ನು ಹುಡುಕು.

* ಲೂಕ – 19:1–10 (ಜಕ್ಕಾಯ) – ತನ್ನ ಆಸ್ತಿಯಲ್ಲಿ ಅರ್ಧದಷ್ಟು ಜನರಿಗೆ ಕೊಟ್ಟಿದನು. ಯೇಸುವು ಹೇಳಿದ – ಈ ಹೊತ್ತೇ ಮನೆಗೆ ರಕ್ಷಣೆಯಾಯಿತು.

* ಅಪೋಸ್ತಲರ 2 ಮತ್ತು 4 (ಮೊಟ್ಟಮೊದಲು ತಿರುಗಿಕೊಂಡವರು) ತಮ್ಮ ಆಸ್ತಿಯನ್ನು ಮಾರಿ ಕೊರತೆ ಇದ್ದವರಿಗೆ ಕೊಟ್ಟರು, ದೇವರ ರಾಜ್ಯದ ನಿಧಿಯನ್ನು ಪಡೆದರು.

* ಅಪೋಸ್ತಲರು – 19:19 (ಎಫೆಸದವರು) – 65 ಲಕ್ಷದಷ್ಟು ಮಾಟ ಮಂತ್ರ ಪುಸ್ತಕಗಳನ್ನು ಸುಟ್ಟುಬಿಟ್ಟು ಉತ್ತಮ ನಿಧಿಯನ್ನು ಕಂಡುಕೊಂಡರು. ದೇವರು, ಕೂಡುವುದನ್ನು ಮತ್ತು ತ್ಯಾಗವನ್ನು, ಆಶೀವಾದ/ಸಂಪತನ್ನು ಪಡೆಯುವುವದಕ್ಕೆ ಹೋಲಿಸುತ್ತಾರೆಂದು ಏಕೆಂದು ಆಲೋಚಿಸಿ ನೋಡಿ.

## ದಿನ – 25

## "ಕೊಡುವುದು" ಹಳೆ ಒಡಂಬಡಿಕೆ ಪ್ರಕಾರ

ಹಳೆ ಒಡಂಡಿಕೆಯ ವ್ಯಕ್ತಿಗಳು ಯಾವುದನ್ನು ಕೊಟ್ಟರೆಂಬುದನ್ನು ವಿವರಿಸಿ.

1) ಆದಿಕಾಂಡ – 14:20 ಅಬ್ರಹಾಮ____________________ಕೊಟ್ಟನು

2) ಆದಿಕಾಂಡ – 28:22 ಯಾಕೋಬ____________________ಕೊಟ್ಟನು

3) ಯಾಜಕಕಾಂಡ – 27:30–32

ಇಸ್ರಾಯೇಲರು________________ಯನ್ನು ಕೊಡಬೇಕೆಂದು ಸೂಚನೆ ಪಡೆದ್ದರು.

4) ಅರಣ್ಯಕಾಂಡ – 18:26 (ನೆಹೆಮಿಯಾ – 10:38)

ಯಾಜಕ/ಲೇವಿಯರು ____________________ಕೊಟ್ಟರು

5) ಅರಣ್ಯಕಾಂಡ – 28 ಮತ್ತು 29

ಇಸ್ರಾಯೇಲರು ಹೋಮ, ಸಮರ್ಪಣೆ ಮೂಲಕ ಕೊಟ್ಟದ್ದು__________________________________________________________________

6) ಧರ್ಮೋಪದೇಶ – 14:22–29

ಇಸ್ರಾಯೇಲರು ಕೊಡಬೇಕಾದ ಮೂರು ದಶಮಾಂಷಗಳು________________

7) 2 ಸಾಮುವೇಲ – 24:24

ದಾವೀದನ ಕೊಡುವ ಹೃದಯವನ್ನು ವಿವರಿಸಿ______________________

8) ಮಲಾಕಿ – 1

ಮಲಾಕಿ ಇಸ್ರಾಯೇಲರಿಗೆ ಮಾಡಿದ ಸವಾಲುಗಳನ್ನು ವಿವರಿಸಿ. ಮತ್ತು ಅದು ಈಗ ನಮಗೆ ಹೇಗೆ ಅನ್ವಹಿಸುತ್ತದೆ.

9) ಮಲಾಕಿ – 3

ಮಲಾಕಿಯನು, ಅವರಿಗೆ ಕೊಡುವುದರ ಬಗ್ಗೆ ವಿಶೇಷವಾಗಿ ಕೊಟ್ಟ ಸವಾಲು______________________________

## ದಿನ – 26

## ಕೊಡುವುದು ಹೊಸ ಒಡಂಬಡಿಕೆಯ ಪ್ರಕಾರ

ಹೊಸ ಒಡಂಡಿಕೆಯ ವ್ಯಕ್ತಿಗಳು ಯಾವುದನ್ನು ಕೊಟ್ಟರೆಂಬುದನ್ನು ವಿವರಿಸಿ.

1. ಮಾರ್ಕ – 12:41–44

ವಿಧವೆ________________________ಕೊಟ್ಟಳು

2. ಲೂಕ – 7:36 – 50

ದುರಾಚಾರಿ ಹೆಂಗಸು______________________ ಕೊಟ್ಟಳು

3. ಅಪೋಸ್ತಲ – 4:36–37

ಬಾರ್ನಬನು ______________________ಕೊಟ್ಟನು

4. 2 ಕೋರಿಂಥ – 8:1–4

ಮೆಕೆದೋನ್ಯರು ______________________ಕೊಟ್ಟರು

5) 2 ಕೋರಿಂಥ – 8:9

ಯೇಸು _________________________________ಕೊಟ್ಟರು

## ದಿನ – 27

## ಸಮೃದ್ಧಿ

ಸಮೃದ್ಧಿ ಎಂದರೆ ವೃದ್ಧಿಯಾಗುತ್ತಲೇ ಇರುವುದು, ಹೆಚ್ಚಳ ಪಡುವುದು. ದೇವರು ಹೇರಳವಾಗಿ ನಮ್ಮನ್ನು ಸಮೃದ್ಧಿಯಿಂದ ತುಂಬುತ್ತಾರೆ.

**ಲೂಕ – 6:38**

ಕೊಡಿರಿ ಆಗ ನಿಮಗೂ ಕೊಡುವರು ಜಡಿದು ಅಲ್ಲಾಡಿಸಿ ಹೊರಚೆಲ್ಲುವ ಹಾಗೆ ತುಂಬಾ ಅಳತೆಯಿಂದ ಅಳೆದು ನಿಮ್ಮ ಸೆರಗಿಗೆ ಹಾಕುವರು. ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು ಅಂದನು.

* ನಾವು ಕೊಡುವುದರಿಂದ ದೇವರು ನಮಗೆ ಹೇಗೆ ಕೊಡುತ್ತಾರೆ?

**ಯೋಹಾನ – 10:10**

ಕಳ್ಳನು ಕದ್ದುಕೊಳ್ಳುವುದಕ್ಕೂ ಕೊಯ್ಯುವುದಕ್ಕೂ ಹಾಳು ಮಾಡುವುದಕ್ಕೂ

ಬರುತ್ತಾನೆ ಹೊರತು ಮತ್ತಾವುದಕ್ಕೂ ಬರುವುದಿಲ್ಲ. ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗೆ ಇರಬೇಕೆಂತಲೂ ಬಂದನು.

**2 ಕೋರಿಂಥ – 9:8**

ದೇವರು ಸಕಲ ವಿಧವಾದ ದಾನಗಳನ್ನು ನಿಮಗೆ ಧಾರಾಳವಾಗೆ ಅನುಗ್ರಹಿಸುವುದಕ್ಕೆ ಶಕ್ತನಾದ್ದರಿಂದ ನೀವು ಯಾವಾಗಲೂ ಎಲ್ಲಾ ವಿಷಯಗಳಲ್ಲಿ ಪರಿಪೂರ್ಣಯುಳ್ಳವರಾಗೆ ಸಕಲ ಸತ್ಕಾರ್ಯಗಳನ್ನು ಹೇರಳವಾಗೆ ಮಾಡುವವರಾಗಿರಬೇಕು.

**1 ತಿಮೊಥಿ – 6:17–19**

ಇಹಲೋಕ ವಿಷಯದಲ್ಲಿ ಐಶ್ವರ್ಯವುಳ್ಳವರು ಅಹಂಕಾರಿಗಳಾಗಿರದೆ ಅಸ್ಥಿರವಾದ ಐಶ್ವರ್ಯದ ಮೇಲೆ ನಿರೀಕ್ಷೆಯನ್ನಿಡದೇ ನಮ್ಮ ಅನುಭೋಗಕ್ಕೋಸ್ಕರ ನಮಗೆ ಎಲ್ಲವನ್ನೂ ಹೇರಳವಾಗೆ ದಯಪಾಲಿಸುವ ದೇವರ ಮೇಲೆ ನಿರೀಕ್ಷೆಯನ್ನಿಡಬೇಕೆಂತಲೂ ವಾಸ್ತವವಾದ ಜೀವವನ್ನು ಹೊಂದುವುದಕ್ಕೋಸ್ಕರ ಅವರು ಒಳ್ಳೆದನ್ನು ಮಾಡುವವರೂ ಸತ್ಕಾರ್ಯಗಳಲ್ಲಿ ಐಶ್ವರ್ಯವಂತರೂ ದಾನಧರ್ಮಗಳನ್ನು ಮಾಡುವವರೂ ಪರೋಪಕಾರ ಮಾಡುವವರೂ ಆಗಿದ್ದು ಮುಂದಿನ ಕಾಲಕ್ಕೆ ಒಳ್ಳೇ ಅಸ್ತಿವಾರವಾಗುವಂಥವುಗಳನ್ನು ತಮಗೆ ಕೂಡಿಸಿಟ್ಟುಕೊಳ್ಳಬೇಕೆಂತಲೂ ಅವರಿಗೆ ಅಜ್ಞಾಪಿಸು.

* ಪೌಲನು ಶ್ರೀಮಂತರಿಗೆ ಆಸ್ತಿಯ ಕುರಿತು ಏನು ಮಾಡಲು ಆಜ್ಞಾಪಿಸುತ್ತಿದ್ದಾನೆ?

## ದಿನ – 28

## ಪ್ರತಿಫಲ/ಬಹುಮಾನ!!

**1) ಮತ್ತಾಯ – 6:20**

ಆದರೆ ಪರಲೋಕದಲ್ಲಿ ಗಂಟು ಮಾಡಿ ಇಟ್ಟುಕೊಳ್ಳಿರಿ; ಅಲ್ಲಿ ಅದು ನುಸಿ ಹಿಡಿದು ಕಿಲುಬು ಹತ್ತಿ ಕೆಟ್ಟು ಹೋಗುವುದಿಲ್ಲ. ಅಲ್ಲಿ ಕಳ್ಳರು ಕನ್ನ ಕೊರೆಯುವುದೂ ಇಲ್ಲ ಕದಿಯುವುದೂ ಇಲ್ಲ.

* ನಮಗೆ ಬಹುಮಾನ ಸಿಗಬೇಕೆಂದು ದೇವರು ಬಯಸುತ್ತಾರಾ?

**2) ಇಬ್ರಿಯ – 11:6**

ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ. ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ.

ದೇವರು ನಮಗಾಗಿ ಬಹುಮಾನ ಇಟ್ಟಿದಾರೆಂದು ನಂಬುತ್ತಿಯಾ?

**3) ಯೋಹಾನ – 14:1–4**

ನಿಮ್ಮ ಹೃದಯವು ಕಳವಳಕೊಳ್ಳದೇ ಇರಲಿ, ದೇವರನ್ನು ನಂಬಿರಿ ನನ್ನನ್ನೂ ನಂಬಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಇವೆ. ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೇನು. ನಿಮಗೆ ಸ್ಥಳವನ್ನು ಸಿದ್ಧಮಾಡುವುದಕ್ಕೆ ಹೋಗುತ್ತೇನಲ್ಲಾ ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ದ ಮಾಡಿದ ಮೇಲೆ ತಿರುಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವನು. ಯಾಕೆಂದರೆ ನಾನಿರುವ ಸ್ಥಳದಲ್ಲಿ ನೀವೂ ಸಹ ಇರಬೇಕು. ಮತ್ತು ನಾನು ಹೋಗುವ ಸ್ಥಳದ ಮಾರ್ಗವು ನಿಮಗೆ ತಿಳಿದಿದೆ ಅಂದನು.

* ಯೋಚಿಸಿರಿ ನಮಗಾಗಿ ಯೇಸು ಸ್ಥಳವನ್ನು ಸಿದ್ಧ ಮಾಡುತ್ತಿದ್ದಾರೆಂದರೆ ನಮಗೆ ಎಷ್ಟು ಸಂತೋಷವಾಗುತ್ತದೆ!!!

**ಪರಲೋಕ ವಿಸ್ತರಣೆ: ನಮ್ಮ ಸಂಪತ್ತು ಹೇಗೆ ಕಾಣಿಸುತ್ತದೆ?**

**ಪ್ರಕಟಣೆ – 21:18–26**

ಆ ಪ್ರಕಾರವು ಸೂರ್ಯಕಾಂತ ಶಿಲೆಯಿಂದ ಕಟ್ಟಲ್ಪಟ್ಟಿತ್ತು. ಪಟ್ಟಣವು ಶುದ್ಧ ಗಾಜಿನಂತಿರುವ ಸೋಸಿದ ಬಂಗಾರವೇ. ಪಟ್ಟಣದ ಪ್ರಕಾರದ ಅಸ್ತಿವಾರಗಳು ಸಕಲ ವಿಧವಾದ ರತ್ನಗಳಿಂದ ಅಲಂಕೃತವಾಗಿದ್ದವು. ಮೊದಲನೆಯ ಅಸ್ತಿವಾರವು ವಜ್ರ, ಎರಡನೇದು ವೈಡೂರ್ಯ, ಮೂರನೇದು ಪಚ್ಚೆ, ನಾಲ್ಕನೇದು ಪದ್ಮರಾಗ, ಐದನೇಯ ಗೋಮೇಧಿಕ, ಆರನೇದು ಮಾಣಿಕ್ಯ, ಏಳನೇದು ಪೀತರತ್ನ, ಎಂಟನೇದು ಬೇರುಲ್ಲ,

ಒಂಭತ್ತನೇದು ಪುಷ್ಯರಾಗ, ಹತ್ತನೇದು ಗರುಡಪಚ್ಚೆ, ಹನ್ನೊಂದನೆದು ಇಂದ್ರ ನೀಲ, ಹನ್ನೆರಡನೇದು ನೀಲಸ್ಫಟಿಕ. ಹನ್ನೆರಡು ಹೆಬ್ಬಾಗಿಲುಗಳು ಹನ್ನೆರಡು ಮುತ್ತುಗಳಾಗಿದ್ದವು; ಒಂದೊಂದು ಬಾಗಿಲು ಒಂದೊಂದು ಮುತ್ತಿನಿಂದ ಮಾಡಲ್ಪಟ್ಟಿತ್ತು. ಪಟ್ಟಣದ ಬೀದಿಯು ಸ್ವಚ್ಛವಾದ ಗಾಜಿನಂತಿರುವ ಸೋಸಿದ ಬಂಗಾರವಾಗಿತ್ತು. ಪಟ್ಟಣದಲ್ಲಿ ನಾನು ದೇವಾಲಯವನ್ನು ಕಾಣಲಿಲ್ಲ. ಯಾಕೆಂದರೆ ಸರ್ವಶಕ್ತನಾದ ದೇವರಾಗಿರುವ ಕರ್ತನೂ ಯಜ್ಞದ ಕುರಿಯಾದಾತನೂ ಅದರ

ದೇವಾಲಯವಾಗಿದ್ದಾರೆ. ಪಟ್ಟಣಕ್ಕೆ ಬೆಳಕನ್ನು ಕೊಡುವುದಕ್ಕೆ ಸೂರ್ಯನಾಗಲಿ, ಚಂದ್ರನಾಗಲಿ ಬೇಕಾಗಿಲ್ಲ. ಅದಕ್ಕೆ ದೇವರ ಪ್ರಭಾವವೇ ಬೆಳಕನ್ನು ಕೊಟ್ಟಿತು. ಯಜ್ಞದ ಕುರಿಯಾದಾತನೇ ಅದರ ದೀಪವು ಅದರ ಬೆಳಕಿನಿಂದ ಸರ್ವಜನಾಂಗದವರು ಸಂಚಾರ ಮಾಡುವವರು. ಭೂರಾಜರು ತಮ್ಮ ವೈಭವವನ್ನು ಅಲ್ಲಿಗೆ ತರುವರು. ಅದರ ಬಾಗಿಲುಗಳು ಹಗಲಿನಲ್ಲಿ ಮುಚ್ಚುವುದೇ ಇಲ್ಲ. ರಾತ್ರಿಯಂತೂ ಅಲ್ಲಲ್ಲಿ ಜನಾಂಗಗಳ ವೈಭವವು ಘನವೂ ಅಲ್ಲಿಗೆ ಬರುವವು.

**ಪರಲೋಕ ಸಂಪತ್ತಿನ ವಿಸ್ತರಣೆ.......**

**ಮೇಲುಕು ಹಾಕು**

* ದ್ರವ್ಯ ಕ್ರಿಸ್ತನ ಸಂಭಾಷಣೆಯ ಕೇಂದ್ರವಾಗಿದೆ.
* ಪ್ರಾಪಂಚಿಕ ಸಂಪತ್ತನ್ನು ಬಿಟ್ಟು ನಿಜವಾದ ಸಂಪತ್ತನ್ನು ಹುಡುಕುವವರಾಗಬೇಕೆಂದು ದೇವರ ಚಿತ್ತವಾಗಿದೆ.
* ನಾವು ಕೊಡುವವರಾಗಿರಬೇಕೆಂದೇ ಸೃಷ್ಟಿಸಲ್ಪಟ್ಟಿದ್ದೇವೆ.
* ಕೊಡುವುದರಿಂದ ಪ್ರಾಪಂಚಿಕ ವಾಸ್ತವಿಕತೆಯನ್ನು ಬಿಟ್ಟು ಪರಲೋಕ ಸಂಪತ್ತನ್ನು ಹೊಂದುತ್ತೇವೆ.
* ದೇವರು ಸಮೃದ್ಧವಾಗಿ ಕೊಡುವರು.
* ದೇವರ ಬಹುಮಾನ ನಿತ್ಯವಾಗಿರುವುದು, ಅಳಿಸಲಾರದ್ದು

ನಮಗಾಗೆ ಆತನು ವಿಶೇಷವಾದದ್ದನ್ನು ಸಿದ್ಧಪಡಿಸುತ್ತಿದ್ದಾರೆ. ಆದ್ದರಿಂದ ನಾವು ಅಂಥದನ್ನೇ ಹುಡುಕಬೇಕೆಂಬುದು ಆತನ ಚಿತ್ತವಾಗಿದೆ.

ನಮ್ಮ ನಿಧಿ (ಸಂಪತ್ತು) ಸ್ವರ್ಗದಲ್ಲಿ......ಅದುವೇ ಯೇಸು ಕ್ರಿಸ್ತ.

## ವಾರ – 5 ಆರ್ಥಿಕ ಯೋಜನೆ

## (ಹಣಕಾಸಿಗೆ ಸಂಬಂಧಿಸಿದ ಯೋಜನೆ)

## "ರೇಖೆಗಾಗಿ ಜೀವಿಸು, ಚುಕ್ಕೆಗಾಗಿ ಅಲ್ಲ"

– ರ್‍ಯಾಂಡಿ ಅಲ್ಕಾರ್ನ್

ಈ ವಾರ ದೇವರ ದೃಷ್ಟಿಕೋನದ ಕಡೆಗೆ ಕೇಂದ್ರೀಕರಿಸೋಣ. ನಮ್ಮ ಆರ್ಥಿಕ ವಿಷಯ (ಯೋಜನೆ)ಯ ಬಗ್ಗೆ ದೇವರ ದೃಷ್ಟಿಕೋನ ಏನಾಗಿದೆ ಎಂದು ತಿಳಿಯೋಣ.

ಆರ್ಥಿಕ ಯೋಜನಾ ಹಾದಿಯಲ್ಲಿ ಅನೇಕ ಶರತ್ತುಗಳು, ಕಠಿಣ ಪರಿಶ್ರಮ, ಒಳ್ಳೆ ಸಲಹೆ, ಮಾರ್ಗದರ್ಶನ, ಬುದ್ಧಿವಂತಿಕೆ, ಎಲ್ಲವೂ ಒಳಗೊಂಡಿರುತ್ತದೆ.

"ಆರ್ಥಿಕ ಯೋಜನೆಯ ಬಗ್ಗೆ ಸಲಹೆ ನೀಡುವವರು ಅವಶ್ಯಕ"

## ಗುರುವಿನಿಂದ ಕಲಿ

## (ನೆನಪಿಡಬೇಕಾದ ವಚನ)

**ಜ್ಞಾನೋಕ್ತಿ – 27:23**

ನಿನ್ನ ಹಿಂಡುಗಳ ಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡಿರು. ನಿನ್ನ ಮಂದೆಗಳ ಮೇಲೆ ಮನಸ್ಸಿಡು.

ಇಲ್ಲಿ ಸಲೋಮೋನನು ಸಕಲ ಜ್ಞಾನ ಐಶ್ವರ್ಯದಿಂದ ಕೂಡಿದವನಾಗಿ ತನ್ನ ಜ್ಞಾನದಿಂದ ಆರ್ಥಿಕತೆಯ ಬಗ್ಗೆ ತಿಳಿಸುತ್ತಿದ್ದಾರೆ. ಸಲಹೆ ಸೂಚನೆಗಳನ್ನು ತೆಗೆದುಕೊಳ್ಳಲು ತಿಳಿಸುತ್ತಾರೆ. ಯೋಜನೆ ಹಾಕಿ ಉಪಯೋಗಿಸಬೇಕು (ಹಣವನ್ನು) ಎಂದು ಗಂಭೀರವಾಗಿ ಹೇಳುತ್ತಿದ್ದಾರೆ.

* ಮುಂದಿನ ಭಕ್ತಿಯು ಪ್ರಾಯೋಗಿಕವಾಗಿದೆ.

ಆದ್ದರಿಂದ ಯೋಜನೆ ಹಾಕಿಕೊಂಡು ನಿನಗೆ ಬೇಕಾದ ಸಹಾಯವನ್ನು ಪ್ರಾರ್ಥನೆಯ ಮೂಲಕ ಸ್ಪಷ್ಟವಾಗೆ ಕೇಳಿ ದೇವರಿಂದ ಮಾರ್ಗದರ್ಶನವನ್ನು ಪಡೆಯಬೇಕು.

* ನಿನ್ನ ಜೀವಿತದಲ್ಲಿ ದೇವರ ಯೋಜನೆ ಏನಾಗಿದೆ? ಮತ್ತು ಹೇಗಿದೆ? ಎಂದು ಪ್ರಾರ್ಥನಾಭರಿತವಾದ ಭಕ್ತಿಯಿಂದ ತಿಳಿದುಕೊಳ್ಳುವಿರಿ.

ಆದ್ದರಿಂದ ಆತನನ್ನು ನಂಬಿ ನಡೆಯುವುದೇ ಆತನ ಚಿತ್ತವಾಗಿದೆ.

## ದಿನ – 29

## ಮೊದಲು ಒಪ್ಪಿಸು

**ಜ್ಞಾನೋಕ್ತಿ – 16:3**

ನಿನ್ನ ಕಾರ್ಯಭಾರವನ್ನು ಯೆಹೋವನಿಗೆ ವಹಿಸಿದರೆ ನಿನ್ನ ಉದ್ದೇಶಗಳು ಸಫಲವಾಗುವವು.

ನಿನ್ನ ಯೋಜನೆಯನ್ನು ದೇವರು ಊಹಿಸಬಲ್ಲರು. ನಿನ್ನ ಆರ್ಥಿಕ ವ್ಯವಸ್ಥೆಯ ಬಗ್ಗೆ ದೇವರಲ್ಲಿ ವಿಜ್ಞಾಪಿಸಿ ಆತನ ಮೇಲೆ ನಂಬಿಕೆಯಿಡು. ದೇವರು ಎಲ್ಲವನ್ನೂ ನೋಡುವವರಾಗಿದ್ದಾರೆ. ದೇವರು ವ್ಯವಸ್ಥಾಪಕ (ನಿರ್ವಾಹಕ) ರಾಗಿದ್ದಾರೆ.

**ಜ್ಞಾನೋಕ್ತಿ – 14:24**

ಜ್ಞಾನಿಗಳ ಜ್ಞಾನ ಕಿರೀಟವೇ ಅವರ ಶ್ರೇಷ್ಠ ಸಂಪತ್ತು. ಜ್ಞಾನಹೀನರ ಮೂರ್ಖತನವು ಬರೀ ಮೂರ್ಖತನವೇ.

* ಜಯವನ್ನು ಎದುರು ನೋಡು – ದೇವರು ನಮಗಾಗಿ ಇರುವಾಗ ನಮ್ಮನ್ನು ಎದುರಿಸುವವರು ಯಾರು?

* ನಮ್ಮ ನೋವಿನಲ್ಲಿಯೂ ಯೋಜನೆಯಂತೆ ನಡೆದಾಗ ನಮಗೆ ದೇವರಿಂದ ಬಹುಮಾನ ಖಂಡಿತ.

* ಎಂಥ ಬಹುಮಾನ ಎದುರು ನೋಡುತ್ತಿದ್ದಿಯಾ?

* ನಿನ್ನ ಪ್ರಕಾರ ಸಂಪತ್ತು ಎಂದರೆ ಏನು?

## ದಿನ – 30

## ಸಲಹೆ ತೆಗೆದುಕೋ

**ಜ್ಞಾನೋಕ್ತಿ – 15:22**

ಯೋಚನೆ ಹೇಳುವವರಿಲ್ಲದೇ ಉದ್ದೇಶಗಳು ನೆರವೇರವು. ಬಹುಮಂದಿ ಆಲೋಚನಾಪರರಿರುವಲ್ಲಿ ಈಡೇರುವವು.

**ಜ್ಞಾನೋಕ್ತಿ – 12:15**

ಮೂರ್ಖನ ನಡತೆ ಅವನ ಗಣನೆಗೆ ಸರಿ, ಜ್ಞಾನಿಯು ಉಚಿತಾಲೋಚನೆಯನ್ನು ಗಮನಿಸುವನು.

**ಜ್ಞಾನೋಕ್ತಿ – 13:10**

ಹೆಮ್ಮೆಯ ಫಲವು ಕಲಹವೇ, ಬುದ್ಧಿವಾದಕ್ಕೆ ಕಿವಿಗೊಡುವವರಲ್ಲಿ ಜ್ಞಾನ.

ನಿಮ್ಮ ಆರ್ಥಿಕ ವ್ಯವಸ್ಥೆಯ ಸಲಹೆಗಾರರು/ಮಾರ್ಗದರ್ಶಕರು ಯಾರು?

* ಪ್ರಾರ್ಥನೆ ಮಾಡಿ ನಿಮ್ಮ ಹಣಕಾಸಿನ ವಿಷಯಕ್ಕೆ ಸಲಹೆ ನೀಡುವ ಒಬ್ಬ ಒಳ್ಳೆ ಉಪದೇಶಿಕ/ಮಾರ್ಗದರ್ಶಕರನ್ನು ಪಡೆಯಿರಿ.

* ಆತ್ಮೀಯ ಶಿಷ್ಯರಿಂದ ಸಲಹೆ, ಮಾರ್ಗದರ್ಶನವನ್ನು ಪಡೆಯಲು ಮುಂದಾಗಬೇಕು. ಮತ್ತು ಆರ್ಥಿಕತೆಗೆ ಸಂಬಂಧಿಸಿದ ಪುಸ್ತಕಗಳನ್ನು ಓದುವುದು. ಕೂಟಗಳಲ್ಲಿ ಭಾಗವಹಿಸುವುದು ರೂಢಿಮಾಡಿಕೊಳ್ಳಬೇಕು.

## ದಿನ – 31

## ಪ್ರರಿಶ್ರಮದಿಂದ ಕೆಲಸ ಮಾಡು

**ಜ್ಞಾನೋಕ್ತಿ – 14:23**

ಶ್ರಮಯಿಂದ'ಮೃದ್ಧಿ, ಹರಟೆಹಿಂದ ಕೊರತೆ

**ಜ್ಞಾನೋಕ್ತಿ – 21:5**

ಶ್ರಮಶೀಲರಿಗೆ ತಮ್ಮ ಪ್ರಯತ್ನಗಳಿಂದ ಸಮೃದ್ದಿ, ಆತುರ ಪಡುವವರಿಗೆಲ್ಲಾ ಕೊರತೆಯೇ

ಕೇವಲ ನಿಮ್ಮ ಜ್ಞಾನ ಬದಲಾವಣೆಯಾಗುವುದು ಮಾತ್ರವಲ್ಲ ನಿಮ್ಮ ಹಣಕಾಸಿಗೆ ಸಂಬಂಧಿಸಿದ ಖರ್ಚಿನ ನಡುವಳಿಕೆಯ ಬಗ್ಗೆಯೂ ಪ್ರಾರ್ಥನೆ ಮಾಡಿರಿ

* ನಿಮ್ಮ ಹಣಕಾಸು ವೆಚ್ಚ, ಆರ್ಥಿಕತೆ, ಉಳಿದ ಹಣ, ಇದೆಲ್ಲದರ ಬಗ್ಗೆ ನಿಮ್ಮ ಮಾರ್ಗದರ್ಶಕರಿಂದ ಸಲಹೆ ತೆಗೆದುಕೊಂಡು ಸಾಧ್ಯವಿದ್ದರೆ ಪುಸ್ತಕದಲ್ಲಿ ಬರೆದಿಡಲು ಪ್ರಯತ್ನಿಸಿ

* ನಿಮ್ಮ ಎಲ್ಲಾ ಯೋಚನೆಗಳನ್ನು / ಯೊಜನೆಗಳನ್ನು ನಿಮ್ಮ ಮಾರ್ಗದರ್ಶಕರಿಗೆ ತಿಳಿಸಿ (ಒಪ್ಪಿಸಿ)

* ಹಣಕಾಸಿನ ಲೆಕ್ಕಚಾರ ವಿಲ್ಲದೆ ಅದರ ಖರ್ಚು ವೆಚ್ಚ ಮಾಡುವುದು ಸರಿಯಲ್ಲ

## ದಿನ – 32

## ಯೋಜನೆ ಹಾಕಿಕೋ

**ಲೂಕ – 14:28–30**

ನಿಮ್ಮಲ್ಲಿ ಯಾವನಾದರೂ ಒಂದು ಬುರುಜನ್ನು ಕಟ್ಟಿಸಬೇಕೆಂದು ಯೋಚಿಸಿದರೆ ಅವನು ಮೊದಲು ಕೂತುಕೊಂಡು ಅದಕ್ಕೆ ಎಷ್ಟು ಖರ್ಚು ಹಿಡಿದೀತು. ಅದನ್ನು ತೀರಿಸುವುದಕ್ಕೆ ಸಾಕಾಗುವಷ್ಟು ಹಣ ನನ್ನಲ್ಲಿ ಉಂಟೋ ಎಂದು ಲೆಕ್ಕ ಮಾಡುವುದಿಲ್ಲವೇ? ಹೀಗೆ ಲೆಕ್ಕ ಮಾಡದೆ ಅದಕ್ಕೆ ಅಸ್ತಿವಾರ ಹಾಕಿದ ಮೇಲೆ ಆ ಕೆಲಸವನ್ನು ಪೂರೈಸಲಾರದೆ ಹೋದರೆ ನೋಡುವವರೆಲ್ಲರು ಈ ಮನುಷ್ಯನು ಕಟ್ಟಿಸುವುದಕ್ಕಂತೂ ತೊಡಗಿದನು. ಕೆಲಸ ಪೂರೈಸಲಾರದೇ ಹೋದನು ಎಂದು ಅವನನ್ನು ಹಾಸ್ಯ ಮಾಡಾರು.

* ನಿಮ್ಮ ಹಣಕಾಸಿನ ವಿಷಯದಲ್ಲಿ ಬುದ್ಧಿಶಾಲಿ ಹಾಗೂ ಮೂರ್ಖತನದ ಮಾರ್ಗವಿದೆ.

* ಹಣದ ಖರ್ಚಿನ ಬಗ್ಗೆ ಯೋಜನೆ ಇಲ್ಲದೇ ಹೋದರೆ ನಮ್ಮ ಬಯಕೆಗಳಿಗೆ ಕಡಿವಾಣವೇ ಇರುವುದಿಲ್ಲ.

* ಎಷ್ಟು ಹಣ ಬಂದಿದೆ? ಇದರಲ್ಲಿ ಎಷ್ಟು ಉಳಿದಿದೆ? ಎಂದು ಎಲ್ಲದರ ಕುರಿತು ಒಂದು ರೂಪಾಯಿಯಿಂದ ಹಿಡಿದು ಲೆಕ್ಕ ಹಾಕಿ.

* ಮತ್ತು ಅದನ್ನೆಲ್ಲಾ ಬರೆಯಲು (ಕ್ರಮವಾಗಿ) ಮಾರ್ಗದರ್ಶಕರಿಂದ ಸಲಹೆಗಳನ್ನು ತೆಗೆದುಕೊಂಡು ನಿರ್ವಹಿಸಬೇಕು.

## ದಿನ – 33

## ಕೂಡಿಡಲು ಪ್ರಾರಂಭಿಸು

**ಜ್ಞಾನೋಕ್ತಿ – 13:11**

ಸುಮ್ಮನೆ ಸಿಕ್ಕಿದ ಸಂಪತ್ತು ಕ್ಷಯಿಸುವುದು, ದುಡಿದು ಕೂಡಿಸಿಕೊಂಡವನಿಗೆ ಅಭಿವೃದ್ಧಿಯಾಗುವುದು.

**ಜ್ಞಾನೋಕ್ತಿ – 13:22**

ಒಳ್ಳೆಯವನ ಆಸ್ತಿ ಸಂತತಿಯವರಿಗೆ ಬಾಧ್ಯ, ಪಾಪಿಯ ಸೊತ್ತು ಸಜ್ಜನರಿಗೆ ಗಂಟು.

* ಹಣದ ಬಗ್ಗೆ ಯೋಜನೆ ಹಾಕುವಾಗ ಅದರಲ್ಲಿ ಉಳಿಸುವುದರ ಬಗ್ಗೆಯೂ ಆಲೋಚಿಸಬೇಕು.

* ಹೇಗೆ ಪ್ರಾರಂಭಿಸಿದ್ದಿಯಾ?

* ಹಣವನ್ನು ಯಾವುದಕ್ಕಾಗಿ ಮತ್ತು ಎಷ್ಟನ್ನು ಉಪಯೋಗಿಸಬೇಕು ಎಂಬುದರ ಬಗ್ಗೆ ಸ್ಪಷ್ಟವಾದ ನಿರ್ಣಯ ಮಾಡಿಕೊಂಡು ಮುನ್ನುಗ್ಗಬೇಕು. ಮತ್ತು ಎಲ್ಲದಕ್ಕೂ ನಾವೇ ಜವಾಬ್ದಾರರು.

ಹಣ ಉಳಿತಾಯದ ಬಗ್ಗೆ ಡೇವ್ ರಾಮ್ಸೇ ಅವರು 3 ಕಾರಣದಲ್ಲಿ ತಿಳಿಸುತ್ತಿದ್ದಾರೆ.

**1) ತುರ್ತು ಪರಿಸ್ಥಿತಿಗಾಗಿ ಹಣ:**

* ಇದರಲ್ಲಿ 10,000/– ಹಣವನ್ನು ಬ್ಯಾಂಕಿನಲ್ಲಿಡಬೇಕು. ಇದು ಕೇವಲ ಅತೀ ಅವಶ್ಯಕತೆಯ ಕಾರ್ಯಕ್ಕಾಗಿ ಮಾತ್ರ ಉಪಯೋಗಿಸಬೇಕು.

* ಯಾವುದು ತುಂಬಾ ಅವಶ್ಯಕವಾಗಿಲ್ಲ ಎಂಬುದನ್ನು ತಿಳಿಯಬೇಕು.

* ನಿಮ್ಮ ಸಾಲ ತೀರಿದ ಮೇಲೆ ಈ ಮೇಲಿನ ನಿಯಮವನ್ನು 3–6 ತಿಂಗಳವರೆಗೆ ಪಾಲಿಸಿರಿ.

**2) ಭವಿಷ್ಯತ್ತಿನ ಖರೀದಿಗೆ:**

ಉದಾ: ಕಾರ್, ಬೈಕ್, ಪ್ರವಾಸ, ಮನೆ, ವಸ್ತುಗಳು ಕೊಂಡುಕೊಳ್ಳುವಿಕೆ, ಯಾವಾಗಲೂ ಸಾಲ ತೆಗೆದು ಕೊಳ್ಳುವುದರಲ್ಲಿಯೇ ಮುಳುಗಬಾರದು. ಇದ್ದುದರಲ್ಲಿ ಖರ್ಚು ಮಾಡುವುದನ್ನು ರೂಢಿಸಿಕೊಳ್ಳಬೇಕು.

**3) ಆಸ್ತಿಯ ಕಟ್ಟಡ:**

ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮತ್ತು ನಿವೃತ್ತಿ ಹೊಂದಿದ ಮೇಲೆ ಉಪಯೋಗಿಸಿ ಹಣವನ್ನು ಕೂಡಿಡಬೇಕು. ಕಷ್ಟದಲ್ಲಿರುವವರಿಗೆ ನೆರವಾಗಲು, ಕೂಟಗಳಿಗೆ ಹೋಗಲು ಇತ್ಯಾದಿಗಳಿಗೆ ಉಪಯೋಗಿಸಲು ಹಣವನ್ನು ಸಂಗ್ರಹಿಸಿಡಬೇಕು.

## ದಿನ – 34

## ಜಾಣ್ಮೆಯ ತಂತ್ರದಿಂದ ಸಾಲವನ್ನು ತೀರಿಸಿ

**ಜ್ಞಾನೋಕ್ತಿ – 6:1–6**

ಮಗನೇ, ನೀನು ನೆರೆಯವನಿಗೆ ಹೊಣೆಯಾಗಿದ್ದರೆ, ಪರನಿಗಾಗಿ ಕೈ ಮೇಲೆ ಕೈ ಹಾಕಿದ್ದರೆ ನೀನು ಮಾತು ಕೊಟ್ಟು ಪಾಶಕ್ಕೆ ಸಿಕ್ಕಿದ್ದೀ. ನಿನ್ನ ವಾಗ್ದಾನವು ನಿನ್ನನ್ನು ಹಿಡಿದಿದೆ. ಹೀಗಿರಲು ಮಗನೇ ನೀನು ನೆರೆಯವನ ಕೈಗೆ ಸಿಕ್ಕಿಕೊಂಡದರಿಂದ ತಪ್ಪಿಸಿಕೊಳ್ಳುವ ಒಂದು ಕೆಲಸ ಮಾಡು, ತ್ವರೆಪಡು, ನಡೆ, ಆ ನೆರೆಯವನನ್ನು ಕಾಡು, ನಿನ್ನ ಕಣ್ಣುಗಳಿಗೆ ನಿದ್ರೆ ಕೊಡಬೇಡ, ರೆಪ್ಪೆಗಳನ್ನು ಮುಚ್ಚದಿರು, ಬೇಟೆಗಾರನ ಕೈಯಿಂದ ಜಿಂಕೆ ಓಡುವಂತೆಯೂ ಪಕ್ಷಿಯು ಹಾರಿ ಹೋಗುವ ಹಾಗೂ ತಪ್ಪಿಸಿಕೋ ಸೋಮಾರಿಯೇ ಇರುವೆಯ ಹತ್ತಿರ ಹೋಗಿ ಅದರ ನಡುವಳಿಕೆಯನ್ನು ನೋಡಿ ಜ್ಞಾನವನ್ನು ತಂದಕೋ.

ಗ್ಯಾಜಲ್ ಎಂದರೆ ಅತೀ ವೇಗವಾಗಿ ಓಡುವ ಜಿಂಕೆ. ಎಂದು ಡೇವ್ ರಾಮ್‌ಸೇ ಹೇಳಿದ್ದಾರೆ. ಸಾಲಕ್ಕಾಗಿ ವ್ಯಾಪಾರಸ್ಥರು ನಮ್ಮನ್ನು ಅಟ್ಟುವಾಗ ಈ ಜಿಂಕೆ ಬೇಟೆಗಾರನ ಕೈಯಿಂದ ಹೇಗೆ ತಪ್ಪಿಸಿಕೊಂಡು ಓಡುತ್ತದೋ, ಹಾಗೆಯೇ ನಾವು ಕೂಡ ಓಡಬೇಕಾಗುತ್ತದೆ.

ಸಾಲವು ನಮ್ಮ ಜೀವನದ ನೆಮ್ಮದಿಯನ್ನು ಸಂಬಂಧವನ್ನು ದೂರ ಮಾಡಿ ಚಿಂತೆಗೊಳಗಾಗುವಂತೆ ಮಾಡುತ್ತದೆ. ಆದ್ದರಿಂದ ಹಣಕಾಸಿನ ಬಗ್ಗೆ ಸರಿಯಾದ ಯೋಜನೆ ಹಾಕುವುದು ತುಂಬಾ ಅವಶ್ಯಕವಾಗಿದೆ.

**ಸಂಬಳದ ಯೋಜನೆ ಈ ಕೆಳಗಿನಂತಿರಬೇಕು:**

* ಅನಾವಶ್ಯಕವಾಗಿ ಹೆಚ್ಚು ವಸ್ತುಗಳನ್ನು ಕೊಂಡುಕೊಳ್ಳುವುದನ್ನು ನಿಲ್ಲಿಸಬೇಕು.

* ನಮ್ಮ ಸಾಮರ್ಥ್ಯವನ್ನು ಮೀರಿ ಸಾಮಾನುಗಳನ್ನು ಕೊಂಡುಕೊಳ್ಳಬಾರದು. ಇದು ಸಾಲಕ್ಕೆ ಕಾರಣವಾಗುತ್ತದೆ.

* ನಿಮ್ಮ ಸಾಲ ಕೊಡುವ ಕಾರ್ಡ್‌ನು ತೆಗೆದು ಬಿಡಬೇಕು.

* ನಿಮ್ಮ ಸಾಲ ಮುಗಿಯುವವರೆಗೆ (ಪೂರ್ಣವಾಗಿ) ನಿಮ್ಮಲ್ಲಿರುವ ಹಣದಿಂದ ಸ್ವಲ್ಪ ಸ್ವಲ್ಪವಾಗೆ ಸಾಲವನ್ನು ತೀರಿಸುತ್ತಾ ಬರಬೇಕು.

* ಇವನ್ನೆಲ್ಲಾ ಸರಿಯಾಗೆ ಮಾಡಲು ನಿಮ್ಮ ಮಾರ್ಗದರ್ಶಕರಿಂದ ಸಲಹೆ ತೆಗೆದುಕೊಳ್ಳಬೇಕು.

## ದಿನ – 35
## ನಿನ್ನ ಆಸ್ತಿಯನ್ನು ಹಂಚು

ಸಭೆಗೆ ಮತ್ತು ಬಡವರಿಗೆ ಆಸ್ತಿಯ ದಾನ ಮಾಡು. ನಂಬಿಕೆಯಿಂದಿರಲು ಶಿಷ್ಯರು ಪ್ರಚೋದನೆ ಹೊಂದಿರಬೇಕು. ಆಗ ನಮ್ಮ ಗುರಾಣಿಯಾದ ದೇವರು ನಮ್ಮನ್ನು ಸಂಪನ್ಮೂಲದಿಂದ ತುಂಬುತ್ತಾರೆ. ಆದ್ದರಿಂದ “ದೇವರ ಯುಕ್ತಿಯುಳ್ಳ ದ್ರವ್ಯ ಸಾಧನವನ್ನು ಆತನ ಮಹಿಮೆಗಾಗಿ ಉಪಯೋಗಿಸು” ನಮ್ಮ ರಾಷ್ಟ್ರ, ನಮ್ಮ ಪಟ್ಟಣಕ್ಕೆ ಸುವಾರ್ತೆಯನ್ನು ತರುವುದು ದೇವರ ಯೋಜನೆಯಾಗಿದೆ. ಮತ್ತು ಕೊರತೆಯುಳ್ಳ ಜನರನ್ನು ಸಂಧಿಸಲು ದೇವರು ನಮಗೆ ನೆರವಾಗುತ್ತಾರೆ.

**1) ಸಭೆಗೆ : ವಾರದ ಕಾಣಿಕೆ**

**1ಕೋರಿಂಥ – 9:14**

ಅದೇ ರೀತಿಯಾಗಿ ಕರ್ತನು ಸಹ ಸುವಾರ್ತೆಯನ್ನು ಸಾರುವವರು ಸುವಾರ್ತೆಯಿಂದಲೇ ಜೀವನ ಮಾಡಬೇಕೆಂದು ನೇಮಿಸಿದನು.

ದೇವರಿಂದ ಕರೆಯಲ್ಪಟ್ಟು ಆತನ ರಾಜ್ಯ ಕಟ್ಟಲು ತಮ್ಮ ಸಮಯವನ್ನು ಸಮರ್ಪಿಸುತ್ತಿರುವ ದೇವ ಜನರಿಗೆ, ಮತ್ತು ಪೂರ್ಣ ಸಮಯ ಆತನ ಸೇವೆಯನ್ನು ಮಾಡುವವರಿಗೆ ನೀವು ಕೊಡುವ ಕಾಣಿಕೆ ತುಂಬಾ ಸಹಾಯವಾಗುತ್ತದೆ.

* ನಮ್ಮ ವಾರದ ಕಾಣಿಕೆಯು ಸಭೆಯಾಗೆ ಕೂಡುವ ಸ್ಥಳವನ್ನು ಒದಗಿಸುತ್ತದೆ. ಮತ್ತು ವಿಶೇಷ ಕೂಟಗಳನ್ನು ಅಂದರೆ ಒಬ್ಬಂಟಿಗರ, ಟೀನ್ ಕ್ಯಾಂಪಸ್, ದಂಪತಿಗಳ ಕೂಟಗಳನ್ನು ಏರ್ಪಡಿಸಲು ನೆರವಾಗುತ್ತದೆ.

**2ಕೋರಿಂಥ – 8:1–4**

ಸಹೋದರರೇ, ಮತದೋನ್ಯದ ಸಭೆಗಳಲ್ಲಿ ದೇವರ ಕೃಪೆಯು ತೋರಿದ ಬಗೆಯನ್ನು ನಿಮಗೆ ತಿಳಿಸುತ್ತೇವೆ. ಆ ಸಭೆಗಳವರು ಬಹಳ ಹಿಂಸೆ ತಾಳುವವರಾದರೂ ಮತ್ತು ವಿಪರೀತವಾದ ಬಡತನದಲ್ಲಿದ್ದರೂ ಬಹು ಆನಂದದಿಂದ ತುಂಬಿದವರಾಗಿ ಅತ್ಯಂತ ಔದಾರ್ಯವುಳ್ಳವರಾದರು. ಅವರು ಶಕ್ತಾನುಸಾರವಾಗಿ ಮಾತ್ರ ಕೊಡದೆ ಶಕ್ತಿಯನ್ನು ಮೀರಿ ತಮ್ಮಷ್ಟಕ್ಕೆ ತಾವೇ ಕೊಟ್ಟರು. ಇದಕ್ಕೆ ನಾನು ಸಾಕ್ಷಿ. ದೇವಜನರಿಗೆ ಸಹಾಯಮಾಡುವ ಕೆಲಸದಲ್ಲಿ ತಾವು ಪಾಲುಗಾರರಾಗುವಂತೆ ಅಪ್ಪಣೆಯಾಗುವಂತೆ ನಮ್ಮನ್ನು ಬಹಳವಾಗಿ ಬೇಡಿಕೊಂಡರು.

* ಕೊಡುವುದರಲ್ಲಿ ಉತ್ತಮ (ಔದಾರ್ಯ)!

ನಿಮ್ಮ ಆದಾಯದಲ್ಲಿ ಪ್ರಥಮ ಫಲದಂತೆ ಮೊದಲು ದೇವರಿಗಾಗಿ ತೆಗೆದಿಡಬೇಕು.

**2 ಕೋರಿಂಥ – 9:6**

ಆದರೆ ಸ್ವಲ್ಪವಾಗಿ ಬಿತ್ತುವವನು ಪೈರನ್ನು ಸ್ವಲ್ಪವಾಗಿ ಕೊಯ್ಯುವನು. ಹೆಚ್ಚಾಗಿ ಬಿತ್ತುವವನು ಹೆಚ್ಚಾಗಿ ಕೊಯ್ಯುವವನು ಎಂದು ತಿಳುಕೊಳ್ಳಿರಿ.

· ಉದಾರ ಮನಸ್ಸಿನಿಂದ ಕೊಡಲು ದೇವರು ನಮಗೆ ಈ ಸಮಯವನ್ನು ಕೊಟ್ಟಿದ್ದಾರೆ.

· ವಾರದ ಕಾಣಿಕೆ ಕೊಡುವ ವಿಷಯದಲ್ಲಿ ನೀವು ಬದಲಾವಣೆಯಾಗಬೇಕಾ?

ಹಾಗಾದರೆ ನಿಮ್ಮ ಮಾರ್ಗದರ್ಶಿಯೊಂದಿಗೆ ಭೇಟಿಯಾಗಿ.

**2) ಧರ್ಮ ಪ್ರಚಾರಕ್ಕಾಗಿ : ವಿಶೇಷ ಕಾಣಿಕೆ:–**

**ಮತ್ತಾಯ – 28:19–20.**

ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ. ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ, ನಾನು ನಿಮಗೆ ಆಜ್ಞಾಪಿಸಿದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ. ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು.

ಸಭೆಯನ್ನು ಸ್ಥಾಪಿಸಲು ಈ ವಿಶೇಷ ಕಾಣಿಕೆ ಪ್ರತಿ ವರ್ಷ ಜೂನ್ ತಿಂಗಳಲ್ಲಿ ಉಪಯೋಗಿಸಲಾಗುತ್ತದೆ. ಮತ್ತು ಸೇವಾ ಮಂಡಲಿಯವರು ಅಲ್ಲಲ್ಲಿ ಹೋಗಿ ಸುವಾರ್ತೆಯನ್ನು ಸಾರಲು ಹಾಗೂ ಕೊರತೆಯಿದ್ದವರು ದೇವರನ್ನು ಕಂಡುಕೊಳ್ಳುವ ಅವಶ್ಯಕತೆಯನ್ನು ಪೂರೈಸಲು ಈ ಕಾಣಿಕೆಯು ಉಪಯೋಗವಾಗುತ್ತದೆ.

- ನೀನು ಹೇಗೆ ಸಹಾಯ ಮಾಡಲು ಸಾಧ್ಯ?

"ನಿಂತುಕೊಂಡು ಕೊಡು ಇಲ್ಲವೆ ಹೋಗಿ ಬೆಳೆಸು

- ಯಾಕೆಂದರೆ, ಕೆಲವರು ಹೋಗಿ ಸಭೆಯನ್ನು ಸ್ಥಾಪಿಸುತ್ತಾರೆ. ಮತ್ತು ಕೆಲವರು ಉದಾರತೆಯಿಂದ ಕಾಣಿಕೆಯನ್ನು ಕೊಡುವುದರ ಮೂಲಕ ಸಭೆಯನ್ನು ಸ್ಥಾಪಿಸಲು ನೆರವಾಗುತ್ತಾರೆ.

- ನಿನ್ನ ಪಾತ್ರಕ್ಕೆ ದೇವರ ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸು
- ಇಡೀ ವಿಶ್ವದ ಪ್ರತಿಯೊಬ್ಬರು ಈ ದೇವರ ಸೇವೆಯಲ್ಲಿ ಪಾಲ್ಗೊಳ್ಳುವರು.

**2ಕೋರಿಂಥ – 8:13–4**

ಇತರರಿಗೆ ಕಷ್ಟ ಪರಿಹಾರವೂ ನಿಮಗೆ ಕಷ್ಟವೂ ಉಂಟಾಗಬೇಕೆಂದು ನನ್ನ ತಾತ್ಪಾರ್ಯವಲ್ಲ. ಸಮಾನತ್ವವಿರಬೇಕೆಂಬುದೇ ನನ್ನ ತಾತ್ಪರ್ಯ. ಸದ್ಯಕ್ಕೆ ನಿಮ್ಮ ಸಮೃದ್ಧಿಯು  ಅವರ ಕೊರತೆಯನ್ನು ನೀಗಿಸುತ್ತದೆ. ಮುಂದೆ ಅವರ ಸಮೃದ್ಧಿಯು ನಿಮ್ಮ ಕೊರತೆಯನ್ನು ನೀಗಿಸುವುದು. ಹೀಗೆ ಸಮಾನತ್ವವುಂಟಾಗುವುದು.

- ಯಾಕೆ ದೇವರು ಕೆಲವರಿಗೆ ಹೆಚ್ಚು, ಇನ್ನು ಕೆಲವರಿಗೆ ಕಡಿಮೆಯಾಗಿ ಕೊಟ್ಟಿದ್ದಾರೆ?
- ಶ್ರೀಮಂತನು ಬಡವರಿಗೆ ಸಹಾಯ ಮಾಡಲೆಂದು ಕೊಟ್ಟಿದ್ದಾರೆಯೇ?
- ಇಲ್ಲಿ ಪೌಲನು "ಸಮಾನತ್ವ"ದ ಕುರಿತು ಏನೆಂದು ಹೇಳುತ್ತಿದ್ದಾರೆ?

· ಇದು ನಿಮಗೆ ಹೇಗೆ ಅನ್ವಯಿಸುವುದು? ಎಂದು ಆಲೋಚಿಸಿ. ದೇವರ ಸಭೆ ಸ್ಥಾಪನೆಗೆ ಕಾಣಿಕೆ ಕೊಡುವ ಶಕ್ತರಾದವರು ಮುಂದೆ ಬರಲು ಪ್ರಾರ್ಥಿಸಿ ಮತ್ತು ನೀವು ಹೇಗೆ ಕೊಡುತ್ತಿದ್ದಿರೆಂದು ಆಲೋಚಿಸಿ.

**3) ಕೊರತೆಯುಳ್ಳ : ಬಡ ಕಾಣಿಕೆ:–**

**ಧರ್ಮೋಪದೇಶ – 15:11**

ದೇಶದಲ್ಲಿ ಯಾವಾಗಲೂ ಬಡವರು ಇರುವರಷ್ಟೆ. ಆದುದರಿಂದ ನೀವು ಸ್ವದೇಶದವರಾದ ಬಡವರಿಗೂ ಗತಿಯಿಲ್ಲದವರಿಗೂ ಕೈ ನೀಡಿ ಸಹಾಯ ಮಾಡಬೇಕೆಂದು ಆಜ್ಞಾಪಿಸಿದ್ದೇನೆ.

**ಜ್ಞಾನೋಕ್ತಿ – 21:13**

ಬಡವನ ಮೊರೆಗೆ ಕಿವಿಮುಚ್ಚಿಕೊಳ್ಳುವವನು ತಾನೇ ಮೊರೆಯಿಡುವಾಗ ಯಾರೂ ಉತ್ತರಕೊಡರು.

**ಯರೆಮಿಯಾ – 22:16**

ದೀನದರಿದ್ರರ ವ್ಯಾಜ್ಯವನ್ನು ತೀರಿಸುತ್ತಿದ್ದನು. ಆಗ ಸುಖವಾಗಿತ್ತು. ನನ್ನನ್ನು ಅರಿಯುವುದೆಂದರೆ ಇದೇ ಎಂಬುದು ಯೆಹೋವನ ನುಡಿ.

ನಿಮ್ಮ ಸಂಪತ್ತು ಕೊರತೆಯುಳ್ಳವರಿಗೆ ಔದಾರ್ಯದಿಂದ ಸಹಾಯ ಮಾಡಲು ಅವಕಾಶ ಒದಗಿಸುತ್ತದೆ.

ದೇವರು ನಮಗೆ ಸಿರಿ–ಸಂಪತ್ತನ್ನು (ಹಣವನ್ನು) ಇನ್ನೊಬ್ಬರಿಗೆ ಸಹಾಯ ಮಾಡಲು ಕೊಟ್ಟಿದ್ದಾರೆ. ಕೇವಲ ತಿಂಗಳಿಗೆ ಒಂದು ಸಾರಿ ತಿಂಗಳ ಕಾಣಿಕೆ ಕೊಡುವುದು ಮಾತ್ರವಲ್ಲ, ಆದರೆ ಕೊರತೆಯುಳ್ಳವರ ಹತ್ತಿರ ಹೋಗಿ ಅವರ ಕೊರತೆಯನ್ನು ನೀಗಿಸಬೇಕು.

**ಉದಾ:–** ನಮ್ಮ ಸುತ್ತಲಿನ ಜನ–ಮನ, ಸಭೆ, ಕಾಲೋನಿ, ಶಾಲೆ, ಕಾಲೇಜು, ಸ್ನೇಹಿತರು, ಸಂಬಂಧಿಕರು.

## ವಾರ – 6

[ದೇವರ ರಾಜ್ಯದ ತರಬೇತಿ ಹಂತ 5: ಆರ್ಥಿಕ ನಂಬಿಕೆ]

## ಆರ್ಥಿಕತೆಯ ಶಿಷ್ಯತ್ವ [ಪರಲೋಕ, ಭೂಲೋಕವಲ್ಲ, ನನ್ನ ಮನೆ]

ಈ 40 ದಿನದ ಪಯಣದಲ್ಲಿ ನಮ್ಮ ಕ್ರಿಸ್ತಿಯ ಜೀವನದಲ್ಲಿ ನಾವು ಹೇಗೆ ನೋಡಬೇಕು. ಹೇಗೆ ಜವಾಬ್ದಾರಿಯುಳ್ಳವರಾಗಿರಬೇಕು ಮತ್ತು ಆರ್ಥಿಕ ವಿಷಯದಲ್ಲಿ ಹೇಗೆ ಕಾರ್ಯ ನಿರ್ವಹಿಸಬೇಕೆಂದು ಸ್ವಲ್ಪವಾಗಿ ವಿಚಾರಿಸುತ್ತಿದ್ದೇವೆ. ಅಥವಾ ಪರಿಶೋಧಿಸುತ್ತಿದ್ದೇವೆ.

ಈ ಶಿರ್ಷಿಕೆ "ಆರ್ಥಿಕ ನಂಬಿಕೆ" ನಮ್ಮ ಜೀವಿತದಲ್ಲಿ ಮನದಟ್ಟು, ನಮ್ಮ ಗುಣ, ನಮ್ಮ ಹವ್ಯಾಸ, ನಮ್ಮ ನಡವಳಿಕೆಯನ್ನು ದೇವರ ಶಕ್ತಿ, ಕೃಪೆ ಮತ್ತು ಆತನ ನಿಯಮಗಳಿಂದ ತುಂಬಿಸುತ್ತದೆ. ಯೇಸುವಿನ ಹಾಗೆ ಜೀವಿಸಲು ದೇವರು ನಮಗೆ ಸಹಾಯಕರಾಗಿದ್ದಾರೆ.

· ಶಿಷ್ಯತ್ವವು ಯಾವಾಗಲೂ ನಮ್ಮ ಆಚಾರಗಳಿಗೆ – ನೇಮ, ನಿಷ್ಠೆಗಳಿಗೆ ವಿರೋಧವಾಗಿದೆ.

· ದೇವರ ಕ್ರಮಬದ್ಧವಾದ ನಿಯಮವು ನಮ್ಮನ್ನು ಎಲ್ಲಾ ರೀತಿಯ ಸುಧಾರಣೆಗೆ ದಾರಿ ತೋರಿಸುತ್ತದೆ. ಆದರೆ ಪ್ರಾಪಂಚಿಕ ಕ್ರಮಬದ್ಧತೆಯು ನಮ್ಮನ್ನು ಪೂರ್ವ ಸಿದ್ಧತೆಯಿಲ್ಲದೆ ಕಾರ್ಯವೆಸಗಿ ತೊಂದರೆಗೊಳಗಾಗಲು ಪರಿಣಾಮಕಾರಿಯಾಗಿದೆ.

· ಈ ದೇವರ ರಾಜ್ಯದ ತರಬೇತಿಯು ನಾವು ವಾಕ್ಯದನುಸಾರವಾಗಿ ಉತ್ತಮರಾಗಲು ನೆರವಾಗುತ್ತದೆ. ಮತ್ತು ದೇವರ ವಾಕ್ಯ ನಮ್ಮ ಜೀವಿತದಲ್ಲಿ ಅಳವಡಿಸಿಕೊಳ್ಳುವಂತೆ ಮಾಡುತ್ತದೆ.

**ವಾರ 1**. ಸಮಸ್ತ ಭೂನಿವಾಸಿಗಳೆಲ್ಲಾ ಯಹೋವನದು.

**ವಾರ 2**. ದೇವರ ಸೇವಕನು ಜ್ಞಾನಿಯುಳ್ಳ ಮತ್ತು ಉತ್ತಮ ನಿರ್ವಾಹಕನು ಆಗಿದ್ದಾನೆ.

**ವಾರ 3**. ಸಾಲ ತೆಗೆದುಕೊಳ್ಳುವವನು ಸಾಲ ಕೊಡುವವನಿಗೆ ದಾಸನಾಗುತ್ತಾನೆ.

**ವಾರ 4**. ನಾವು ಶ್ರೀಮಂತರಾಗಿರುವುದು ಉದಾರವಾಗಿ ಕೊಡುವುದಕ್ಕೆ

**ವಾರ 5**. ದೇವರ ಯೋಜನೆಯ ಪ್ರಕಾರ ನಮ್ಮ ಆರ್ಥಿಕ ಆದಾಯದ ಯೋಜನೆ ಇರಬೇಕೆಂದು ಆತನು ಬಯಸುತ್ತಾನೆ.

**ವಾರ 6**. ಆರ್ಥಿಕತೆಯ ಶಿಷ್ಯತ್ವಕ್ಕೆ ಕ್ರಮಬದ್ಧ ನಿಯಮಗಳು ಸೇರಿರುತ್ತವೆ.

ನಮ್ಮ ಕುಂಟುಂಬ, ನಮ್ಮ ಭವಿಷ್ಯ, ನಮ್ಮ ಕನಸು ಮತ್ತು ನಮ್ಮ ನಿರ್ಧಾರಗಳಿಗೆ ಈ ಕೊನೆಯ ವಾರದ ಆರ್ಥಿಕ ನಂಬಿಕೆ ಪಾಠವು ವಾಕ್ಯದ ಪ್ರಕಾರ ಕ್ರಮಬದ್ಧ ನಿಯಮಗಳನ್ನು ಅಳವಡಿಸಿಕೊಳ್ಳಲು ನೆರವಾಗುತ್ತದೆ.

## ದಿನ – 36

## ನನ್ನ ಆರ್ಥಿಕತೆಯ ಶಿಷ್ಯತ್ವ

**[ನೆನಪಿಡಬೇಕಾದ ವಚನ]**

**ಲೂಕ – 9:24**

ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು. ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು.

· ಕಾಪಾಡುವುದು ಅಥವಾ ಕಳೆಯುವುದು?

ನಮ್ಮ ಜೀವನ ಮಾರ್ಗವನ್ನು ರಕ್ಷಿಸಿಕೊಳ್ಳಲು ಶೋಧನೆಗೊಳಗಾಗುತ್ತೇವೆ. ಆದರೆ ಎಲ್ಲವನ್ನು ದೇವರ ಬಳಿಗೆ ತರಬೇಕು.

ಬೆಳಕಿನಲ್ಲಿ – ಸೈತಾನನು ಕತ್ತಲೆಯನ್ನು ಪ್ರೀತಿಸುತ್ತಾನೆ. ದೇವರು ಬೆಳಕಾಗಿದ್ದಾನೆ! ದೇವರ ಬೆಳಕಿನಲ್ಲಿ ಪ್ರಕಾಶಿಸಲು ನಿರ್ಧರಿಸು. (ಆರ್ಥಿಕತೆಯಲ್ಲಿ)

ಬುದ್ಧಿವಾದ – ಶಿಷ್ಯರಿಂದ ಶಿಷ್ಯತ್ವ ಸಿಗುತ್ತದೆ. ಬುದ್ಧಿವಾದ ಕೇಳುತ್ತಾ ದೇವರಲ್ಲಿ ಬೆಳೆಯುತ್ತಾ ಅಭಿವೃದ್ಧಿ ಹೊಂದುವುದು.

ಆತ್ಮೀಕ ಆಲೋಚನೆ – ಪ್ರಾಪಂಚಿಕವಾದ ನಮ್ಮ ಆಲೋಚನೆಯನ್ನು ಆತ್ಮೀಕವಾಗಿ ಬದಲಾಯಿಸಲು ದೇವರಲ್ಲಿ ಪ್ರಾರ್ಥಿಸುವುದು.

**ಪ್ರಾಯೋಗಿಕ ಅನ್ವೇಷಣೆ**

1) ಸ್ವಾಧೀನತೆ (ದಮೆ)

**ಜ್ಞಾನೋಕ್ತಿ – 25:28**

ಆತ್ಮವನ್ನು ಸ್ವಾಧೀನ ಮಾಡಿಕೊಳ್ಳದವನು ಗೋಡೆ ಬಿದ್ದ ಹಾಳಾದ ಊರಿಗೆ ಸಮಾನ.

ಆರ್ಥಿಕ ಶಿಷ್ಯತ್ವದಲ್ಲಿ ನಾವು ಯಾವುದರ ಬಗ್ಗೆ ದಮೆಯಿಂದಿರಬೇಕು? ಅಥವಾ ಹಿಡಿತವಿರಬೇಕು?

2) ತೃಪ್ತಿ

**ಜ್ಞಾನೋಕ್ತಿ – 30:7–9**

ನಿನ್ನಿಂದ ಎರಡು ವರಗಳನ್ನು ಬೇಡಿಕೊಂಡಿದ್ದೇನೆ. ಅನುಗ್ರಹಿಸದಿರಬೇಡ. ನಾನು ಸಾಯುವುದರೊಳಗಾಗಿ ಅವುಗಳನ್ನು ಕೈಗೂಡಿಸು. ನನ್ನಿಂದ ಕಪಟವನ್ನು ಸುಳ್ಳು ಮಾತನ್ನೂ ತೊಲಗಿಸು. ಬಡತನವನ್ನಾಗಲಿ ಐಶ್ವರ್ಯವನ್ನಾಗಲಿ ಕೊಡದೆ, ನನಗೆ ತಕ್ಕಷ್ಟು ಆಹಾರವನ್ನು ಭೋಜನ ಮಾಡಿಸು. ಹಾಗಾದರೆ ಹೊಟ್ಟೆ ತುಂಬಿದವನಾದರೆ

ಯೆಹೋವನು ಯಾರೋ ಎಂದು ನಿನ್ನನ್ನು ತಿರಸ್ಕರಿಸೇನು. ಬಡವನಾದರೆ ಕಳ್ಳತನ ಮಾಡಿ ನನ್ನ ದೇವರಾದ ನಿನ್ನ ಹೆಸರನ್ನು ಅಯೋಗ್ಯವಾಗಿ ಎತ್ತೇನು.

3) ಉದಾಹರಣೆ:

**1. ಥಸಲೋನಿಕ – 4:11–12**

ನಿಮ್ಮ ಉದಾಹರಣೆ ಗೌರವ, ಮರ್ಯಾದೆಯನ್ನು ಗಳಿಸಲು ಹೇಗೆ ಜವಾಬ್ದಾರಿಯಾಗಿದೆ ಎಂದು ವಿಚಾರಿಸಿ.

**4) ಯಥಾರ್ಥತೆ**

**ರೋಮಾ – 13:1–8**

ಪ್ರತಿ ಮನುಷ್ಯನು ತನ್ನ ಮೇಲಿರುವ ಅಧಿಕಾರಿಗಳಿಗೆ ಅಧೀನನಾಗಿರಲಿ ಯಾಕೆಂದರೆ ದೇವರಿಂದ ಹೊರತು ಒಬ್ಬರಿಗೂ ಅಧಿಕಾರವಿರುವುದಿಲ್ಲ.

(ವ.7) ಅವರವರಿಗೆ ಸಲ್ಲಿಸತಕ್ಕದ್ದನ್ನು ಸಲ್ಲಿಸಿರಿ. ಯಾರಿಗೆ ಕಂದಾಯವೋ ಅವರಿಗೆ ಕಂದಾಯವು, ಯಾರಿಗೆ ಸುಂಕವೋ ಅವರಿಗೆ ಸುಂಕವನ್ನು, ಯಾರಿಗೆ ಭಯವೋ ಅವರಿಗೆ ಭಯವನ್ನು, ಯಾರಿಗೆ ಮರ್ಯಾದೆಯೋ ಅವರಿಗೆ ಮರ್ಯಾದೆಯನ್ನು ಸಲ್ಲಿಸಿರಿ.

## ದಿನ 37:

## ನನ್ನ ಕುಟುಂಬ (ಅವಿವಾಹಿತರು ನಿಮ್ಮ ಆಧ್ಯಾತ್ಮಿಕ ಮತ್ತು ಭೌತಿಕ ಕುಟುಂಬವನ್ನು ಪರಿಗಣಿಸಿ)

1. ನಿಮ್ಮ ಕುಟುಂಬಕ್ಕೆ ಒದಗಿಸಿ. 1 ತಿಮೊಥೆಯನಗೆ 5:4–8 8. ಯಾವನಾದರೂ ಸ್ವಂತದವರನ್ನು, ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೆ ಹೋದರೆ ಅವನು ನಂಬಿಕೆಯನ್ನು ಅಲ್ಲಗಳೆ ದವನು ನಂಬದವನಿಗಿಂತ ಕೆಟ್ಟವನೂ ಆಗಿದ್ದಾನೆ.

ನಿಕಟ ಕುಟುಂಬದ ಆರೈಕೆ ಮಾಡಿ : ತಂದೆ, ತಾಯಿ, ತಾತ, ಅಜ್ಜಿ, ಗಂಡ / ಹೆಂಡತಿ, ಮಕ್ಕಳ, ಸಹೋದರ, ಮತ್ತು ಸಹೋದರಿ. ಈ ವಿಷಯದಲ್ಲಿ ನಿಮಗೆ ಯಾವುದೇ ರೀತಿಯ ಒತ್ತಡ ಇದ್ದು, ಪ್ರಾರ್ಥನೆ ಅಥವಾ ಸಲಹೆ ಪಡೆಯವ ಅಗತ್ಯವಿದೆಯೇ?

2. ಜ್ಞಾನೋಕ್ತಿಗಳು 31 ಮಹಿಳೆ. ಜ್ಞಾನೋಕ್ತಿಗಳು 31:15–27 ನೀವು ಆಕೆಯ ಉದಾಹರಣೆಯನ್ನು ಹೇಗೆ ಅನುಕರಿಸುತ್ತೀರಾ?

ವ.15 ಆಕೆಯು ಇನ್ನೂ ಕತ್ತಲಿರುವಾಗಲೇ ಎದ್ದು ತನ್ನ ಮನೆಯವರಿಗೆ ಆಹಾರವನ್ನು ಕೊಟ್ಟು ತನ್ನ ದಾಸಿಯರಿಗೆ ಭತ್ಯವನ್ನು ಹಂಚುತ್ತಾಳೆ.

ವ.16 ಆಕೆಯು ಯೋಚಿಸಿ ಹೊಲವನ್ನು ಕೊಂಡುಕೊಳ್ಳುತ್ತಾಳೆ; ತನ್ನ ಕೈಕೆಲಸದ ಫಲದಿಂದ ಆಕೆಯು ದ್ರಾಕ್ಷಾಲತೆಗಳನ್ನು ನೆಡುತ್ತಾಳೆ.

ವ.20 ಆಕೆಯು ಬಡವರಿಗಾಗಿ ಕೈ ಬಿಚ್ಚುತ್ತಾಳೆ; ಹೌದು, ದಿಕ್ಕಿಲ್ಲದವರಿಗೆ ಆಕೆಯು ಕೈ ನೀಡುತ್ತಾಳೆ.

ವ.25 ಆಕೆಯ ಉಡುಪು ಬಲವೂ ಘನತೆಯೂ ಆಗಿವೆ; ಭವಿಷ್ಯತ್ತಿ ನಲ್ಲಿ ಆಕೆಯು ಸಂತೋಷಿಸುವಳು.

ವ.27 ಆಕೆಯು ತನ್ನ ಗೃಹಕೃತ್ಯಗಳ ನ್ನೆಲ್ಲಾ ಚೆನ್ನಾಗಿ ನೋಡಿಕೊಂಡವಳಾಗಿ ಸೋಮಾರಿ ತನದ ರೊಟ್ಟಿಯನ್ನು ತಿನ್ನುವದಿಲ್ಲ.

ಇದರಿಂದ ನನಗೆ ಅರ್ಥವಾಗುವುದೇನೆಂದರೆ

________________________________________

________________________________________

________________________________________

3. ಪಾರಂಪರಿಕ ಹಣಕಾಸು. ಜ್ಞಾನೋಕ್ತಿಗಳು 13:22 ಒಳ್ಳೆಯವನು ಮೊಮ್ಮಕ್ಕಳಿಗೆ ಆಸ್ತಿಯನ್ನು ಬಿಡುವನು; ಪಾಪಿಯ ಸೊತ್ತು ನೀತಿ ವಂತರಿಗೆ ಇಡಲ್ಪಟ್ಟಿದೆ.

ಸಣ್ಣ ಕನಸು ಕಾಣುವುದು: ಮುಂದಿನ ಪೀಳಿಗೆಗೆ ನೀವು ಯಾವ ರೀತಿಯ ಪಾರಂಪರಿಕ ಹಣಕಾಸು ಬಿಟ್ಟು ಹೋಗಲು ಬಯಸುತ್ತೀರಿ?

## ದಿನ 38:

## ನನ್ನ ಕೆಲಸ  (ವಿದ್ಯಾರ್ಥಿಗಳಿಗೆ, ಇದು ಶಾಲಾಕೆಲಸ)

1. ಉದ್ಯೋಗಕ್ಕಾಗಿ ಸೃಷ್ಟಿಸಲ್ಪಟ್ಟಿರುವಿರಿ. ಆದಿಕಾಂಡ 2:15. ಆಗ ಕರ್ತನಾದ ದೇವರು ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟ ವನ್ನು ವ್ಯವಸಾಯ ಮಾಡುವದಕ್ಕೂ ಕಾಯುವದಕ್ಕೂ ಅದರಲ್ಲಿ ಇಟ್ಟನು.

2. ನಮ್ಮ ಕೆಲಸದಲ್ಲಿ ತೃಪ್ತಿ. ಪ್ರಸಂಗಿ3: 22. ಆದಕಾರಣ ಮನುಷ್ಯನು ತನ್ನ ಸ್ವಂತ ಕೆಲಸಗಳಲ್ಲಿ ಆನಂದಿಸುವದಕ್ಕಿಂತ ಒಳ್ಳೆಯದು ಯಾವದೂ ಇಲ್ಲ ವೆಂದು ನಾನು ಗ್ರಹಿಸುತ್ತೇನೆ; ಅದೇ ಅವನ ಪಾಲು; ಅದರಿಂದ ತನ್ನ ಜೀವಮಾನದ ನಂತರ ಸಂಭವಿಸುವದನ್ನು ನೋಡುವಂತೆ ಯಾವನು ಅವನನ್ನು ಪುನಃ ಬರಮಾಡುತ್ತಾನೆ.?

3. ಅತಿಯಾಗಿ ಕೆಲಸ ಮಾಡಬೇಡಿ! ಜ್ಞಾನೋಕ್ತಿಗಳು 23:4–7 (4–5) 4 ಐಶ್ವರ್ಯ ವಂತನಾಗುವದಕ್ಕೆ ಪ್ರಯಾಸಪಡಬೇಡ; ನಿನ್ನ ಸ್ವಂತ ಜ್ಞಾನವನ್ನು ಬಿಟ್ಟುಬಿಡು.

ವ.5 ಇಲ್ಲದಿರುವದರ ಮೇಲೆ ನಿನ್ನ ದೃಷ್ಟಿಯನ್ನು ಇಡುವಿಯಾ? ಐಶ್ವರ್ಯವು ನಿಸ್ಸಂದೇಹವಾಗಿ ರೆಕ್ಕೆಗಳನ್ನು ಕಟ್ಟಿಕೊಂಡು ಹದ್ದಿನಂತೆ ಆಕಾಶದ ಕಡೆಗೆ ಹಾರಿಹೋಗುತ್ತದೆ.

4. ಆಲಸ್ಯವಾಗಿರುವುದಕ್ಕೆ ಯಾವುದೇ ನೆಪ ಬೇಡ 2 ಥೆಸಲೊನೀಕದವರಿಗೆ 3:10. ಇದಲ್ಲದೆ ನಾವು ನಿಮ್ಮ ಸಂಗಡ ಇದ್ದಾಗ ಕೆಲಸ ಮಾಡಲೊಲ್ಲದವನು ಊಟ ಮಾಡಬಾರದೆಂದು ನಿಮಗೆ ಆಜ್ಞಾಪಿಸಿದೆವಷ್ಟೆ.

5. ನಮ್ಮ ನಿಜವಾದ ಯಜಮಾನರಿಗೆ ತುಂಬು ಹೃದಯದಿಂದ ಕೆಲಸ ಮಾಡಿ ಕೊಲೊಸ್ಸೆಯವರಿಗೆ 3: 23–24 23. ನೀವು ಯಾವದನ್ನು ಮಾಡಿದರೂ ಅದನ್ನು ಮನುಷ್ಯರಿ ಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಹೃದಯಪೂರ್ವಕವಾಗಿ ಮಾಡಿರಿ; 24. ಕರ್ತನಿಂದ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವರೆಂದು ತಿಳಿದಿದ್ದೀರಲ್ಲಾ. ಯಾಕಂದರೆ ನೀವು ಕರ್ತನಾದ ಕ್ರಿಸ್ತನನ್ನು ಸೇವಿಸುವವರಾಗಿದ್ದೀರಿ.

6. ಸಮಗ್ರತೆ ಎಫೆಸದವರಿಗೆ 4:28. ಕಳವು ಮಾಡುವವನು ಇನ್ನು ಮೇಲೆ ಕಳವು ಮಾಡದೆ ಕೈಯಿಂದ ಯಾವದಾದರೊಂದು ಒಳ್ಳೇ ಉದ್ಯೋಗವನ್ನು ಮಾಡಿ

ದುಡಿಯಲಿ; ಆಗ ಕೊರತೆಯಲ್ಲಿರುವವರಿಗೆ ಕೊಡು ವದಕ್ಕೆ ಅವನಿಂದಾಗುವದು.

7. ಯಾವುದೇ ರಾಜಿ ಬೇಡ. ಅಪೊಸ್ತಲರ ಕೃತ್ಯಗಳು 5:29 ಆಗ ಪೇತ್ರನೂ ಉಳಿದ ಅಪೊಸ್ತಲರೂ ಪ್ರತ್ಯುತ್ತರವಾಗಿ ನಾವು ಮನುಷ್ಯರಿಗಿಂತ ದೇವರಿಗೆ ವಿಧೇಯರಾಗತಕ್ಕದ್ದು.

ಪ್ರಾರ್ಥಿಸಿ, ಕನಸು ಕಾಣಿ, ಮತ್ತು ಬೆಳೆಯಿರಿ (ನಿಮ್ಮ ಕೆಲಸ / ವೃತ್ತಿಜೀವನದ ಬಗ್ಗೆ)

1. ದೇವರು ನಮ್ಮಿಂದ ಸ್ವಚ್ಛ ಸ್ಲೇಟ್ ಮತ್ತು ಸ್ಪಷ್ಟ ಆತ್ಮಸಾಕ್ಷಿಯನ್ನು ಹೊಂದಬೇಕೆಂದು ಬಯಸುತ್ತಾರೆ. ಸೈತಾನನು ನಿಮ್ಮನ್ನು ಕೆಲಸಕ್ಕೆ ಸಂಬಂಧಿಸಿದ ಪಾಪದ ಕಾರ್ಯ ಅಥವಾ ನಿಷ್ಠಾವಂತಿಕೆಗೆ ರಾಜಿಯಾಗುವ ಹಾಗೆ ನಡೆದುಕೊಳ್ಳುವದ್ದಕ್ಕೆ ಬಳಸಿಕೊಂಡಿದ್ದರೆ (ಶಾಲೆಯಲ್ಲಿ ಮೋಸ ಮಾಡಿದ್ದರೂ), ಅದರ ಬಗ್ಗೆ ಅರಿಕೆ ಮಾಡಿ ಪ್ರಾರ್ಥಿಸಿ.

2. ನಿಮಗೆ ದೇವರು ಕೊಟ್ಟಿರುವ ಪ್ರತಿಭೆಯನ್ನು ಉಪಯೋಗಿಸಲು ಮತ್ತು ತೃಪ್ತಿ ಕೊಡುವ ಕನಸಿನ ಕೆಲಸ ಯಾವುದು?

3. ನಿಮ್ಮ ವೃತ್ತಿಯನ್ನು ದೇವರಿಗೋಸ್ಕರ ಉಪಯೋಗಿಸುವುದು ಹೇಗೆಂದು, ಆಧ್ಯಾತ್ಮಿಕ ಮನಸ್ಸುಳ್ಳ ಮಾರ್ಗದರ್ಶಕನನ್ನು ಕಂಡುಹಿಡಿದು ಅವರ ಜೊತೆ ಚರ್ಚೆ ಮಾಡಿ.

4. ನಿಮ್ಮ ನಿಜವಾದ ಒಡೆಯರಾಗಿರುವ ಯೇಸುವಿನ ದೃಷ್ಟಿ ಪ್ರಕಾರ, ಒಂದು ಅತ್ಯುತ್ತಮ, ಸ್ಫೂರ್ತಿದಾಯಕ ಪ್ರದರ್ಶನ/ಕೆಲಸದ ಮೌಲ್ಯಮಾಪನವನ್ನು ಬರೆಯಿರಿ. ಅದರ ಪ್ರಕಾರ ಜೀವಿಸಿ!

5. ದೇವರ ತೇಜೋಮಯಕ್ಕಾಗಿ, ನಮ್ಮ ಮಹತ್ವಾಕಾಂಕ್ಷೆ ಮತ್ತು ಪ್ರಭಾವವನ್ನು ಕೆಲಸದಲ್ಲಿ ಉಪಯೋಗಿಸಲು ದೇವರು ಸಹಾಯ ಮಾಡಬೇಕೆಂದು ಪ್ರಾರ್ಥಿಸಿ.

6. ನಿಮಗೆ ದೇವರು ಕೊಟ್ಟಿರುವ ಪ್ರತಿಭೆಯನ್ನು ಇನ್ನು ಹೆಚ್ಚಾಗಿ ಅವರ ರಾಜ್ಯದಲ್ಲಿ ಉಪಗೋಗಿಸಬಹುದು ಎಂದು ಅನಿಸುತ್ತದೆಯೆ?

## ದಿನ 39:

## ನನ್ನ ಕನಸು

ಜ್ಞಾನೋಕ್ತಿಗಳು 28:11 ತನ್ನ ಸ್ವಂತ ಅಭಿಪ್ರಾಯದಲ್ಲಿ ಐಶ್ವರ್ಯವಂತನು ಜ್ಞಾನಿಯಾಗಿದ್ದಾನೆ; ವಿವೇಕಿಯಾದ ಬಡವನು ಅವನನ್ನು ಪರೀಕ್ಷಿಸುತ್ತಾನೆ.

ಈ ಪುಸ್ತಕದ ಆಲೋಚನೆಗಳನ್ನು ಪರಿಗಣಿಸಿ: ಕಡಿಮೆಯಿಂದ ಜೀವಿಸುವುದು: ಮಾರ್ಕ್ ಟ್ಯಾಬ್ಬ್ ಬರೆದ "ನಿಮ್ಮ ಜೀವನದಲ್ಲಿ ಕಡಿಮೆ ಮಾಡಿದಾಗ ಆಗುವ ಮೇಲುಗಳು"

"ಜೀವನವು ಈಡೇರಿಸುವ ಸಲುವಾಗಿ ವಿನ್ಯಾಸಗೊಂಡಿಲ್ಲ". ಅರ್ಥ ಹುಡುಕಲು, ನೀವು ದೇವರ ಕಡೆ ತಿರುಗಬೇಕು. ನೀವು ನಿಮ್ಮ ಜೀವದಲ್ಲಿ ಸಮಯ / ಸಾಮಗ್ರಿಗಳೊಂದಿಗೆ ತುಂಬಿಕೊಂಡರೆ, ಅದು ನಿಮ್ಮ ಜೀವನವನ್ನು ತುಂಬುವುದಿಲ್ಲ. ದೇವರ ಯೋಜನೆ: ನಿಮ್ಮ ಮನೆ ಸ್ವರ್ಗದಲ್ಲಿ; ನಾವು ಅವರ ಭಾವಚಿತ್ರದಲ್ಲಿಯೇ ಸೃಷ್ಟಿಯಾಗಿದ್ದೇವೆ. ದೇವರು ನಮಗೆ ಕೊಡುವ ಸವಾಲಿನ ರಸ್ತೆ ನನ್ನನ್ನು ಕಡಿಮೆ ಮಾಡಿಕೊಂಡು ಜೀವಿಸುವುದೇ. ಚಾರ್ಲ್ಸ್ ಸ್ಪರ್ಜನ್ ಹೇಳಿದರು, "ನಿಮ್ಮ ಹೆಸರನ್ನು ಹೃದಯದಲ್ಲಿ ಕೊರೆಯಿಸಿಕೊಳ್ಳಿ, ಅಮೃತಶಿಲೆಯ ಮೇಲಲ್ಲ". ನಾವು ಅಚ್ಚಳಿಯದ ಪ್ರಭಾವ ಬೀರಬೇಕಾದರೆ, ಕ್ರಿಸ್ತನನ್ನು ಅನುಕರಿಸಬೇಕು:

1. ಅಮೂಲ್ಯವನ್ನು ಮೌಲಿಸಿ
2. ದೇವರ ಸಮಗ್ರತೆಯನ್ನು ಅನುಕರಿಸು
3. ತೀವ್ರಾಸಕ್ತಿ – ಹೃದಯ ಹೂಡಿಕೆ
4. ಸಾಮೀಪ್ಯ – ಸಮಯ ಉಪಯೋಗಿಸಿ

ಸ್ನಾನಿಕನಾದ ಯೋಹಾನ ಅರಿತುಕೊಂಡ, "ಅವರು ಹೆಚ್ಚಬೇಕು; ನಾನು ಕಡಿಮೆಯಾಗಬೇಕು" ಯೋಹಾನ 3:30

ಯಾಕೋಬ ಬೋಧಿಸಿದರು "ನಿಮ್ಮ ಜೀವನದ ಒಂದು ಮಂಜು ಮಾತ್ರ" (ಯಾಕೋಬ 4: 13–17)

ನಮ್ಮ ಸವಾಲು, ನಮ್ಮ ಜೀವನದಲ್ಲಿ ದೇವರ ಇಚ್ಛೆಯ ಪ್ರಕಾರ ನಡೆಸಿಕೊಂಡು

ಹೋಗುವುದು.

**ಒಂದು "ಸರಳ" ಜೀವನವನ್ನು ಜೀವಿಸಲು 10 ಪ್ರಾಯೋಗಿಕ ರೀತಿಗಳು:**

1. ಮೀರಿ, ನಿಮ್ಮ ಜೀವನದಲ್ಲಿ ಸೀಮಿತಕ್ಕೆ ತಕ್ಕ ಹಾಗೆ ಜೀವಿಸಿ, ಸೀಮಿತ ಮೀರಿ ಅಲ್ಲ

2. ವಸ್ತುಗಳನ್ನು ಅವುಗಳ ಉಪಯುಕ್ತತೆಕಾಗಿ ಖರೀದಿಸಿ ಸ್ಥಾನಮಾನಕ್ಕಾಗಲ್ಲ

3. ಪ್ರಚೋದನಾಕಾರಿಯನ್ನು ನಂಬ ಬೇಡಿ – ಮಾಧ್ಯಮ / ಜಾಹೀರಾತು

4. ವಸ್ತುಗಳನ್ನು ಸಂಗ್ರಹಿಸಿಕೊಳ್ಳಬೇಡಿ, ಅದನ್ನು ಕೊಟ್ಟುಬಿಡಿ

5. ಬುದ್ಧಿವಂತಿಕೆಯಿಂದ ಖರ್ಚು. ನಿಮ್ಮ ಹಣ = ದೇವರ ಆಸ್ತಿ

6. ದುಂದುಗಾರಿಕೆಗೆ ಅವಕಾಶ

7. ಜನರಲ್ಲಿ ಸಂಪನ್ಮೂಲಗಳನ್ನು ಹೂಡಿಸಿ, ವಸ್ತುಗಳಲ್ಲ. ಯೋಚಿಸಿ, ನಿಮ್ಮನ್ನು ಯಾವುದು ಜನರ ಹತ್ತಿರ ಸೆಳೆಯುವುದು?

8. ನಿಮ್ಮ ಸ್ಥಳೀಯ ಸಭೆಗಳಲ್ಲಿ ಹೂಡಿ

9. ನೀವು ದೇವರಿಂದ ಪಡೆದಿರುವ ಉಡುಗೊರೆಯನ್ನು ಆನಂದಿಸಿ (ಯಾಕೋಬ 1:17, ಪ್ರಸಂಗಿ 3:13)

10. ಬರಿ ನಿಯಮಬದ್ದರಾಗಿರುವುದು ಬಿಟ್ಟುಬಿಡಿ.

**ಪ್ರತಿಫಲನ:** ನಿಮ್ಮ ಜೀವನದಲ್ಲಿ ಈ ವಿಷಯಗಳನ್ನು ಅನ್ವಯಿಸುವ ಕೆಲವು ವಿಧಾನಗಳು ಯಾವುವು?

## ದಿನ 40:

## ನನ್ನ ನಿರ್ಧಾರಗಳು

ಜ್ಞಾನೋಕ್ತಿಗಳು3:9 ನಿನ್ನ ಆಸ್ತಿಯಿಂದಲೂ ಅಭಿವೃದ್ಧಿಯ ಎಲ್ಲಾ ಪ್ರಥಮ ಫಲಗಳಿಂದಲೂ ಕರ್ತನನ್ನು ಸನ್ಮಾನಿಸು.

ಯಾಕೋಬನು1:27. ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ.

**ಹತ್ತು ಹಣಕಾಸಿನ ಅನುಯಾಯಿತನ ನಿರ್ಧಾರಗಳ**

1. ನಿಮ್ಮ ಸಂಪತ್ತಿನಿಂದ ದೇವರನ್ನು ಗೌರವಿಸಿ – ಜ್ಞಾನೋಕ್ತಿಗಳು3:9

ನಾನು ದೇವರ ವಾಕ್ಯಗಳನ್ನು ಅನುಸರಿಸಲೇಬೇಕೆಂದು ಬಲಿದಾನವಾಗಿ ಕಾಣಿಕೆ ಕೊಡುವಿರಾ – ಕನಿಷ್ಠ ದಶಾಂಶ?

ನನ್ನ ವಾರದ ಕೊಡುಗೆ ರೂ. __________ / ವಾರಕ್ಕೆ. ಇದು ನನ್ನ ಆದಾಯದ _________%.

ಪಕ್ವವಾದ ಕ್ರೈಸ್ತರು ನಾನು ನನ್ನ ಕೊಡುಗೆ ರೂ ______ ಹೆಚ್ಚಿಸುತ್ತೇನೆ

2. ಹೃದಯವನ್ನು ಕಾಪಾಡಿಕೋ? ಜ್ಞಾನೋಕ್ತಿಗಳು 4:23

ನಾನು ನನ್ನ ಹಣಕಾಸು ಸಂಬಂಧಿಸಿದಂತೆ ಯಾವ ಹೃದಯ ಪಾಪಗಳನ್ನು ಗುರುತಿಸಿದೆ– ದುರಾಶೆ, ಸೋಮಾರಿತನ, ಸಲಹೆ ಪಡೆಯದೇ ಇರುವುದು, ಜವಾಬ್ದಾರಿ ತೆಗೆದುಕೊಳ್ಳದೆ ಇರುವುದು, ಅಸಡ್ಡೆ ಖರ್ಚು, ಇತ್ಯಾದಿ?

3. ಒಂದು ಜೀವಂತ ತ್ಯಾಗಿ ಆಗಿ? ರೋಮಾಪುರದವರಿಗೆ 12:1–2

ನಾನು ದೇವರ ರಾಜ್ಯದ ಪ್ರಗತಿಗೋಸ್ಕರ ಯಾವ ರೀತಿಯ ಬಲಿದಾನ ಜೀವನ ಜೀವಿಸಬಹುದು?

4. ನೀಡಿ ಮತ್ತು ಅದು ನಮಗೆ ನೀಡಲಾಗುವುದು – ಲೂಕ 6:38

ನಾನು ಹೇಗೆ ನಂಬಿಕೆಯಿಂದ ಕೊಡಬಹುದು ಮತ್ತು ದೇವರ ಪ್ರತಿಕ್ರಿಯೆ ಹೇಗಿರುತ್ತೆ ?

5. ಸ್ವಶಿಸ್ತಿನ ಆತ್ಮ ಅಭಿವೃದ್ಧಿಗೊಳಿಸಿ – 2 ತಿಮೊಥೆಯನಿಗೆ 1:7

ನಾನು ಖರ್ಚಿನ ಅಂದಾಜುಪಟ್ಟಿ ತಯಾರಿಸಿ, ಅದರ ಪ್ರಕಾರ ನಡೆದು ಕೊಳ್ಳುವೆನಾ?

6. ಸಲಹೆ ಪಡೆಯಿರಿ – ಜ್ಞಾನೋಕ್ತಿಗಳು 12:15

ನನ್ನ ಆರ್ಥಿಕ ಸಲಹೆಗಾರರು? ನಾನು ಅವರನ್ನು ಮತ್ತೆ ಯಾವಾಗ ಭೇಟಿ ಯಾಗುತ್ತೇನೆ?

7. ಸಾಲ ಮುಕ್ತರಾಗಿ ? ರೋಮಾಪುರದವರಿಗೆ 13:8; ಜ್ಞಾನೋಕ್ತಿಗಳು 6:1–5; ಜ್ಞಾನೋಕ್ತಿಗಳು 22:7

ನನ್ನ ಜೀವನದಲ್ಲಿ ಸಾಲಮುಕ್ತರಾಗಲು ನನ್ನ ಯೋಜನೆ ಏನು?

8. ಜವಾಬ್ದಾರಿ ತೆಗೆದುಕೊಂಡು ಪಶ್ಚಾತ್ತಾಪ ಪಡಿ ? ಲೂಕ 19:8

ನಾನು ನನ್ನ ಹಣಕಾಸು ನಿರ್ವಹಿಸುವ ವಿಧಾನ ಆಮೂಲಾಗ್ರ ಬದಲಾವಣೆ ಮಾಡಿದರೆ, ನನ್ನ ಜೀವನ ಯಾವ ರೀತಿ ಇರಬಹುದು?

9. ವಿಶ್ವಕ್ಕೆ ಒಂದು ಬೆಳಕಾಗಿರಿ? ಮತ್ತಾಯ 5:14

ನಾನು ಕೆಲಸದಲ್ಲಿ ಅಂತಹುದು ಏನು ಮಾಡಿದರೆ ಎಲ್ಲರಿಗೂ ಹೆಚ್ಚಳದ ಕರೆ ಯಾಗಬಹುದು?

ಇತರ ಶಿಷ್ಯರಿಗೆ ನಾನು ನನ್ನ ಹಣಕಾಸು ವಿಷಯದಲ್ಲಿ ಉದಾಹರಣೆಯಾಗಿದ್ದು ಅವರಿಗೆ ಈ ವಿಷಯದಲ್ಲಿ ನಾಯಕರಾಗಿರಬಹುದಾ?

10. ಪರಿಣಾಮಕಾರಿಯಾಗಲು ಕನಸು ಕಾಣಿ ? ಯಾಕೋಬ 1:27

ನೀವು ಜನರ ಮೇಲೆ ಶಾಶ್ವತ ಪರಿಣಾಮ ಬೀರಲು, ನಿಮ್ಮ ಹಣಕಾಸಿನ ನಿರ್ವಹಣೆಯಲ್ಲಿ ಎಂಥಹ ಬದಲಾವಣೆ ಮಾಡುವಿರಿ ?

ನೀವು ಒಂದು ಮಗುವನ್ನು ದತ್ತು ತೆಗೆದುಕೊಳ್ಳಲು ಅಥವಾ ಯಾವುದಾದರೂ ಒಂದು ಮಗುವಿನ ಶಿಕ್ಷಣ ಪೋಷಕ ಸಹಾಯ ಮಾಡಲು ಪರಿಗಣಿಸಿದ್ದೀರಾ ?

ನೀವು ಮತ್ತೊಂದು ನಗರ ಅಥವಾ ದೇಶದಲ್ಲಿ ಒಂದು ಧರ್ಮಪ್ರಚಾರಕ ಕೆಲಸಕ್ಕೆ ಬೆಂಬಲ ನೀಡಬಹುದಾ ?

ನೀವು ಒಂದು ಮಿಷನ್ ತಂಡದ ಕಳುಹಿಸಲು ಹಣಸಹಾಯ ಮಾಡುವ ಸಾಧಕ ಹೊಂದಿದ್ದೀರಾ?

ನಿಮ್ಮ ಆಸ್ತಿಯನ್ನು ಮಾರಾಟ ಮಾಡಿ, ಮತ್ತೊಂದು ನಗರದಲ್ಲಿ ಹೊಸ ಸಭೆ ಸ್ಥಾಪನೆ ಮಾಡಲು ಸಹಾಯ ಮಾಡಲು ಪರಿಗಣಿಸುವಿರಾ?

ಜ್ಞಾನೋಕ್ತಿಗಳು11:25 ಉದಾರಿಯು ಪುಷ್ಟನಾಗುವನು; ನೀರು ಹಾಯಿಸುವವನಿಗೆ ನೀರು ದೊರೆಯುವದು.

# ಕೌಟಂಬಿಕ ಮುಂಗಡಪತ್ರ

| ಆದಾಯ | ವಾರ್ಷಿಕ | ತಿಂಗಳಿಗೆ |
|---|---|---|
| ಆದಾಯ ಮೊತ್ತ – ಪತಿ | ರೂ. 120,000 | ರೂ.10,000 |
| ಆದಾಯ ಮೊತ್ತ – ಪತ್ನಿ | ರೂ. 60,000 | ರೂ.5,000 |
| ಇತರೆ ಆದಾಯ – 1 | ರೂ. 0 | |
| ಇತರೆ ಆದಾಯ – 2 | ರೂ. 0 | |
| ಇತರೆ ಆದಾಯ – 3 | ರೂ. 0 | |
| **ಒಟ್ಟು ಆದಾಯ** | **ರೂ. 180,000** | **ರೂ. 15,000** |

| ಸಾಲ/ ಇ.ಎಂ.ಐ | ವಾರ್ಷಿಕ | ತಿಂಗಳಿಗೆ |
|---|---|---|
| ಇ.ಎಂ.ಐ 1 | ರೂ.6,000 | ರೂ.500 |
| ಇ.ಎಂ.ಐ 1 | ರೂ.0 | ರೂ.0 |
| ಇ.ಎಂ.ಐ 1 | ರೂ.0 | ರೂ.0 |
| ಸಾಲ 1 | ರೂ.24,000 | ರೂ.2,000 |
| ಸಾಲ 2 | ರೂ.12,000 | ರೂ.1,000 |
| ಸಾಲ 3 | ರೂ.0 | ರೂ.0 |
| ಸಾಲ 4 | ರೂ.0 | ರೂ.0 |
| ಒಟ್ಟು | ರೂ.42,000 | ರೂ.3,500 |

| ಖರ್ಚು | | |
|---|---|---|
| ಕೇಬಲ್ ಟಿ.ವಿ | ರೂ.2,400 | ರೂ.200 |
| ತಿಂಗಳ ಕಾಣಿಕೆ – ಪತಿ | ರೂ.12,000 | ರೂ.1,000 |
| ತಿಂಗಳ ಕಾಣಿಕೆ – ಪತ್ನಿ | ರೂ.6,000 | ರೂ.500 |
| ದೀನರಿಗೋಸ್ಕರ ಕಾಣಿಕೆ | ರೂ.300 | ರೂ.25 |
| ವಿಷೇಶ ಕಾಣಿಕೆ | ರೂ.3,000 | ರೂ.250 |
| ವಿದ್ಯುತ್ | ರೂ.3,600 | ರೂ.300 |
| ಸಾಲ ಮತ್ತು ಇ.ಎಂ.ಐ | ರೂ.42,000 | ರೂ.3,500 |
| ಗ್ಯಾಸ್ | ರೂ.3,960 | ರೂ.330 |
| ದಿನಸಿ ಪಡಿತರ | ರೂ.18,000 | ರೂ.1,500 |
| ಮನೆಕೆಲಸದವರ ಕೂಲಿ | ರೂ.0 | ರೂ.0 |
| ಆದಾಯ ತೆರಿಗೆ | ರೂ.0 | ರೂ.0 |
| ಬಂಡವಾಳ ಒಟ್ಟು | ರೂ.12,000 | ರೂ.1,000 |
| ಮಗು 1 ಶಾಲೆಯ ಖರ್ಚು | ರೂ.6,000 | ರೂ.500 |
| ಮಗು 2 ಶಲೆಯ ಖರ್ಚು | ರೂ.6,000 | ರೂ.500 |
| ವೈದ್ಯಕೀಯ | ರೂ.4,800 | ರೂ.400 |
| ಹಾಲು | ರೂ.3,600 | ರೂ.300 |
| ಇತರರೆ ಖರ್ಚು/ಉಳಿತಾಯ | ರೂ.540 | ರೂ.45 |
| ದೂರವಾಣಿ | ರೂ.2,400 | ರೂ.200 |
| ಮಾಸಿಕ ಪ್ರಯಾಣ | ರೂ.9,600 | ರೂ.800 |
| ಸ್ವಂತಸ್ಥಳ/ತುರ್ತು/ರಜೆ | ರೂ.6000 | ರೂ.500 |
| ಪೇಪರ್/ಪತ್ರಿಕೆ | ರೂ.0 | |
| ಪೋಷಕರಿಗೆ | ರೂ.6,000 | ರೂ.500 |
| ಬಾಡಿಗೆ | ರೂ.24,000 | ರೂ.2,000 |
| ಧ್ಯಾನ ಕೂಟ | ರೂ.3,000 | ರೂ.250 |
| ನೀರು | ರೂ.2,400 | ರೂ.200 |
| ಪತ್ನಿ ಭತ್ಯ | ರೂ.2,400 | ರೂ.200 |
| ಒಟ್ಟು ಖರ್ಚು | ರೂ.180,000 | ರೂ.15,000 |

| ಬಂಡವಾಳ | ವಾರ್ಷಿಕ | ತಿಂಗಳಿಗೆ |
|---|---|---|
| ಬಂಡವಾಳ1 | ರೂ.6,000 | ರೂ.500 |
| ಬಂಡವಾಳ2 | ರೂ.6,000 | ರೂ.500 |
| ಬಂಡವಾಳ3 | ರೂ.0 | ರೂ.0 |
| ಬಂಡವಾಳ4 | ರೂ.0 | ರೂ.0 |
| ಬಂಡವಾಳ5 | ರೂ.0 | ರೂ.0 |
| ಒಟ್ಟು | ರೂ.12,000 | ರೂ.1,000 |

| ಹೆಚ್ಚುವರಿ/ಕೊರತೆ | ರೂ.0 | ರೂ.0 |
|---|---|---|